ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಫೆಬ್ರವರಿ 6 ಗುರುವಾರ 2025


45

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 289 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮಹಾ ಕುಂಭಮೇಳ: ರುದ್ರಾಕ್ಷಿ ಮಾಲೆ ಧರಿಸಿ ತ್ರಿವೇಣಿ ಸಂಗಮದಲ್ಲಿ ಮೋದಿ ಪುಣ್ಯಸ್ನಾನ




ಪ್ರಯಾಗ್‌ರಾಜ್: 144 ವರ್ಷಗಳ ಬಳಿಕ ನಡೆಯುತ್ತಿರುವ ಮಹಾ ಕುಂಭ ಮೇಳದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರಿಂದು ಪುಣ್ಯಸ್ನಾನ ಮಾಡಿದ್ದಾರೆ. ಬೆಳಗ್ಗೆ 11.30 ಗಂಟೆ ಸುಮಾರಿಗೆ ಬೋಟ್ ಮೂಲಕ ಪ್ರಯಾಗ್‌ರಾಜ್‌ನ ತ್ರಿವೇಣಿ ಸಂಗಮ್‌ಘಾಟ್‌ಗೆ ತೆರಳಿದ ಮೋದಿ, ಕೊರಳಲ್ಲಿ ರುದ್ರಾಕ್ಷಿ ಮಾಲೆ, ಕೇಸರಿ ಹಾಗೂ ಕಡುನೀಲಿ ವಸ್ತ್ರ ಧರಿಸಿ ಪುಣ್ಯಸ್ನಾನ ಮಾಡಿದ್ದಾರೆ. ಇದೇ ವೇಳೆ ರುದ್ರಾಕ್ಷಿ ಮಾಲೆಯನ್ನು ಹಿಡಿದು ಸೂರ್ಯದೇವ ಹಾಗೂ ಗಂಗಾ ಮಾತೆಗೆ ನಮಿಸಿದ್ದಾರೆ.

ಪ್ರಯಾಗ್‌ರಾಜ್‌ನ ಸಂಗಮ ಘಾಟ್‌ನ ತ್ರಿವೇಣಿ ಸಂಗಮದಲ್ಲಿ ಮಿಂದೆದ್ದ ಪ್ರಧಾನಿ ಮೋದಿ ಪವಿತ್ರ ಗಂಗಾ ಜಲಕ್ಕೆ ಅರ್ಘ್ಯ ಬಿಟ್ಟು, ಸುತ್ತು ಬಂದು ಕಣ್ಣುಮುಚ್ಚಿ ನೀರಿನ ಮಧ್ಯೆ ನಿಂತು ರುದ್ರಾಕ್ಷಿ ಮಾಲೆ ಹಿಡಿದುಕೊಂಡು ಧ್ಯಾನ ಮಾಡಿದರು. ನಂತರ ಗಂಗಾಮಾತೆಗೆ ಮತ್ತು ಸೂರ್ಯದೇವನಿಗೆ ಆರತಿ ಬೆಳಗಿ ಪೂಜೆ ಸಲ್ಲಿಸಿದರು. ಇದಕ್ಕೂ ಮುನ್ನ ಮೋದಿ ಅವರ ವಿಮಾನ ಬಮ್ರೌಲಿ ವಿಮಾನ ನಿಲ್ದಾಣಕ್ಕೆ ಬಂದಿತ್ತು. ಈ ವೇಳೆ ರಾಜ್ಯಪಾಲೆ ಆನಂದಿಬೆನ್ ಪಟೇಲ್, ಸಿಎಂ ಯೋಗಿ ಮತ್ತು ಇಬ್ಬರೂ ಉಪಮುಖ್ಯಮಂತ್ರಿಗಳು ■ 6ನೇ ಪುಟಕ್ಕೆ

ಬಿಜೆಪಿ ಬಂಡಾಯ ಬೀದಿ ರಂಪಾಟದ ನಡುವೆಯೂ

ಅಮಿತ್ ಶಾ ಅಭಯ ವಿಜಯೇಂದ್ರ ಸ್ಥಾನ ಅಬಾಧಿತ



(ಸಂಗ್ರಹ ಚಿತ್ರ)

ಬೆಂಗಳೂರು, ಫೆ. 5(ಕೆಎಂಶಿ)– ಪಕ್ಷದ ಕೆಲವು ಮುಖಂಡರು ವಿರೋಧ ವ್ಯಕ್ತಪಡಿಸಿದರೂ ಬಿ.ವೈ.ವಿಜಯೇಂದ್ರ ಅವರೇ ರಾಜ್ಯಾಧ್ಯಕ್ಷರಾಗಿ ಮುಂದುವರೆಯಲಿದ್ದಾರೆ.

ರಾಜ್ಯ ಬಿಜೆಪಿಯಲ್ಲಿ ಕೆಲವು ನಾಯಕರು ರಾಜ್ಯಾಧ್ಯಕ್ಷ ಹಾಗೂ ತಮ್ಮ ಕುಟುಂಬದ ವಿರುದ್ಧ ಅಪಸ್ವರ ಎತ್ತಿ, ಬೀದಿಗಿಳಿದಿರುವ ಬಗ್ಗೆ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಗಮನಕ್ಕೆ ತಂದಿದ್ದಾರೆ.

ಚುನಾವಣೆ ಹಾಗೂ ವಿಜಯೇಂದ್ರ ಅವರನ್ನು ಮುಂದುವರೆಸುವ ಸಂಬಂಧ ಕಳೆದ ಬುಧವಾರ ಯಡಿಯೂರಪ್ಪ ಅವರು ಅಮಿತ್ ಶಾ ಜೊತೆ ಚರ್ಚಿಸಿದ್ದಾರೆ.

ನನಗೆಲ್ಲವೂ ತಿಳಿದಿದೆ, ವಿಜಯೇಂದ್ರ ಯುವಕ ಇದ್ದಾರೆ, ಅವರೇ ಮುಂದುವರೆಯುತ್ತಾರೆ. ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪಕ್ಷ ಸಂಘಟಿಸಲಿ, ಉಳಿದ ವಿಚಾರದ ಬಗ್ಗೆ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಹಾಗೂ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ್ ತೀರ್ಮಾನ ತೆಗೆದುಕೊಳ್ಳುತ್ತಾರೆ ಎಂದಿದ್ದಾರೆ. ವಿಜಯೇಂದ್ರಗೆ ಒಂದೆಡೆ ಶಾ ಅವರ ಒಲವು, ಮತ್ತೊಂದೆಡೆ ■ 6ನೇ ಪುಟಕ್ಕೆ

ವಿಜಯೇಂದ್ರ ಪರ ಪೇಮೆಂಟ್ ಸ್ವಾಮಿಗಳು ಇದ್ದಾರೆ; ಲಕ್ಷ ಕೊಟ್ಟರೆ ಒಂದು ಸ್ಟೇಟ್‌ಮೆಂಟ್ ಕೊಡುತ್ತಾರೆ...!

ನವದೆಹಲಿ, ಫೆ.5– ವಿಜಯೇಂದ್ರ ಅವರಿಗೆ ಲಿಂಗಾಯತ ನಾಯಕರ, ಸಮುದಾಯದ ಬೆಂಬಲ ಇಲ್ಲ. ಯಾರೋ ಒಂದಿಬ್ಬರು ಪೇಮೆಂಟ್ ಸ್ವಾಮಿಗಳು ಇದ್ದಾರೆ. ಅವರಿಗೆ ಒಂದು ಲಕ್ಷ ಕೊಟ್ಟರೆ ಒಂದು ಸ್ಟೇಟ್‌ಮೆಂಟ್ ಕೊಡುತ್ತಾರೆ ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹೇಳಿದ್ದಾರೆ.



ಅವಕಾಶ ಸಿಕ್ಕರೆ ತಾವೂ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ಸಿದ್ಧ ಎಂದಿರುವ ಅವರು, ಇತರ ಭಿನ್ನರೊಂದಿಗೆ ದೆಹಲಿಯಲ್ಲಿ ಬಿಡಾರ ಹೂಡಿದ್ದಾರೆ. ಇನ್ನೂ ಕೆಲ ದಿನ ಅಲ್ಲಿಯೇ ಇದ್ದುಕೊಂಡು ವರಿಷ್ಠರ ಭೇಟಿಗೆ ಪ್ರಯತ್ನಿಸುತ್ತಿದ್ದಾರೆ. ಕರ್ನಾಟಕದಲ್ಲಿ ಯಡಿಯೂರಪ್ಪ ಅವರ ಪರವಾಗಿ ಲಿಂಗಾಯಿತರು ಇಲ್ಲ. ಆ ಅಧ್ಯಾಯ ಮುಗಿದು ಹೋಗಿದೆ. ಅವರ ಬಗ್ಗೆ ಮೊದಲು ಗೌರವ ಇತ್ತು. ಅದನ್ನು ಅವರು ಉಳಿಸಿಕೊಂಡಿಲ್ಲ. ಅವರ ಮಗ ಅಪ್ಪನನ್ನು ಜೈಲಿಗೆ ಕಳುಹಿಸಿದ್ದಾನೆ. ಅವನನ್ನು ಮತ್ತೆ ಅಧ್ಯಕ್ಷ ಸ್ಥಾನದಲ್ಲಿ ಕೂರಿಸುವುದಕ್ಕೆ ನಮ್ಮದು ಸರ್ವಥಾ ವಿರೋಧ ಇದೆ ಎಂದು ವಿಜಯೇಂದ್ರಗೆ ಟಾಂಗ್ ನೀಡಿದ್ದಾರೆ. ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನಕ್ಕೆ ■ 6ನೇ ಪುಟಕ್ಕೆ

ಇಂದಿನಿಂದ ಸಿಎಂ ಸಿದ್ದರಾಮಯ್ಯ ಬಜೆಟ್ ಪೂರ್ವಭಾವಿ ಸಭೆ

ಬೆಂಗಳೂರು: 2025–26ನೇ ಸಾಲಿನ ರಾಜ್ಯ ಬಜೆಟ್‌ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಿದ್ಧತೆ ಆರಂಭಿಸಿದ್ದು, ಗುರುವಾರದಿಂದ 5 ದಿನಗಳ ಕಾಲ ವಿವಿಧ ಇಲಾಖೆಗಳ ಸಚಿವರು ಮತ್ತು ಅಧಿಕಾರಿಗಳೊಂದಿಗೆ ಪೂರ್ವಭಾವಿ ಸಭೆಗಳನ್ನು ನಡೆಸಲಿದ್ದಾರೆ.




ಗುರುವಾರ 13 ಇಲಾಖೆಗಳ ಸಚಿವರು ಮತ್ತು ಹಿರಿಯ ಅಧಿಕಾರಿಗಳೊಂದಿಗೆ ಸಭೆಗಳನ್ನು ನಡೆಸಲಿದ್ದಾರೆ, ನಂತರ ಶುಕ್ರವಾರ, ಶನಿವಾರ, ಸೋಮವಾರ ಮತ್ತು ಮುಂದಿನ ಗುರುವಾರ ಮತ್ತಷ್ಟು ಇಲಾಖೆಗಳ ಅಧಿಕಾರಿಗಳೊಂದಿಗೆ ಸಭೆಗಳನ್ನು ನಡೆಸಲಿದ್ದಾರೆ.

ರೇಸ್‌ಕೋರ್ಸ್ ರಸ್ತೆಯಲ್ಲಿರುವ ಕರ್ನಾಟಕ ವಿದ್ಯುತ್ ನಿಗಮ ಲಿಮಿಟೆಡ್ (ಕೆಪಿಸಿಎಲ್) ಕಚೇರಿ ಕಟ್ಟಡದಲ್ಲಿ ಬಜೆಟ್ ಪೂರ್ವಭಾವಿ ಸಭೆಗಳು ನಡೆಯಲಿವೆ. 30 ನಿಮಿಷಗಳ ಸಭೆಗಳಲ್ಲಿ, ಸಿಎಂ ಮತ್ತು ಹಣಕಾಸು ಇಲಾಖೆಯ ಅಧಿಕಾರಿಗಳು ಇಲಾಖೆಯ ಬಜೆಟ್ ಪ್ರಸ್ತಾವನೆಗಳನ್ನು ಪರಿಶೀಲಿಸಲಿದ್ದಾರೆ. ಐದು ಗ್ಯಾರಂಟಿ ಯೋಜನೆಗಳನ್ನು ಮುಂದುವರೆಸುವ ಮೂಲಕ ಸರ್ಕಾರ ಅಭಿವೃದ್ಧಿಯನ್ನು ನಿರ್ಲಕ್ಷಿಸುತ್ತಿದೆ ಎಂದು ವಿರೋಧ ಪಕ್ಷ ಬಿಜೆಪಿ ಮತ್ತು ■ 6ನೇ ಪುಟಕ್ಕೆ

ಇನ್ನು ಸರ್ಕಾರಿ ಕಚೇರಿ, ಕಾರ್ಯಕ್ರಮಗಳಲ್ಲಿ ಕುಡಿಯುವ ನೀರಿನ ಪ್ಲಾಸ್ಟಿಕ್ ಬಾಟಲ್ ನಿಷಿದ್ಧ

ಬೆಂಗಳೂರು, ಫೆ. 5(ಕೆಎಂಶಿ)–ಸರ್ಕಾರಿ ಕಚೇರಿ ಹಾಗೂ ಕಾರ್ಯಕ್ರಮಗಳಲ್ಲಿ ಇನ್ನು ಮುಂದೆ ಕುಡಿಯುವ ನೀರಿನ ಪ್ಲಾಸ್ಟಿಕ್ ಬಾಟಲ್‌ಗಳ ಬಳಕೆ ನಿಷೇಧಿಸಲಾಗಿದೆ.

ಈ ಸಂಬಂಧ ಸುತ್ತೋಲೆ ಹೊರಡಿಸಿರುವ ಸರ್ಕಾರ, ಪ್ಲಾಸ್ಟಿಕ್ ವಸ್ತುಗಳ ಅತಿಯಾದ ಬಳಕೆಯಿಂದ ಆರೋಗ್ಯ ಮತ್ತು



ಪರಿಸರದ ಮೇಲೆ ಉಂಟಾಗುತ್ತಿರುವ ದುಷ್ಪರಿಣಾಮಗಳನ್ನು ತಡೆಯುವ ದೃಷ್ಟಿಯಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ. ಸಚಿವಾಲಯ ಸೇರಿದಂತೆ ರಾಜ್ಯಾದ್ಯಂತ ಎಲ್ಲಾ ಸರ್ಕಾರಿ ಕಚೇರಿ, ಸರ್ಕಾರಿ ಸ್ವಾಮ್ಯದ ಮಂಡಳಿ–ನಿಗಮ, ವಿಶ್ವವಿದ್ಯಾಲಯಗಳು, ಅನುದಾನಿತ ಸಂಸ್ಥೆಗಳು ■ 6ನೇ ಪುಟಕ್ಕೆ

ಬಹುತೇಕ ಮತದಾನೋತ್ತರ ಸಮೀಕ್ಷೆ ವರದಿ ಪ್ರಕಾರ ಬಿಜೆಪಿಗೆ ದೆಹಲಿ ಗದ್ದುಗೆ







ನವದೆಹಲಿ, ಫೆ.5– ಇಂದು ಮತದಾನ ನಡೆದ ದೆಹಲಿ ವಿಧಾನಸಭಾ ಚುನಾವಣೆಯ ಮತದಾನೋತ್ತರ ಸಮೀಕ್ಷೆ (ಎಕ್ಸಿಟ್ ಪೋಲ್) ಪ್ರಕಟವಾಗಿದೆ. 10 ಸಂಸ್ಥೆಗಳ ಮತದಾನೋತ್ತರ ಸಮೀಕ್ಷೆ (ಎಕ್ಸಿಟ್ ಪೋಲ್) ಫಲಿತಾಂಶ ಪ್ರಕಟಿಸಿದ್ದು, ಅವುಗಳ ಪೈಕಿ 8 ಬಿಜೆಪಿ ಅಧಿಕಾರ ಹಿಡಿಯುವ ಮುನ್ಸೂಚನೆ ನೀಡಿವೆ. ಇದು ನಿಜವೇ ಆದರೆ 27 ವರ್ಷಗಳ ಬಳಿಕ ಬಿಜೆಪಿ ದೆಹಲಿಯ ಅಧಿಕಾರ ಗದ್ದುಗೆ ಏರಲಿದೆ. ಇಂದು ನಡೆದ ಚುನಾವಣೆಯಲ್ಲಿ ಶೇ.58ರಷ್ಟು ಮತದಾನವಾಗಿದೆ.

ದೆಹಲಿಯ ಒಟ್ಟು 70 ಸ್ಥಾನಗಳ ಪೈಕಿ ಆಡಳಿತದ ಚುಕ್ಕಾಣಿ ಹಿಡಿಯಲು 36 ಮ್ಯಾಜಿಕ್ ಸಂಖ್ಯೆಯಾಗಿದೆ. ರಾಜಸ್ಥಾನದ ಫಲೋಡಿ ಸಟ್ಟಾ ಬಜಾರ್‌ನಲ್ಲಿ ದೆಹಲಿ ವಿಧಾನಸಭಾ ಚುನಾವಣೆಯ ಬೆಟ್ಟಿಂಗ್ ನಡೆದಿದ್ದು, ಅಂತಿಮ ಹಂತದಲ್ಲಿ ಎಎಪಿ ಮತ್ತು ಬಿಜೆಪಿ ಸಮಬಲದ ಹೋರಾಟವನ್ನು ಪ್ರತಿಪಾದಿಸಿದೆ. ಸತತ ಎರಡು ಅವಧಿಗೆ ವಿಪಕ್ಷ ಇಲ್ಲದಂತೆ ಭರ್ಜರಿ ಬಹುಮತದೊಂದಿಗೆ ಗೆಲುವು ದಾಖಲಿಸಿದ್ದ ಆಮ್ ಆದ್ಮಿ ಪಾರ್ಟಿಗೆ ಈ ಬಾರಿ ಹಿನ್ನಡೆ ಉಂಟಾಗಲಿದೆ ಎಂದು ಸಟ್ಟಾ ಬಜಾರ್ ಅಂದಾಜಿಸಿದೆ. ಎಎಪಿ ಮತ್ತು ಬಿಜೆಪಿಗೆ 34–36 ಸ್ಥಾನಗಳು ಬರಬಹುದು ಎಂದು ಬೆಟ್ಟಿಂಗ್ ನಡೆಯುತ್ತಿದೆ. ಕಳೆದ ವಾರ ಸಟ್ಟಾ ಬಜಾರ್‌ನಲ್ಲಿ ಎಎಪಿಗೆ 38–40 ಮತ್ತು ಬಿಜೆಪಿಗೆ 31–33 ಸ್ಥಾನಗಳ ಗೆಲುವು ನಿರೀಕ್ಷಿಸಲಾಗುತ್ತಿತ್ತು. ■ 6ನೇ ಪುಟಕ್ಕೆ

ಮೈಸೂರು, ಮಂಡ್ಯ, ಬೆಂಗಳೂರಿನ 30 ಕಡೆ ಐಟಿ ದಾಳಿ

ಆಸ್ತಿ–ಪಾಸ್ತಿಗಳ ದಾಖಲೆ ಪತ್ರಗಳ ಪರಿಶೀಲನೆ



ಪ್ರಥಮ ದರ್ಜೆ ಗುತ್ತಿಗೆದಾರ ಜಯಕೃಷ್ಣ ಅವರ ನಿವಾಸ



ಎಂ–ಪ್ರೋ ಹೋಟೆಲ್

ಮೈಸೂರು, ಫೆ.5(ಆರ್‌ಕೆ)– ಉದ್ಯಮಿಗಳು, ಕೈಗಾರಿಕೋದ್ಯಮಿಗಳು, ಗುತ್ತಿಗೆದಾರರು ಹಾಗೂ ರಿಯಲ್ ಎಸ್ಟೇಟ್ ವ್ಯವಹಾರಸ್ಥರ ಮನೆ, ಕಚೇರಿಗಳ ಮೇಲೆ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಇಂದು ದಾಳಿ ನಡೆಸಿ, ದಾಖಲೆ–ಪತ್ರಗಳ ಪರಿಶೀಲಿಸಿ, ಕೆಲವೊಂದನ್ನು ವಶಪಡಿಸಿಕೊಂಡಿದ್ದಾರೆ. ಮೈಸೂರಿನ ರಾಮಕೃಷ್ಣನಗರ ಐ–ಬ್ಲಾಕ್‌ನಲ್ಲಿ ಅಮ್ಮ ಕಾಂಪ್ಲೆಕ್ಸ್ ಸಮೀಪವಿರುವ ಪ್ರಥಮ ದರ್ಜೆ ಗುತ್ತಿಗೆದಾರ ಜಯಕೃಷ್ಣ (ರಾಮಕೃಷ್ಣೇಗೌಡ), ಆಲನಹಳ್ಳಿ ರಿಂಗ್ ರಸ್ತೆಯಲ್ಲಿರುವ ಉದ್ಯಮಿ ಕಾಂತರಾಜು, ಹರಿಕುಮಾರ್, ಹರಿಬಾಬು ಹಾಗೂ ವಿಜಯನಗರ 3ನೇ ಹಂತದಲ್ಲಿರುವ ಗುತ್ತಿಗೆದಾರ ರಮೇಶ್ ಮನೆ, ಕಚೇರಿಗಳ ಮೇಲೆ ಇಂದು ಮುಂಜಾನೆಯಿಂದಲೇ ಏಕಕಾಲದಲ್ಲಿ ದಾಳಿ ನಡೆಸಿದ ಐಟಿ ಅಧಿಕಾರಿಗಳು, ಅವರ ಮೊಬೈಲ್ ಫೋನ್‌ಗಳನ್ನು ವಶಕ್ಕೆ ಪಡೆದು, ನಂತರ ಶೋಧ ಕಾರ್ಯ ಆರಂಭಿಸಿದರು.

ಬಾಡಿಗೆಗೆ ಪಡೆದಿದ್ದ ಯಲ್ಲೋ ಬೋರ್ಡ್ ವಾಹನಗಳಲ್ಲಿ ಬಂದಂತಹ ಅಧಿಕಾರಿಗಳು, ತಮ್ಮ ವಾಹನಗಳನ್ನು ದೂರದಲ್ಲಿ ನಿಲ್ಲಿಸಿ, ಮನೆಗಳಿಗೆ ದಿಢೀರ್ ದಾಳಿ ಮಾಡಿದಾಗ ಉದ್ಯಮಿಗಳು ಬೆಚ್ಚಿಬಿದ್ದರು. ಆಸ್ತಿಗಳ ದಾಖಲೆ–ಪತ್ರ, ಹಣ, ಚಿನ್ನಾಭರಣ ಸೇರಿದಂತೆ ಇತರ ಸ್ಥಿರ–ಚರ, ಆಸ್ತಿಗಳ ವಿವರ ಶೋಧ ನಡೆಸಿದ ಅಧಿಕಾರಿಗಳು, ಆಯಾಯ ಕುಟುಂಬ ಸದಸ್ಯರು ಹೊರಗೆ ಹೋಗದಂತೆ ನಿರ್ಬಂಧ ಹಾಕಿ, ಸಂಜೆಯವರೆಗೂ ಕಾರ್ಯಾಚರಣೆ ನಡೆಸಿದರು.

ಕಳೆದ ಏಪ್ರಿಲ್ 1ರಿಂದ ಈವರೆಗೆ ವಿವಿಧ ಇಲಾಖೆಗಳು, ಸ್ಥಳೀಯ ಸಂಸ್ಥೆಗಳಲ್ಲಿ ಟೆಂಡರ್ ಮೂಲಕ ಕಾಮಗಾರಿಗಳನ್ನು ಪಡೆದು ಪೂರ್ಣಗೊಳಿಸಿ, ಅವುಗಳ ಬಿಲ್ ಪಡೆದಿರುವುದು, ಇನ್ನಿತರ ಮೂಲಗಳಿಂದ ಗಳಿಸಿರುವ ಆದಾಯ, ಬ್ಯಾಂಕ್ ಬ್ಯಾಲೆನ್ಸ್, ಷೇರು ಮಾರುಕಟ್ಟೆಯಲ್ಲಿ ತೊಡಗಿಸಿರುವ ಹಣ, ವಿಮಾ ಕಂಪನಿಗಳಲ್ಲಿ ಹೂಡಿಕೆ ಬಗ್ಗೆಯೂ ■ 6ನೇ ಪುಟಕ್ಕೆ

ಈ ಬಾರಿಯ SSLC ಪರೀಕ್ಷೆಯಲ್ಲಿ ಎಐ ಕ್ಯಾಮರಾ ಕಣ್ಗಾವಲು!



ಮೈಸೂರು, ಫೆ.5(ಆರ್‌ಕೆ)–ಕರ್ನಾಟಕ ರಾಜ್ಯದಾದ್ಯಂತ ಈ ವರ್ಷ ನಡೆಯಲಿರುವ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮೇಲೆ ಈ ಬಾರಿ ಎಐ (Artificial Intelligence) ಸಿಸಿ ಕ್ಯಾಮರಾ ಕಣ್ಗಾವಲಿರಲಿದೆ. ಪರೀಕ್ಷಾ ಅಕ್ರಮಗಳನ್ನು ತಡೆಗಟ್ಟಲು 2024ರ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ವೆಬ್‌ಕ್ಯಾಸ್ಟಿಂಗ್ ಮೂಲಕ ನಿಗಾ ವಹಿಸುತ್ತಿದ್ದು, ಕರ್ನಾಟಕ ಸ್ಕೂಲ್ ಎಕ್ಸಾಮಿನೇಷನ್ ಅಂಡ್ ಅಸೆಸ್‌ಮೆಂಟ್ ಬೋರ್ಡ್ (KSEAB), ಇದೀಗ 2025ನೇ ಸಾಲಿನಲ್ಲಿ ಎಐ ■ 6ನೇ ಪುಟಕ್ಕೆ

ಸಿದ್ದಲಿಂಗಪುರ ಬಳಿ ಪಾಳು ಬಿದ್ದ ಪೆಟ್ರೋಲ್ ಬಂಕ್‌ನಲ್ಲಿ ವ್ಯಕ್ತಿಯ ಬರ್ಬರ ಹತ್ಯೆ

ಮೈಸೂರು, ಫೆ.5(ಆರ್‌ಕೆ)– ಕಲ್ಲಿನಿಂದ ಜಜ್ಜಿ ಅಪರಿಚಿತ ವ್ಯಕ್ತಿಯೋರ್ವರನ್ನು ಬರ್ಬರವಾಗಿ ಹತ್ಯೆ ಮಾಡಿರುವ ಘಟನೆ ಮೈಸೂರು ತಾಲೂಕು ಸಿದ್ದಲಿಂಗಪುರ ಬಳಿ, ಮೈಸೂರು–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಕಳೆದ ರಾತ್ರಿ ಸಂಭವಿಸಿದೆ.

ಇಲ್ಲಿನ ಪಾಳು ಬಿದ್ದ ಪೆಟ್ರೋಲ್ ಬಂಕ್‌ವೊಂದರ ಕಟ್ಟಡದಲ್ಲಿ ರಕ್ತಸಿಕ್ತ ವ್ಯಕ್ತಿಯ ಮೃತದೇಹ ಇಂದು ಮುಂಜಾನೆ ಪತ್ತೆಯಾಗಿದೆ. ವಿಷಯ ತಿಳಿಯುತ್ತಿದ್ದಂತೆ ಮೇಟಗಳ್ಳಿ ಠಾಣೆ ಪ್ರಭಾರ ಇನ್‌ಸ್ಪೆಕ್ಟರ್ ಕೆ.ಸಿ.ಪೂವಯ್ಯ ಹಾಗೂ ಸಿಬ್ಬಂದಿ ಘಟನಾ ಸ್ಥಳಕ್ಕೆ ತೆರಳಿ ಮಹಜರು ನಡೆಸಿದಾಗ ಸುಮಾರು 35ರಿಂದ 40 ವರ್ಷ ವಯಸ್ಸಿನ ಈ ವ್ಯಕ್ತಿಯನ್ನು ಕಲ್ಲಿನಿಂದ ಜಜ್ಜಿ ಕೊಲೆಗೈದಿರುವುದು ತಿಳಿದುಬಂದಿದೆ. ಹಲವು ವರ್ಷಗಳ ಹಿಂದೆಯೇ ಕಾರ್ಯ ಸ್ಥಗಿತಗೊಂಡಿದ್ದು, ಪಾಳುಬಿದ್ದಿರುವ ಈ ಪೆಟ್ರೋಲ್ ಬಂಕ್ ಕಚೇರಿಯಲ್ಲಿ ಸಿದ್ದಲಿಂಗಪುರದ ರಾಜೇಶ್ ಮತ್ತು ಮಹಿಳೆಯೊಬ್ಬರು ಅನಧಿಕೃತವಾಗಿ ವಾಸವಾಗಿದ್ದರು. ಅಲ್ಲಿಗೆ ರಾತ್ರಿ ವೇಳೆ ಅನಧಿಕೃತ ವ್ಯಕ್ತಿಗಳು ಬಂದು ಹೋಗುತ್ತಿದ್ದರು ಎಂದು ಗ್ರಾಮಸ್ಥರು ಪೊಲೀಸರಿಗೆ ತಿಳಿಸಿದ್ದಾರೆ.

ಅದೇ ರೀತಿ ಈ ವ್ಯಕ್ತಿಯು ರಾತ್ರಿ ಬಂದಿರಬಹುದು, ಆತನನ್ನು ಕಲ್ಲಿನಿಂದ ಜಜ್ಜಿ ಕೊಲೆಗೈದಿರಬಹುದು ಎಂದು ಸ್ಥಳೀಯರು ಹೇಳಿದ್ದಾರೆ. ಈ ಮಧ್ಯೆ ಆ ಕಟ್ಟಡದಲ್ಲಿ ವಾಸವಾಗಿದ್ದರು ಎನ್ನಲಾದ ರಾಜೇಶ್ ಮತ್ತು ಮಹಿಳೆ ನಾಪತ್ತೆಯಾಗಿರುವುದು ಅನುಮಾನ ಮೂಡಿಸಿದೆ.

ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಆ ಭಾಗದ ಸುತ್ತಲಿನ ಸಿಸಿ ಕ್ಯಾಮರಾಗಳ ಫುಟೇಜ್‌ಗಳನ್ನು ಪಡೆದು ಹತ್ಯೆಯಾದ ವ್ಯಕ್ತಿ ಮಾಹಿತಿ ಪತ್ತೆಗೆ ಕ್ರಮ ಕೈಗೊಂಡಿದ್ದಾರೆ. ಹಾಗೆಯೇ ಪರಾರಿಯಾಗಿದ್ದಾರೆನ್ನಲಾದ ರಾಜೇಶ್ ಮತ್ತು ಮಹಿಳೆ ಪತ್ತೆಗೂ ಬಲೆ ಬೀಸಿದ್ದಾರೆ.

ಮೃತದೇಹವನ್ನು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ಇರಿಸಲಾಗಿದ್ದು, ಆತ ಯಾರೆಂಬುದು ತಿಳಿದ ನಂತರ ವಾರಸುದಾರರನ್ನು ಕರೆಸಿ ಮರಣೋತ್ತರ ಪರೀಕ್ಷೆ ನಡೆಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ. ಘಟನಾ ಸ್ಥಳಕ್ಕೆ ವಿಜಯನಗರ ಉಪವಿಭಾಗದ ಎಸಿಪಿ ಎಸ್.ಜಿ.ಗಜೇಂದ್ರಪ್ರಸಾದ್, ಬೆರಳಚ್ಚು ಘಟಕ ಹಾಗೂ ಶ್ವಾನದಳದ ಅಧಿಕಾರಿಗಳು ತೆರಳಿ, ತಲಾಷೆ ನಡೆಸಿದರು.

ಇಂದು ಸ್ವಯಂಪ್ರೇರಿತ ರಕ್ತದಾನ ಶಿಬಿರ; ಜೀವರಕ್ಷಕ ಸೇವಾ ಪ್ರಶಸ್ತಿ ಪ್ರದಾನ

ಮೈಸೂರು,ಫೆ.5–ಮೈಸೂರಿನ ಶ್ರೀ ದುರ್ಗಾ ಫೌಂಡೇಶನ್ ಹಾಗೂ ಅರಿವು ಸಂಸ್ಥೆ ವತಿಯಿಂದ ಸ್ವಯಂಪ್ರೇರಿತ ರಕ್ತದಾನ ಶಿಬಿರ ಹಾಗೂ 20 ವರ್ಷ ನಿರಂತರ ಸಾಮಾಜಿಕ ಸೇವೆ ಹಾಗೂ ಸಂಘಟನೆಯಿಂದ ಸೇವೆ ಸಲ್ಲಿಸುತ್ತಿರುವ ಎಸ್.ಇ.ಗಿರೀಶ್ ಅವರಿಗೆ ಜೀವರಕ್ಷಕ ಸೇವಾ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಜೀವಧಾರ ರಕ್ತನಿಧಿ ಕೇಂದ್ರ ಆವರಣದಲ್ಲಿ ನಾಳೆ (ಫೆ.6) ಮಧ್ಯಾಹ್ನ 12 ಗಂಟೆಗೆ ಏರ್ಪಡಿಸಲಾಗಿದೆ. ಮುಖ್ಯ ಅತಿಥಿಗಳಾಗಿ ಶಾಸಕ ಟಿ.ಎಸ್.ಶ್ರೀವತ್ಸ, ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಜಿಲ್ಲಾಧ್ಯಕ್ಷ ಮಹಾದೇವಸ್ವಾಮಿ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಎಂಸಿಸಿಐ ಅಧ್ಯಕ್ಷ ಕೆ.ಬಿ.ಲಿಂಗರಾಜು, ಮಂಡಿ ಮೊಹಲ್ಲಾ ವೃತ್ತ ನಿರೀಕ್ಷಕ ನಾಗೇಶ್ ಹಾಗೂ ಇನ್ನಿತರರು ಭಾಗವಹಿಸಲಿದ್ದಾರೆ

ಮಹಾಜನ ಕಾಲೇಜಿನಲ್ಲಿ ಆಸ್ಟ್ರೋ–ನೈಟ್ ವಿಶೇಷ ಕಾರ್ಯಕ್ರಮ



ಮಹಾಜನ ಕಾಲೇಜಿನಲ್ಲಿ ಆಸ್ಟ್ರೋ–ನೈಟ್ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಮೈಸೂರು,ಫೆ.5–ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಭೌತಶಾಸ್ತ್ರ ಮತ್ತು ಭೂಗೋಳ ಶಾಸ್ತ್ರ ವಿಭಾಗಗಳ ಸಹಯೋಗದೊಂದಿಗೆ ಮಹಾಜನ ಕಾಲೇಜಿನ ಜಗದೀಶ್ ಪ್ರಸಾದ್ ಕ್ರೀಡಾಂಗಣದಲ್ಲಿ ಆಸ್ಟ್ರೋ–ನೈಟ್ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಸಂಪನ್ಮೂಲ ವ್ಯಕ್ತಿಗಳಾಗಿ ಕುವೆಂಪು ನಗರ ವಿಸ್ಡಮ್ ಪಿ.ಯು. ಕಾಲೇಜಿನ ಉಪ ಪ್ರಾಂಶುಪಾಲ ವಸಂತ್ ಹೆಗಡೆ ಆಗಮಿಸಿ, ಗ್ರಹಗಳ ಜೋಡಣೆ ಮತ್ತು ಬಾಹ್ಯಾಕಾಶಕ್ಕೆ ಸಂಬಂಧಿಸಿದ ವಿಷಯಗಳನ್ನು ಕುರಿತು ವಿದ್ಯಾರ್ಥಿಗಳು ಹಾಗೂ ವೀಕ್ಷಕರಿಗೆ ವಿವರವಾಗಿ ತಿಳಿಸಿಕೊಟ್ಟರು. ಕಾರ್ಯಕ್ರಮವು ವಿಶ್ವವಿಜ್ಞಾನ, ಬಾಹ್ಯಾಕಾಶ ಪರಿಶೋಧನೆ ಮತ್ತು ಪುರಾಣಗಳ ಬಗ್ಗೆ ಚರ್ಚೆಗಳನ್ನು ಒಳಗೊಂಡಿತ್ತು.

ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲರೂ ದೂರದರ್ಶಕ ಮಸೂರದ ಮೂಲಕ ಚಂದ್ರನನ್ನು ವೀಕ್ಷಿಸಿದರು. ಅದರ ಒರಟಾದ ಭೂಪ್ರದೇಶ ಮತ್ತು ಪ್ರಾಚೀನ ಕುಳಿಗಳನ್ನು ಕಂಡು ಆಶ್ಚರ್ಯಚಕಿತರಾದರು. ಭೂಮಿಯ ನೈಸರ್ಗಿಕ ಉಪಗ್ರಹದ ಭೂವೈಜ್ಞಾನಿಕ ಇತಿಹಾಸದ ಮೇಲೆ ಬೆಳಕು ಚೆಲ್ಲುವ ಒಳನೋಟವುಳ್ಳ ವ್ಯಾಖ್ಯಾನಗಳನ್ನು ವಸಂತ್ ವಿವರಿಸಿದರು.

ಶುಕ್ರಗ್ರಹ, ಶನಿ ಗ್ರಹ ಮತ್ತು ಅದರ ಉಂಗುರಗಳು ಹಾಗೂ ಗುರುಗ್ರಹ, ಅದರ ನಾಲ್ಕು ದೊಡ್ಡ ಚಂದ್ರಗಳಾದ ಐಓ, ಯುರೋಪಾ, ಗ್ಯಾನಿಮೀಡ್, ಕ್ಯಾಲಿಸ್ಟೊ ಹಾಗೂ ಕೆಂಪು ಗ್ರಹವಾದ ಮಂಗಳ ಗ್ರಹವನ್ನು ಖಗೋಳಶಾಸ್ತ್ರಜ್ಞ ವಸಂತ್ ಹೆಗಡೆ ನೆರೆದಿದ್ದ ಎಲ್ಲಾ ವೀಕ್ಷಕರಿಗೂ ತೋರಿಸಿದರು.


ಕಾಲೇಜಿನ ಪ್ರಾಂಶುಪಾಲರಾದ ಡಾ ಬಿ.ಆರ್.ಜಯಕುಮಾರಿ, ಭೌತಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ.ಪೂರ್ಣಿಮಾ, ಸಹ ಪ್ರಾಧ್ಯಾಪಕ ಗಾಯತ್ರಿ, ಭೂಗೋಳ ಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಸೋಮಶೇಖರ್, ವಿದ್ಯಾರ್ಥಿ ಸಂಯೋಜಕರಾದ ಅಭಯ್ ಮುರಳೀಧರ್, ಶ್ರೀನಿಧಿ, ಸಮುಧ್ಯತಾ, ಜೀವನ್, ಚೇತನ್, ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

ಫೆ.7ರಂದು ವಚನ ಗಾಯನ, ಉಪನ್ಯಾಸ

ಮೈಸೂರು,ಫೆ.5–ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್, ಮೈಸೂರು ನಗರ ಘಟಕವು ಕು. ಭಾವನಾ ಕುಪ್ಪಾಳ್ ದತ್ತಿ ಆಶಯದಲ್ಲಿ ಫೆ.7ರಂದು ಶುಕ್ರವಾರ ವಚನ ಗಾಯನ, ಉಪನ್ಯಾಸ ಹಾಗೂ ಪ್ರಶಸ್ತಿ ಪ್ರದಾನ ದತ್ತಿ ಕಾರ್ಯಕ್ರಮ ಹಮ್ಮಿಕೊಂಡಿದೆ.

ಕುವೆಂಪುನಗರದ ಶ್ರೀ ಗೋಕುಲ ಶಾಲೆಯಲ್ಲಿ ಮಧ್ಯಾಹ್ನ 2 ಗಂಟೆಗೆ ನಡೆಯಲಿರುವ ವಚನ ಗಾಯನ, ಉಪನ್ಯಾಸ ಹಾಗೂ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ 'ವಚನ ಸಾಹಿತ್ಯ ಮೌಲ್ಯಗಳು' ವಿಷಯ ಕುರಿತಂತೆ ಸಾಹಿತಿ ಬನ್ನೂರು ಕೆ.ರಾಜು ಉಪನ್ಯಾಸ ನೀಡುವರು. ಕಾರ್ಯಕ್ರಮವನ್ನು ಶ್ರೀ ಗೋಕುಲ ಶಾಲೆಯ ಪ್ರಾಂಶುಪಾಲರಾದ ಕೆ.ಎಸ್.ವಸಂತಕುಮಾರಿ ಉದ್ಘಾಟಿಸುವರು. ಶ್ರೀಗೋಕುಲ ಶಾಲೆಯ ಮುಖ್ಯೋಪಾಧ್ಯಾಯ ಜೆ.ಸುನಿಲ್‌ಕುಮಾರ್ ಪ್ರಶಸ್ತಿ ವಿತರಣೆ ಮಾಡಲಿದ್ದು, ಶರಣ ಸಾಹಿತ್ಯ ಪರಿಷತ್ತಿನ ಮೈಸೂರು ನಗರ ಘಟಕದ ಅಧ್ಯಕ್ಷ ಮ.ಗು.ಸದಾನಂದಯ್ಯ ಅಧ್ಯಕ್ಷತೆ ವಹಿಸುವರು.

ವ್ಯಕ್ತಿ ನಾಪತ್ತೆ



ಮೈಸೂರು, ಫೆ. 5– ವ್ಯಕ್ತಿಯೋರ್ವ ನಾಪತ್ತೆಯಾಗಿರುವ ಬಗ್ಗೆ ನರಸಿಂಹರಾಜ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಲಕ್ಷ್ಮಣ (70) ಕಾಣೆಯಾದವರು. ಈತ 2.10.2024ರಂದು ಸಂಜೆ 5 ಗಂಟೆ ಸಮಯದಲ್ಲಿ ಮನೆಯಿಂದ ಹೊರ ಹೋದವರು ಇದುವರೆಗೂ ಮನೆಗೆ ವಾಪಸ್ ಬಂದಿಲ್ಲ ಎಂದು ಈತನ ಪತ್ನಿ ಶ್ರೀಮತಿ ಜಯರತ್ನ ಪ್ರಕರಣ ದಾಖಲಿಸಿದ್ದಾರೆ. ಇವರ ಬಗ್ಗೆ ಮಾಹಿತಿ ತಿಳಿದಲ್ಲಿ ನರಸಿಂಹರಾಜ ಪೊಲೀಸ್ ಠಾಣೆ ದೂ. 2418312, 2418311 ಅನ್ನು ಸಂಪರ್ಕಿಸಲು ಕೋರಲಾಗಿದೆ.

ನಿಧನ

ದೊರೆಸ್ವಾಮಿ



ಮಂಡ್ಯ: ಮಂಡ್ಯ ಗಾಂಧಿನಗರ ನಿವಾಸಿ ಹಾಗೂ ನಿವೃತ್ತ ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ನೌಕರ ದೊರೆಸ್ವಾಮಿ (69) ಫೆ.3ರಂದು ನಿಧನರಾದರು. ಮೃತರು ಪತ್ನಿ ಶ್ರೀಮತಿ ಉಮಾ (ನಿವೃತ್ತ ಮುಖ್ಯಶಿಕ್ಷಕಿ), ಮಗ ದಿಲೀಪ್ (ವಕೀಲರು), ಮಗಳು ದೀಪ್ತಿ ಮತ್ತು ಸಂಬಂಧಿಕರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಫೆ.4ರಂದು ಮಂಡ್ಯದಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಾನಾ ದುಶ್ಚಟಕ್ಕೆ ಬಲಿಯಾದವರು ಏನನ್ನೂ ಸಾಧಿಸಲಾರರು

ವಿದ್ಯಾರ್ಥಿಗಳಿಗೆ ಅಪರ ಜಿಲ್ಲಾಧಿಕಾರಿ ಡಾ.ಶಿವರಾಜು ಕಿವಿಮಾತು



ಮಹಾರಾಜ ಪದವಿ ಪೂರ್ವ ಕಾಲೇಜಿನ ಇತರೆ ಸಂಸ್ಥೆ ಸಂಯುಕ್ತಾಶ್ರಯದಲ್ಲಿ ಬುಧವಾರ ಆಯೋಜಿಸಿದ್ದ 'ಮದ್ಯ ಮತ್ತು ಮಾದಕ ವಸ್ತುಗಳ ದುಷ್ಪರಿಣಾಮ' ಕುರಿತ ವಿಚಾರ ಸಂಕಿರಣವನ್ನು ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಉದ್ಘಾಟಿಸಿದರು.

ಮೈಸೂರು, ಫೆ.5(ಎಂಟಿವೈ)– ಹದಿಹರೆಯದ ವಯಸ್ಸಲ್ಲಿ ಬಾಹ್ಯ ಆಕರ್ಷಣೆ ಸಹಜವಾಗಿದ್ದು, ಯುವ ಜನತೆ ದುಶ್ಚಟಕ್ಕೆ ಬಲಿಯಾಗದೇ ಏಕಾಗ್ರತೆಯಿಂದ ತಮ್ಮ ದೇಹವನ್ನು ದೇಗುಲದಂತೆ ಕಾಪಾಡಿಕೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಸಲಹೆ ನೀಡಿದ್ದಾರೆ.

ಮೈಸೂರಿನ ಮಹಾರಾಜ ಪದವಿ ಪೂರ್ವ ಕಾಲೇಜಿನಲ್ಲಿ ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಮಹಾರಾಜ ಪದವಿ ಪೂರ್ವ ಕಾಲೇಜಿನ ಸಂಯುಕ್ತಾಶ್ರಯದಲ್ಲಿ ಬುಧವಾರ ಆಯೋಜಿಸಿದ್ದ 'ಮದ್ಯ ಮತ್ತು ಮಾದಕ ವಸ್ತುಗಳ ದುಷ್ಪರಿಣಾಮ' ಕುರಿತ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಪಿಯುಸಿ ಹಂತಕ್ಕೆ ತಲುಪುತ್ತಿದ್ದಂತೆಯೇ ಜಗತ್ತನ್ನು ಜಯಿಸುವ ಅತೀವ ಆತ್ಮವಿಶ್ವಾಸಕ್ಕೆ ಒಳಗಾಗುತ್ತಾರೆ. ಇದರಿಂದ ಧೂಮಪಾನ ಸೇರಿದಂತೆ ಅನೇಕ ದುಶ್ಚಟಕ್ಕೆ ಬಲಿಯಾಗುತ್ತಾರೆ. ಈ ವೇಳೆ ಮಾನಸಿಕ ಹಾಗೂ ದೈಹಿಕ ಆರೋಗ್ಯದ ಮೇಲಾಗುವ ದುಷ್ಪರಿಣಾಮಗಳ ಅರಿವಿಲ್ಲದೆ ತಮ್ಮ ಜೀವನವನ್ನು ಹಾಳು ಮಾಡಿಕೊಳ್ಳುವ ಹಂತಕ್ಕೆ ತಲುಪುತ್ತಾರೆ. ಈ ಹಿನ್ನೆಲೆಯಲ್ಲಿ ಹದಿಹರೆಯದ ವಯಸ್ಸಲ್ಲಿ ಏಕಾಗ್ರತೆ ಹೆಚ್ಚಿಸಿಕೊಳ್ಳಬೇಕು. ಮನಸ್ಸಿನ ಚಂಚಲತೆಯಿಂದಾಗಿ ಬಾಹ್ಯ ಆಕರ್ಷಣೆಗೆ ಒಳಗಾಗಬಾರದು ಎಂದು ಕಿವಿಮಾತು ಹೇಳಿದರು.

> ವಿದ್ಯಾರ್ಥಿಗಳು ಸಾಧನೆಯ ಕಡೆ ಹೆಚ್ಚಿನ ಗಮನಹರಿಸಬೇಕು. ದುಶ್ಚಟಗಳಿಂದ ದೂರವಿರಬೇಕು. ಟಿವಿ, ಮೊಬೈಲ್‌ಗೆ ದಾಸರಾಗುತ್ತಿರುವವರ ಸಂಖ್ಯೆ ಹೆಚ್ಚಾಗುತ್ತಿದೆ. ಟಿವಿ, ಮೊಬೈಲ್ ಬಳಕೆಯಿಂದಾಗುವ ಸಮಸ್ಯೆಯನ್ನು ಮನೋರೋಗ ತಜ್ಞರ ಸಹಾಯದಿಂದ ನಿವಾರಿಸಬಹುದು. ಆದರೆ ಸಿಗರೇಟ್, ಮದ್ಯಪಾನ, ಗಾಂಜಾದಂತಹ ದುಶ್ಚಟಗಳು ರಕ್ತದಲ್ಲಿ ಬೆರೆತು ಹೋದರೆ ಅದರಿಂದ ಹೊರಬರಲು ಕಷ್ಟ ಅಲ್ಲದೆ, ಅದರಿಂದಾಗುವ ಅಡ್ಡಪರಿಣಾಮ ದೇಹದ ಅಂಗಾಂಗದ ಮೇಲೆ ಬೀಳುತ್ತದೆ. ಇದರಿಂದ ಜೀವನ ಹಾಳಾಗುತ್ತದೆ. ವಿದ್ಯಾರ್ಥಿಗಳು ಚಲನಚಿತ್ರದಲ್ಲಿ ಬರುವ ಹೀರೋಗಳನ್ನು ಅನುಕರಣೆ ಮಾಡಬಾರದು. ಇದರಿಂದ ನಮ್ಮ ದೇಹದ ಮೇಲೆ ಮನಸ್ಸಿನ ಮೇಲೆ ಗಾಢವಾದ ಪರಿಣಾಮ ಬೀರುತ್ತದೆ. ನಮಗೆ ನಾವೇ ಹೀರೋಗಳಾಗಬೇಕು. ಇತರರಿಗೆ ಮಾದರಿಯಾಗಬೇಕು. –ಡಾ.ಪಿ.ಶಿವರಾಜು, ಅಪರ ಜಿಲ್ಲಾಧಿಕಾರಿ

ಯುವ ಜನತೆ ತಮ್ಮ ದೇಹವನ್ನು ದೇಗುಲದಂತೆ ನೋಡಿಕೊಳ್ಳಬೇಕು. ದೇಗುಲವನ್ನು ನೋಡಿದರೆ ಪೂಜ್ಯನೀಯ ಭಾವ ಮೂಡುವಂತೆ ತಮ್ಮ ವರ್ತನೆ, ನಡವಳಿಕೆಯನ್ನು ಕಂಡು ಇತರರು ಗೌರವ ಕೊಡುವಂತಿರಬೇಕು. ಈ ನಿಟ್ಟಿನಲ್ಲಿ ಎಚ್ಚರಿಕೆ ಹೆಜ್ಜೆ ಇಡುವುದರೊಂದಿಗೆ ಧೂಮಪಾನ, ಮದ್ಯಪಾನ, ಮಾದಕ ವಸ್ತುಗಳ ಸೇವನೆ ಸೇರಿದಂತೆ ಯಾವುದೇ ದುಶ್ಚಟಕ್ಕೆ ಒಳಗಾಗದಂತೆ ಕಟ್ಟೆಚ್ಚರ ವಹಿಸಬೇಕು ಎಂದರು.

ಯಾವುದೇ ದುಶ್ಚಟಕ್ಕೆ ಒಳಗಾಗಿರುವ ವ್ಯಕ್ತಿಗಳ ಜೀವನ ಚರಿತ್ರೆ ಗಮನಿಸಿದಾಗ ಅವರು ಯಾವುದೇ ಕ್ಷೇತ್ರದಲ್ಲೂ ಸಾಧನೆ ಮಾಡದೇ ಇರುವುದು ಕಂಡು ಬರುತ್ತದೆ. ತಮ್ಮ ಸುತ್ತಮುತ್ತಲಿನ ಪ್ರದೇಶದಲ್ಲಿ ಗಮನಿಸಿದರೆ ದುಶ್ಚಟಕ್ಕೆ ಬಲಿಯಾದವರೂ ಏನನ್ನೂ ಸಾಧಿಸದೇ ಇರುವುದು ನೋಡಬಹುದು. ಅಂತಹವರಿಗೆ ಸಮಾಜದಲ್ಲಿ ಗೌರವ ಸಿಗುವುದಿಲ್ಲ. ಸಮಾಜದಲ್ಲಿ ನಮಗೆ ಗೌರವ ಸಿಗಬೇಕಾದರೆ ಉತ್ತಮ ರೀತಿ ಬದುಕಬೇಕು ಹಾಗೂ ದೇಹವನ್ನು ಶುಚಿಯಾಗಿಟ್ಟುಕೊಳ್ಳಬೇಕು ಎಂದರು.

ಪತ್ರಕರ್ತ ಸಿ.ಕೆ.ಮಹೇಂದ್ರ ಮಾತನಾಡಿ, ಇಂತಹ ಕಾರ್ಯಕ್ರಮ ಎಲ್ಲಾ ಶಾಲೆಗಳಲ್ಲಿ ನಡೆಯಬೇಕು. ಶಾಲಾ ಹಂತದಲ್ಲೇ ವಿದ್ಯಾರ್ಥಿಗಳಿಗೆ ಪಾಕೆಟ್ ಮನಿ ಸಿಗುತ್ತದೆ. ಇದರಿಂದ ಅವರು ವಿವಿಧ ಆಕರ್ಷಣೆಗೆ ಒಳಗಾಗುತ್ತಾರೆ. ಈ ವಯಸ್ಸಿನಲ್ಲಿಯೇ ಏನು ಬೇಕಾದರೂ ಕಲಿಯಬಹುದು. ಯಾವ ಸಾಧನೆಯನ್ನಾದರೂ ಮಾಡಬಹುದು ಎಂದು ತಿಳಿಸಿದರು.

ಮನೋರೋಗ ತಜ್ಞ ಡಾ.ಬಿ.ಎನ್.ರವೀಶ್ ಮಾತನಾಡಿ, ವಿದ್ಯಾರ್ಥಿಗಳಲ್ಲಿ ತಾಳ್ಮೆ ಹಾಗೂ ಶ್ರದ್ಧೆ ಕಾಣುತ್ತಿಲ್ಲ. ಇವೆರಡು ಇಲ್ಲ ಎಂದರೆ ಉತ್ತಮ ಆರೋಗ್ಯ ಸಾಧ್ಯವಿಲ್ಲ. ನಮ್ಮ ಬದುಕಿಗೆ ನಾವೇ ಶಿಲ್ಪಿಗಳಾಗಬೇಕು. ಎಂದಿಗೂ ಕೀಳರಿಮೆ ಇಟ್ಟುಕೊಳ್ಳಬೇಡಿ. ಜೀವನದ ಸಂತೋಷದ ಕ್ಷಣಗಳನ್ನು ಅನುಭವಿಸಬೇಕು. ಇತ್ತೀಚಿನ ದಿನಗಳಲ್ಲಿ ಹೋಟೆಲ್ ಊಟದ ಸೇವನೆ ಹೆಚ್ಚಾಗುತ್ತಿದೆ. ಇದು ನಮ್ಮ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಹೀಗಾಗಿ ಮನೆಯಲ್ಲೇ ತಯಾರಿಸಿದ ಊಟ ಸೇವಿಸಬೇಕು ಎಂದು ಸಲಹೆ ನೀಡಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಜಿಲ್ಲಾ ಸರ್ವೇಕ್ಷಣಾ ಅಧಿಕಾರಿ ಡಾ.ಡಿ.ಜಿ.ನಾಗರಾಜು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕ ಟಿ.ಕೆ.ಹರೀಶ್, ಮಹಾರಾಜ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಉದಯಶಂಕರ್, ತಂಬಾಕು ವಿರೋಧಿ ವೇದಿಕೆ ಸಂಚಾಲಕ ವಸಂತ ಕುಮಾರ್ ಮೈಸೂರು ಮಠ್, ವಾರ್ತಾ ಇಲಾಖೆ ವಾರ್ತಾ ಸಹಾಯಕ ರಮೇಶ್, ಮಹಾರಾಣಿ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಪ್ರೊ.ಗೋವಿಂದರಾಜು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ವಿವಿಧ ವೃಂದದ ಅಧಿಕಾರಿಗಳು, ಸಿಬ್ಬಂದಿ ವರ್ಗದವರಿಗೆ ಕ್ರೀಡಾಕೂಟ ಆಯೋಜನೆ

ಮೈಸೂರು,ಫೆ.5– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಂಯುಕ್ತಾಶ್ರಯದಲ್ಲಿ ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್, ಗ್ರಾಮ ಪಂಚಾಯತ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಹಾಗೂ ಕರ್ನಾಟಕ ಗ್ರಾಮೀಣ ಮೂಲ ಸೌಕರ್ಯಗಳ ಅಭಿವೃದ್ಧಿ ನಿಗಮದ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರಿಗೆ ವಿವಿಧ ಕ್ರೀಡಾಕೂಟವನ್ನು ಫೆ.7 ಮತ್ತು 8ರಂದು ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ. ಬೆಳಗ್ಗೆ 9ರಿಂದ ಕ್ರೀಡಾಕೂಟಗಳು ಪ್ರಾರಂಭವಾಗುತ್ತವೆ. ಫೆ.7ರಂದು ಅಥ್ಲೆಟಿಕ್ಸ್ ವಿಭಾಗದಲ್ಲಿ 40 ವರ್ಷದೊಳಗಿರುವ ಪುರುಷರಿಗೆ ಹಾಗೂ ಮಹಿಳೆಯರಿಗೆ 100 ಮೀ. 40 ವರ್ಷ ಮೇಲ್ಪಟ್ಟ ಪುರುಷರಿಗೆ ಹಾಗೂ ಮಹಿಳೆಯರಿಗೆ 400 ಮೀ. ವೈಯಕ್ತಿಕ ಸ್ಪರ್ಧೆಗಳು ನಡೆಯಲಿವೆ.

ಗುಂಪು ಸ್ಪರ್ಧೆಗಳು: ಪುರುಷರಿಗೆ ವಾಲಿಬಾಲ್‌ಹಾಗೂ ಮಹಿಳೆಯರಿಗೆ ಥ್ರೋಬಾಲ್.

ಮನೋರಂಜನಾ ಸ್ಪರ್ಧೆಗಳು: ಗುಂಪು ವಿಭಾಗದಲ್ಲಿ ಪುರುಷರು ಹಾಗೂ ಮಹಿಳೆಯರಿಗೆ ಹಗ್ಗ–ಜಗ್ಗಾಟ, ವೈಯಕ್ತಿಕ ವಿಭಾಗದಲ್ಲಿ ಪುರುಷರು ಹಾಗೂ ಮಹಿಳೆಯರಿಗೆ ಪೆನಾಲ್ಟಿ ಶೂಟೌಟ್ (ಹಾಕಿ), ವೈಯಕ್ತಿಕ ವಿಭಾಗದಲ್ಲಿ ಪುರುಷರು ಹಾಗೂ ಮಹಿಳೆಯರಿಗೆ ಮ್ಯೂಸಿಕಲ್ ಛೇರ್, ವೈಯಕ್ತಿಕ ವಿಭಾಗದಲ್ಲಿ ಪುರುಷರು ಹಾಗೂ ಮಹಿಳೆಯರಿಗೆ ಬಾಲ್ ಇನ್ ದಿ ಬಾಸ್ಕೆಟ್.


ಸಾಂಸ್ಕೃತಿಕ ಕಾರ್ಯಕ್ರಮ: ಗುಂಪು ಪುರುಷರು, ಮಹಿಳೆಯರು, ಮಿಶ್ರ ವಿಭಾಗದಲ್ಲಿ ಜಾನಪದ ಗೀತೆ, ಗುಂಪು ಪುರುಷರು, ಮಹಿಳೆಯರು, ಮಿಶ್ರ ವಿಭಾಗದಲ್ಲಿ ಜಾನಪದ ನೃತ್ಯ, ಗುಂಪು, ವೈಯಕ್ತಿಕ ವಿಭಾಗದಲ್ಲಿ ವಾದ್ಯ ಸಂಗೀತ, ವೈಯಕ್ತಿಕ ವಿಭಾಗದಲ್ಲಿ ಭಾವಗೀತೆ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಫೆ.8ರಂದು ಪುರುಷ, ಮಹಿಳೆಯರಿಗೆ ಕ್ರಿಕೆಟ್, ಷಟಲ್ ಬ್ಯಾಡ್ಮಿಂಟನ್ ಏರ್ಪಡಿಸಲಾಗಿದೆ. ಭಾಗವಹಿಸಲು ಇಚ್ಛಿಸುವ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಫೆ.7 ಮತ್ತು 8 ರಂದು ಬೆಳಗ್ಗೆ 8 ಗಂಟೆಗೆ ಚಾಮುಂಡಿ ವಿಹಾರ ಕ್ರೀಡಾಂಗಣದ ಸಂಘಟಕರಲ್ಲಿ ವರದಿ ಮಾಡಿಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ನೋಟಿಸ್ ಬೋರ್ಡ್ ಅಥವಾ ದೂ.ಸಂಖ್ಯೆ: 0821–2564179 ಅನ್ನು ಸಂಪರ್ಕಿಸಬಹುದು ಎಂದು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಾಲಾ ವಾರ್ಷಿಕೋತ್ಸವ ಉದ್ಘಾಟನೆ....



ಮೈಸೂರು ತಾಲೂಕಿನ ಕಳಸ್ತವಾಡಿಯಲ್ಲಿರುವ ಏಕದಂತ ಪಬ್ಲಿಕ್ ಶಾಲೆಯ 13ನೇ ವಾರ್ಷಿಕೋತ್ಸವವನ್ನು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಉದ್ಘಾಟಿಸಿದರು. ಈ ವೇಳೆ ಎಂಡಿಸಿಸಿ ಬ್ಯಾಂಕ್ ಮೇಲ್ವಿಚಾರಕ ಮಂಜಣ್ಣ, ಕಳಸ್ತವಾಡಿ ಹಾಲು ಉತ್ಪಾದಕರ ಸಂಘದ ಅಧ್ಯಕ್ಷ ಪುರಂದರ, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಮಂಜುನಾಥ್, ಗ್ರಾಮ ಪಂಚಾಯತಿ ಸದಸ್ಯರಾದ ಪಾಲಳ್ಳಿ ಯಶವಂತ್, ದಿನೇಶ್, ಭಾಸ್ಕರ್, ರಾಜಣ್ಣ, ಶಾಲಾ ಅಧ್ಯಕ್ಷ ಮೋಹನ್ ಕುಮಾರ್, ಕಾರ್ಯದರ್ಶಿ ಪವಿತ್ರ ಹಾಗೂ ಶಾಲಾ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

6.02.2025 ಗುರುವಾರ, ಮಳೆ ನಕ್ಷತ್ರ: ಧನಿಷ್ಠ 06.02.2025 ರಿಂದ 18.02.2025
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಶುಕ್ಲ ಪಕ್ಷ,
ತಿಥಿ: ನವಮಿ, ನಕ್ಷತ್ರ: ಕೃತ್ತಿಕ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 9 ಗಂಟೆಗೆ ಹಿಮ್ಮಡಿ ಮುಳ್ಳು, ಪಿತ್ತಗಂಧೆ (ಶೀತ ಪಿತ್ತ) ಚಿಕಿತ್ಸಾ ಶಿಬಿರ; ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ.

■ **ಪ್ರೀತಿ ಕ್ಯಾನ್ಸರ್ ಸೆಂಟರ್ :** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10 ರಿಂದ.

■ **ತ್ರಯೀನ್ಯಾಸ್ ಶ್ರೀ ವಿದ್ಯಾ ಫೌಂಡೇಷನ್ :** ಶ್ರೀ ಶ್ಯಾಮಲಾ ನವರಾತ್ರಿ ಮಹೋತ್ಸವ, ಬೆಳಗ್ಗೆ 10 ಗಂಟೆಯಿಂದ ಶ್ರೀಚಕ್ರಾರ್ಚನೆ, ನವಾವರಣ ಪೂಜಾ, ಮಧ್ಯಾಹ್ನ 1 ಗಂಟೆಗೆ ಸಗ್ರಹಮಖ ಚಂಡಿಯಾಗ, ಪೂರ್ಣಾಹುತಿ, ಬಲಿಹರಣ, ಕುಮಾರಿ, ಸುವಾಸಿನಿ, ವಟುಕ ಪೂಜಾ, ಮಹಾಮಂಗಳಾರತಿ, ಅಷ್ಟಾವಧಾನ ಸೇವೆ, ಪ್ರಸಾದ ವಿನಿಯೋಗ, ಸ್ಥಳ: ತ್ರಯೀನ್ಯಾಸ್ ಶ್ರೀ ವಿದ್ಯಾ ಫೌಂಡೇಷನ್, ಜಯಲಕ್ಷ್ಮಿಪುರಂ.

■ **ಸಂತ ಫಿಲೋಮಿನಾ ಕಾಲೇಜು, ಕನ್ನಡ ವಿಭಾಗ, ನವ ಕರ್ನಾಟಕ ಪ್ರಕಾಶನ :** ಬೃಹತ್ ಪುಸ್ತಕ ಪ್ರದರ್ಶನ, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 10.30ಕ್ಕೆ

■ **ಆಲ್ ಇಂಡಿಯಾ ಡೆಮಾಕ್ರೆಟಿಕ್ ಯೂತ್ ಆರ್ಗನೈಸೇಷನ್ :** ಯುವಜನರ ಸಂಕಲ್ಪ ಸಮಾವೇಶ, ಉದ್ಘಾಟನೆ : ಮೆಡಿಕಲ್ ಸರ್ವಿಸ್ ಸೆಂಟರ್ ರಾಜ್ಯಾಧ್ಯಕ್ಷ ಡಾ. ಸುಧಾ ಕಾಮತ್, ಪ್ರಾಸ್ತಾವಿಕ ನುಡಿ : ಎಐಡಿವೈಒ ಜಿಲ್ಲಾ ಕಾರ್ಯದರ್ಶಿ ಎಸ್. ಸುಮಾ, ಆಶಯ ನುಡಿ : ರಾಜ್ಯ ಕಾರ್ಯದರ್ಶಿ ಸಿದ್ಧಲಿಂಗ ಬಾಗೇವಾಡಿ, ಅಧ್ಯಕ್ಷತೆ : ಜಿಲ್ಲಾಧ್ಯಕ್ಷ ಸುನಿಲ್ ಟಿ.ಆರ್., ಸ್ಥಳ: ಗೋವರ್ಧನ್ ಹೋಟೆಲ್ ಸಭಾಂಗಣ, ಶ್ರೀ ಹರ್ಷ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಶ್ರೀ ಶ್ರೀ 101 ಗಣಪತಿ ದೇವಸ್ಥಾನ ಟ್ರಸ್ಟ್ :** ಶ್ರೀ ವೀರಭದ್ರೇಶ್ವರ ಪ್ರತಿಷ್ಠಾ ಮಹೋತ್ಸವ, ಬೆಳಗ್ಗೆ 7 ಗಂಟೆಗೆ ಶ್ರೀ ಮಹದೇಶ್ವರ ದೇವಸ್ಥಾನದಿಂದ ಅಗ್ರತೀರ್ಥ ಸಂಗ್ರಹ ಮಂಗಳವಾದ್ಯ, ನಂದಿಕಂಭ, ವೀರಗಾಸೆ, ಹಸು–ಕರು ಸಹಿತ ಯಾಗಶಾಲಾ ಪ್ರವೇಶ, ಪುಣ್ಯಾಹ ನಾಂದಿ ಪಂಚಗವ್ಯ ಸಾಧನ ಪೋಷಣೆ, ವಾಸ್ತು, ರಾಕ್ಷೋಘ್ನ ಪೂಜೆ, ರಕ್ಷಾಪೂಜೆ ಬಂಧನ, ಧಾನ್ಯದಿವಾಸ ಸಂಜೆ 4.30ಕ್ಕೆ ಜಲಾಧಿವಾಸ, ಕಲಶಾಧಿವಾಸ, ನವಗ್ರಹ ಪೂಜೆ, ಹೋಮ, ಅಂಕುರಾರ್ಪಣ ಕಲಸ ಪೂಜೆ, ಪ್ರಧಾನ ಹೋಮ, ಪೀಠಪೂಜೆ ಯಂತ್ರ ಮತ್ತು ನವರತ್ನನ್ಯಾಸ, ಸ್ಥಳ: ದೇವಸ್ಥಾನ ಟ್ರಸ್ಟ್ ಆವರಣ, ತ್ಯಾಗರಾಜ ರಸ್ತೆ, ಕೆ.ಆರ್. ಮೊಹಲ್ಲಾ.

■ **ಮೈಸೂರು ಜಿಲ್ಲಾ ಕ್ರೀಡಾ ಮತ್ತು ಸಾಂಸ್ಕೃತಿಕ ವೇದಿಕೆ :** ವಿಶ್ವಕಪ್ ಖೋ ಖೋ ಸಾಧಕರಾದ ಬಿ. ಚೈತ್ರಾ ಹಾಗೂ ಎಂ.ಕೆ. ಗೌತಮ್ ಅವರಿಗೆ ಅಭಿನಂದನಾ ಸಮಾರಂಭ, ಅಧ್ಯಕ್ಷತೆ : ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್, ಅಭಿನಂದಿಸುವವರು : ಹಿರಿಯ ಖೋ ಖೋ ಆಟಗಾರ ಹಾಗೂ ಅರ್ಜುನ ಪ್ರಶಸ್ತಿ ಪುರಸ್ಕೃತರಾದ ಶ್ರೀಮತಿ ಶೋಭಾ ನಾರಾಯಣ್, ಮುಖ್ಯ ಅತಿಥಿಗಳು : ಜೆಎಸ್‌ಎಸ್ ದಂತ ಕಾಲೇಜು ಪ್ರಾಧ್ಯಾಪಕರಾದ ಡಾ. ಉಷಾ ಹೆಗ್ಗಡೆ, ವಿಶ್ರಾಂತ ದೈಹಿಕ ಶಿಕ್ಷಣ ನಿರ್ದೇಶಕ ಡಾ.ಸಿ. ಕೃಷ್ಣ, ಉಪಸ್ಥಿತರು : ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ. ಚಂದ್ರಶೇಖರ್, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಹೆಳವರಹುಂಡಿ ಸಿದ್ದಪ್ಪ, ಸ್ಥಳ: ಜಗನ್ಮೋಹನ ಅರಮನೆ, ಬೆಳಗ್ಗೆ 11ಕ್ಕೆ.

■ **ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ :** ದ್ವೈತ ಮತ ಪ್ರತಿಷ್ಠಾಪನಾಚಾರ್ಯ ಶ್ರೀ ಮಧ್ವಾಚಾರ್ಯರ ಜಯಂತಿ ಅಂಗವಾಗಿ ಮಧ್ವನವಮಿ, ಮುಖ್ಯ ಅತಿಥಿಗಳು: ಮುಡಾ ಮಾಜಿ ಅಧ್ಯಕ್ಷ ಎಚ್.ವಿ. ರಾಜೀವ್, ಹಿರಿಯ ಸಮಾಜ ಸೇವಕ ಕೆ.ರಘುರಾಮ್ ವಾಜಪೇಯಿ, ಯುವ ಮುಖಂಡರಾದ ಎನ್.ಎಂ.ನವೀನ್‌ಕುಮಾರ್, ಎಸ್.ಬಿ.ವಾಸದೇವಮೂರ್ತಿ, ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆಯ ಪ್ರಧಾನ ಕಾರ್ಯದರ್ಶಿ ವಿಕ್ರಮ ಅಯ್ಯಂಗಾರ್, ನಿರೂಪಕ ಅಜಯ್ ಶಾಸ್ತ್ರಿ, ಸ್ಥಳ: ಶ್ರೀ ಗುರು ರಾಘವೇಂದ್ರ ಸ್ವಾಮಿಗಳ ಮಠ, ನವಿಲು ರಸ್ತೆ, ಕುವೆಂಪುನಗರ, ಬೆಳಗ್ಗೆ 11.30ಕ್ಕೆ.

■ **ಶ್ರೀ ದುರ್ಗಾ ಫೌಂಡೇಷನ್ ಹಾಗೂ ಅರಿವು ಸಂಸ್ಥೆ :** ಸ್ವಯಂ ಪ್ರೇರಿತ ರಕ್ತದಾನ, ಎಸ್‌ಇ ಗಿರೀಶ್ ಅವರಿಗೆ ಜೀವರಕ್ಷಕ ಸೇವಾ ಪ್ರಶಸ್ತಿ ಪ್ರದಾನ ಸಮಾರಂಭ, ಮುಖ್ಯ ಅತಿಥಿಗಳು : ಶಾಸಕ ಟಿ.ಎಸ್.ಶ್ರೀವತ್ಸ, ಬಿಜೆಪಿ ನಗರಾಧ್ಯಕ್ಷ ಎಲ್ ನಾಗೇಂದ್ರ, ಜಿಲ್ಲಾಧ್ಯಕ್ಷ ಮಹಾದೇವಸ್ವಾಮಿ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಎಂಸಿಸಿಐ ಅಧ್ಯಕ್ಷ ಕೆ.ಬಿ.ಲಿಂಗರಾಜು, ಮಂಡಿ ಮೊಹಲ್ಲಾ ವೃತ್ತ ನಿರೀಕ್ಷಕ ನಾಗೇಶ್, ಸ್ಥಳ: ಜೀವಧಾರ ರಕ್ತನಿಧಿ ಕೇಂದ್ರ ಆವರಣ, ನ್ಯೂ ಸಯ್ಯಾಜಿರಾವ್ ರಸ್ತೆ, ಮಧ್ಯಾಹ್ನ 12ಕ್ಕೆ.

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** ಶ್ರೀ ತ್ಯಾಗರಾಜ ಆರಾಧನೆ ಪ್ರಯುಕ್ತ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ, ವಿದುಷಿ ಅರ್ಚನಾ, ವಿದುಷಿ ಸಮನ್ವಿ ಅವರಿಂದ ದ್ವಂದ್ವ ಗಾಯನ, ಸಹಕಾರ : ವಿದ್ವಾನ್ ಪೃಥ್ವಿ ಭಾಸ್ಕರ್, ವಿದ್ವಾನ್ ನಂದನ್ ಕಶ್ಯಪ್, ವಿದ್ವಾನ್ ಕಾರ್ತಿಕ್ ರವಿಶಂಕರ್, ಸ್ಥಳ: ಶ್ರೀರಾಮಮಂದಿರ, ಜಯನಗರ, ಸಂಜೆ 6 ರಿಂದ 8.30 ರವರೆಗೆ.

■ **ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ :** 59ನೇ ವರ್ಷದ ತೈಪೂಸಂ ಮಹೋತ್ಸವ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು, ಸಂಜೆ 6.30ಕ್ಕೆ ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನದ ಭಕ್ತ ವೃಂದದವರಿಂದ ದೇವರನಾಮ ಹಾಗೂ ಭಜನಾ ಕಾರ್ಯಕ್ರಮ, ವಿದುಷಿ ಎಂ.ಬಿ. ಶಾಂತಕುಮಾರಿ ಅವರಿಂದ ಶಾಸ್ತ್ರೀಯ ಸಂಗೀತ ಶ್ರೀ ಸ್ವಾಮಿಯ ಭಕ್ತಿಗೀತೆ, ಜಾನಪದ ಗೀತೆ, ಸುಗಮ ಸಂಗೀತ, ಸ್ಥಳ: ದೇವಸ್ಥಾನದ ಆವರಣ, ವಿಶ್ವೇಶ್ವರನಗರ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜಿ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

ನೇರಳೆ ಗ್ರಾಮ, ಹೆಚ್.ಡಿ. ಕೋಟೆ ತಾ.

■ **ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು (ಹೆಚ್.ಡಿ. ಕೋಟೆ) :** 23ನೇ ವಾರ್ಷಿಕ ವಿಶೇಷ ಶಿಬಿರದ ಸಮಾರೋಪ ಸಮಾರಂಭ, ಸಾನ್ನಿಧ್ಯ : ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಅಧ್ಯಕ್ಷತೆ : ಮಾಜಿ ಶಾಸಕ ಚಿಕ್ಕಣ್ಣ, ಬಹುಮಾನ ವಿತರಣೆ : ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಮಂಜು ಕಬಿನಿ, ಪ್ರಶಸ್ತಿ ಪತ್ರ ವಿತರಣೆ: ಜೆಡಿಎಸ್ ಮುಖಂಡ ಸಿ.ಜಯಪ್ರಕಾಶ್, ಪಿಡಿಓ ಪ್ರಭಾಕರ್, ಉಪಸ್ಥಿತರು : ಡಾ.ಶ್ರೀಮತಿ ಪವಿತ್ರ, ಪ್ರಾಧ್ಯಾಪಕ ಪ್ರಕಾಶ್, ಸ್ಥಳ: ನೇರಳೆ ಗ್ರಾಮ, ಹೆಚ್.ಡಿ. ಕೋಟೆ ತಾ.

ಮೈಸೂರು ಆಕಾಶವಾಣಿ




ಬೆಳಗ್ಗೆ: 6.10 ಚಿಂತನ–ಡಾ. ವಿನೋದ, 6.15 ಗೀತಾರಾಧನ, 6.35 ಸೀರೆಯ ಸೊಬಗು –ವೈವಿಧ್ಯಮಯ ಸೀರೆಗಳ ಪರಿಚಯ, ಪ್ರಸ್ತುತಿ : ಜಯಶ್ರೀ ಹೆಗಡೆ, 6.40 ಅರಿವಿನ ಶಿಖರ –ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಅಂಬಯ್ಯನುಲಿ, ಸಿ. ವಿಶ್ವನಾಥ್, ವ್ಯಾಖ್ಯಾನ–ಡಾ. ಬಿ. ವಿ. ವಸಂತಕುಮಾರ್, 6.50 ರೈತರಿಗೆ ಸಲಹೆ, 7.15 ಹಸಿರುಹೊನ್ನು – ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ಅರಣ್ಯ ಇಲಾಖೆ, ಕರ್ನಾಟಕ ಸರ್ಕಾರ, 8.30 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಾಡಿನಲ್ಲಿನ ಕಥೆಗಳು. ಭಾಗವಹಿಸುತ್ತಾರೆ : ನಾಗರಹೊಳೆ ಹುಲಿ ಸಂರಕ್ಷಿತಾ ಪ್ರದೇಶದ ಹುಣಸೂರು ಉಪವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಎನ್. ಲಕ್ಷ್ಮೀಕಾಂತ್, ಪ್ರಸ್ತುತಿ : ಜಿ. ಶಾಂತಕುಮಾರ್

ಮಧ್ಯಾಹ್ನ: 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಉರ್ದು ಕಾರ್ಯಕ್ರಮ, 4.00 ಜನಪದ ಸಂಗೀತ, 4.30 ಸಂಧ್ಯಾರಾಗ–ನಿವೃತ್ತ ಅರಣ್ಯ ಸಂರಕ್ಷಣಾಧಿಕಾರಿ ಹೆಚ್.ಸಿ. ಕಾಂತರಾಜು ಹಾಗೂ ಅವರ ಮಡದಿ ಕೆ. ಎಸ್. ಗೀತಾ ಅವರೊಂದಿಗೆ ಮಾತುಕತೆ. ಪ್ರಸ್ತುತಿ : ಜಿ. ಶಾಂತಕುಮಾರ್, 6.10 ಸೀರೆಯ ಸೊಬಗು–ವೈವಿಧ್ಯಮಯ ಸೀರೆಗಳ ಪರಿಚಯ, ಪ್ರಸ್ತುತಿ : ಜಯಶ್ರೀ ಹೆಗಡೆ, 6.50 ಕೃಷಿರಂಗ–ಕಿಸಾನ್ ವಾಣಿ, ಪ್ರಾಯೋಜಕರು : ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ 'ನಂ ಕಂಪನಿ' ರೈತ ಉತ್ಪಾದಕ ಸಂಸ್ಥೆಗಳ ಸಬಲೀಕರಣ ಕುರಿತ ಬಾನುಲಿ ಸರಣಿ ರಾಗಿ ಮೌಲ್ಯವರ್ಧನೆ ಹಾಗೂ ಮಾರಾಟ ಕುರಿತು ಸಂವಾದ. ಭಾಗವಹಿಸುತ್ತಾರೆ– ಬಸರಾಳು ರೈತ ಉತ್ಪಾದಕ ಕಂಪನಿಯ ಅಧ್ಯಕ್ಷರಾದ ಚಿಕ್ಕೇಗೌಡ ಮತ್ತು ಕೆರೆಗೋಡು ರೈತ ಉತ್ಪಾದಕ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರಾದ ಹೆಚ್. ಕೆ.ರಾಜು, ಪ್ರಸ್ತುತಿ : ಎನ್. ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಸಂಸದ್ ಸಮೀಕ್ಷಾ, 8.15 ಯುವವಾಣಿ–ಇತ್ತೀಚೆಗೆ ಜರುಗಿದ ಮೈಸೂರು ವಿಶ್ವವಿದ್ಯಾಲಯದ 105 ಘಟಿಕೋತ್ಸವದಲ್ಲಿ ಬ್ಯಾಚಲರ್ ಆಫ್ ಪರ್‌ಫಾರ್ಮಿಂಗ್ ಆರ್ಟ್ಸ್ ವಿಷಯದಲ್ಲಿ ಪ್ರಥಮ ರ್‍ಯಾಂಕ್‌ನೊಂದಿಗೆ 4 ಚಿನ್ನದ ಪದಕ ಹಾಗೂ ನಗದು ಪುರಸ್ಕಾರ ಗಳಿಸಿದ ಮೈಸೂರಿನ ಕಲ್ಯಾಣಿ. ಹೆಚ್. ಆರ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ– ಬೇದ್ರೆ ಮಂಜುನಾಥ್, 9.30 ಕನ್ನಡ ಭಾರತಿ, 10.00 ಸಂಸತ್ತಿನ ಪ್ರಶ್ನೋತ್ತರ ಕಲಾಪಗಳ ಧ್ವನಿಮುದ್ರಣದ ಪ್ರಸಾರ

ಚುನಾಯಿತ ಜನಪ್ರತಿನಿಧಿಗಳಿಲ್ಲದ ಕಾರಣ; ಮೈಸೂರು ಮಹಾನಗರಪಾಲಿಕೆಗೆ

15ನೇ ಹಣಕಾಸು ಆಯೋಗದ ಅನುದಾನ ಖೋತಾ

ಸಾಂಸ್ಕೃತಿಕ ನಗರಿಯಲ್ಲಿ ರಸ್ತೆ, ನೀರು, ಒಳಚರಂಡಿ, ಬೀದಿದೀಪ, ಪಾರ್ಕ್ ನಿರ್ವಹಣೆಯಂತಹ ಕಾಮಗಾರಿಗಳಿಗೆ ತೀವ್ರ ಹಿನ್ನಡೆ



ಎಸ್.ಟಿ.ರವಿಕುಮಾರ್

ಮೈಸೂರು, ಫೆ.5– ಈಗಾಗಲೇ ಆರ್ಥಿಕ ಬಿಕ್ಕಟ್ಟಿನಿಂದ ತತ್ತರಿಸಿರುವ ಮೈಸೂರು ಮಹಾನಗರಪಾಲಿಕೆಗೆ ಇದೀಗ ಮತ್ತೊಂದು ಆಘಾತ ಎದುರಾಗಿದೆ. ಕೇಂದ್ರ ಸರ್ಕಾರದಿಂದ ಪ್ರತೀ ವರ್ಷ ಬಿಡುಗಡೆಯಾಗುತ್ತಿದ್ದ 15ನೇ ಹಣಕಾಸು ಆಯೋಗದ ಅನುದಾನವನ್ನು ಚುನಾಯಿತ ಪ್ರತಿನಿಧಿಗಳಿಲ್ಲದ ಕಾರಣ ನೀಡಲು ಬಾರದು ಎಂದು ಸ್ಪಷ್ಟವಾಗಿ ತಿಳಿಸಲಾಗಿದೆ.

ಜನವರಿ 29ರಂದು ಪೌರಾಡಳಿತ ನಿರ್ದೇಶನಾಲಯದಿಂದ ಮೈಸೂರು ಮಹಾನಗರಪಾಲಿಕೆ ಆಯುಕ್ತರಿಗೆ ಈ ಸಂಬಂಧ ಪತ್ರ ರವಾನಿಸಿದ್ದು, ಸರ್ಕಾರದ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಜನವರಿ 18ರಂದು ನಡೆದ ಯೋಜನಾ ನಿರ್ದೇಶಕರ ಸಭೆಯಲ್ಲಿ 15ನೇ ಹಣಕಾಸು ಆಯೋಗದ ಮಾರ್ಗಸೂಚಿ ಅನುಸಾರ 2024–25ನೇ ಸಾಲಿನಲ್ಲಿ ಮೈಸೂರು ಸೇರಿದಂತೆ 43 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಚುನಾಯಿತ ಕೌನ್ಸಿಲ್, ಚುನಾಯಿತ ಪ್ರತಿನಿಧಿಗಳು ಇಲ್ಲದೇ ಇರುವುದರಿಂದ ಕೇಂದ್ರದ 15ನೇ ಹಣಕಾಸು ಆಯೋಗದ ಅನುದಾನ ಪಡೆಯಲು ಅರ್ಹರಿಲ್ಲವಾದ್ದರಿಂದ ಸುಮಾರು 43 ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನ ಬಿಡುಗಡೆ ಆಗದೆ ಇರಬಹುದು. ಆದ್ದರಿಂದ ಈ ಸಂಸ್ಥೆಗಳು 2024–25ನೇ ಸಾಲಿನಲ್ಲಿ 15ನೇ ಹಣಕಾಸು ಆಯೋಗದ ಅನುದಾನ ಅನ್ವಯ ಯಾವುದೇ ಕಾಮಗಾರಿಯನ್ನು ಕೈಗೊಳ್ಳದಂತೆ ಸ್ಪಷ್ಟ ನಿರ್ದೇಶನ ನೀಡಿದೆ.

ಅದರಂತೆ ಮೈಸೂರು ಮಹಾನಗರಪಾಲಿಕೆ, ಸ್ಥಳೀಯ ಸಂಸ್ಥೆಗಳಾದ ಬೋಗಾದಿ ಪಟ್ಟಣ ಪಂಚಾಯಿತಿ, ಹೂಟಗಳ್ಳಿ ನಗರಸಭೆ, ಕಡಕೊಳ ಪಟ್ಟಣ ಪಂಚಾಯತಿ, ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ಹಾಗೂ ಶ್ರೀರಾಂಪುರ ಪಟ್ಟಣ ಪಂಚಾಯತಿಗಳಲ್ಲಿ ಚುನಾಯಿತ ಪ್ರತಿನಿಧಿಗಳು ಇಲ್ಲದ ಕಾರಣ 15ನೇ ಹಣಕಾಸು ಆಯೋಗದ ಅನುದಾನ ಈ ಬಾರಿ ಲಭ್ಯವಿಲ್ಲ. ಈ ಹಿಂದೆ ಪ್ರತೀ ವರ್ಷ ಸರ್ಕಾರದಿಂದ ಜನವರಿ ಮಾಹೆಯಲ್ಲಿ ಪತ್ರ ಬರೆದು 15ನೇ ಹಣಕಾಸು ಆಯೋಗದ ಅನುದಾನದಡಿ ಕೈಗೊಳ್ಳಬಹುದಾದ ವಿವಿಧ ಕಾಮಗಾರಿಗಳಿಗೆ ಅಂದಾಜು ತಯಾರಿಸಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ ಸಿದ್ಧ ಮಾಡಿಕೊಳ್ಳುವಂತೆ ತಿಳಿಸಲಾಗುತ್ತಿತ್ತು.

ಆದರೆ, ಈ ಬಾರಿ ವಿಶೇಷ ಅನುದಾನ ಲಭ್ಯವಾಗದ ಕಾರಣ ಆ ಅನುದಾನದನ್ವಯ ಯಾವುದೇ ಕಾಮಗಾರಿಯನ್ನು ಕೈಗೊಳ್ಳದಂತೆ ಸ್ಪಷ್ಟ ನಿರ್ದೇಶನ ಬಂದಿರುವುದರಿಂದ ಮೈಸೂರು ಮಹಾನಗರಪಾಲಿಕೆ ಸೇರಿದಂತೆ ಇತರೆ ಸ್ಥಳೀಯ ಸಂಸ್ಥೆಗಳಲ್ಲಿ ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಳ್ಳಲು ಅಡ್ಡಿಯಾದಂತಾಗಿದೆ. ಚುನಾಯಿತ ಜನಪ್ರತಿನಿಧಿಗಳಿಲ್ಲದೆ ಕೇಂದ್ರದ 15ನೇ ಹಣಕಾಸು ಆಯೋಗವು ಯಾವುದೇ ಸ್ಥಳೀಯ ಸಂಸ್ಥೆಗಳಿಗೆ ಅನುದಾನ ನೀಡುವುದನ್ನು ನಿರ್ಬಂಧಿಸಿರುವುದರಿಂದ ಮೈಸೂರು ಸೇರಿದಂತೆ ರಾಜ್ಯದ 43 ನಗರ ಸ್ಥಳೀಯ ಸಂಸ್ಥೆಗಳಿಗೆ 2024–25ನೇ ಸಾಲಿನ ವಿಶೇಷ ಅನುದಾನ ಖೋತಾ ಆದಂತಾಗಿದೆ.

ಇದರ ಜೊತೆಗೆ ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಬೆಳಗಾವಿ, ಬಾಗಲಕೋಟೆ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ದಾವಣಗೆರೆ, ಹಾವೇರಿ, ಕಲಬುರ್ಗಿ, ಕೋಲಾರ, ರಾಮನಗರ, ಶಿವಮೊಗ್ಗ, ತುಮಕೂರು, ಉಡುಪಿ, ಉತ್ತರ ಕನ್ನಡ ಹಾಗೂ ವಿಜಯಪುರ ಜಿಲ್ಲೆಗಳ ನಗರ ಸ್ಥಳೀಯ ಸಂಸ್ಥೆಗಳು ಸಹ ಚುನಾಯಿತ ಸದಸ್ಯರಿಲ್ಲದೆ ನಡೆಯುತ್ತಿರುವುದರಿಂದ ಪೌರಾಡಳಿತ ನಿರ್ದೇಶನಾಲಯವು ಪ್ರಸ್ತುತ ಸಾಲಿನ 15ನೇ ಹಣಕಾಸು ಆಯೋಗದ ಅನುದಾನವನ್ನು ಬಿಡುಗಡೆ ಮಾಡುವುದಿಲ್ಲ ಎಂದು ಆಯಾ ಜಿಲ್ಲೆಗಳ ನಗರಪಾಲಿಕೆ ಆಯುಕ್ತರು ಹಾಗೂ ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಿಗೆ ಮೊದಲೇ ಮಾಹಿತಿ ನೀಡಿದೆ.

ಈ ನಡುವೆ ಮೈಸೂರು ಮಹಾನಗರಪಾಲಿಕೆಗೆ ಕರ್ನಾಟಕ ಸರ್ಕಾರದಿಂದಲೂ ಅಗತ್ಯ ಅನುದಾನ ಮಂಜೂರಾಗುತ್ತಿಲ್ಲ. ಇನ್ನಾವುದೇ ಕೇಂದ್ರ ಪುರಸ್ಕೃತ ಯೋಜನೆಗಳಿಂದಲೂ ಅನುದಾನ ಲಭಿಸಿಲ್ಲ. ಕೇವಲ ಆಸ್ತಿ ತೆರಿಗೆ, ನೀರಿನ ಕರ, ಉದ್ಯಮಿ ರಹದಾರಿ ಶುಲ್ಕ, ಜಾಹೀರಾತು ಬಾಡಿಗೆ ಶುಲ್ಕ ಇನ್ನಿತರೆ ಮೂಲಗಳಿಂದ ಸಂಪನ್ಮೂಲ ಕ್ರೋಢೀಕರಿಸಿಕೊಂಡು ಅದರಲ್ಲೇ ಕುಡಿಯುವ ನೀರು ಪೂರೈಕೆ, ಬೀದಿದೀಪ, ಒಳಚರಂಡಿ, ಪಾರ್ಕ್ ನಿರ್ವಹಣೆ, ಸ್ವಚ್ಛತೆ, ರಸ್ತೆ ಕಾಮಗಾರಿ ಇನ್ನಿತರೆ ಸೌಲಭ್ಯಗಳನ್ನು ಒದಗಿಸಿ ನಗರ ನಿರ್ವಹಣೆ ಮಾಡಬೇಕಿರುವುದರಿಂದ ಪಾಲಿಕೆಗೆ ಹಣಕಾಸಿನ ಕೊರತೆ ಎದುರಾಗಿದೆ. ಅಭಿವೃದ್ಧಿ ಕಾಮಗಾರಿ ಪೂರ್ಣಗೊಳಿಸಿ ವರ್ಷಗಳಾಗಿ ಕಳೆದರೂ ಗುತ್ತಿಗೆದಾರರಿಗೂ ಬಾಕಿ ನೀಡಲು ಪಾಲಿಕೆಗೆ ಸಾಧ್ಯವಾಗದ ಪರಿಸ್ಥಿತಿ ಇರುವಾಗ ಇದೀಗ ಕೇಂದ್ರದ 15ನೇ ಹಣಕಾಸು ಆಯೋಗದ ಅನುದಾನವೂ ಕೈಕೊಟ್ಟಿರುವುದರಿಂದ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ಈ ಯೋಜನೆಯಡಿ ಪ್ರತೀ ವರ್ಷ ಮೈಸೂರು ಮಹಾನಗರಪಾಲಿಕೆಗೆ 65ರಿಂದ 70 ಕೋಟಿ ರೂ. ಅನುದಾನ ಲಭ್ಯವಾಗುತ್ತಿತ್ತು. ಜನವರಿ ಮಾಹೆಯಲ್ಲೇ ಅದಕ್ಕೆ ಪೂರ್ವ ಸಿದ್ಧತೆ ಮಾಡಿಕೊಂಡು ಏಪ್ರಿಲ್–ಮೇ ಒಳಗೆ ನಗರದ ಎಲ್ಲಾ 65 ವಾರ್ಡ್‌ಗಳಲ್ಲಿ ಅಗತ್ಯವಾದ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುತ್ತಿತ್ತು. ಇದೀಗ ಅನುದಾನದ ಕೊರತೆಯಿಂದಾಗಿ ಮೈಸೂರಿನ ನಿರ್ವಹಣೆ ಹಾಗೂ ಹೊಸ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಆರ್ಥಿಕ ಸಂಕಷ್ಟ ಎದುರಾಗಿದೆ.

> ಕೇಂದ್ರ ಸರ್ಕಾರದ 15ನೇ ಹಣಕಾಸು ಆಯೋಗದ ಯೋಜನೆಗಳಿಗೆ ಮಹಾನಗರ ಪಾಲಿಕೆಯ ಚುನಾಯಿತ ಜನಪ್ರತಿನಿಧಿಗಳಿರುವ ಕೌನ್ಸಿಲ್ ಕಡ್ಡಾಯವಾಗಿ ಅನುಮೋದನೆ ನೀಡಬೇಕಾಗುತ್ತದೆ. ಚುನಾಯಿತ ಜನಪ್ರತಿನಿಧಿಗಳು ಇಲ್ಲದೇ ಇರುವಾಗ ಕೌನ್ಸಿಲ್ ಅನುಮೋದನೆ ಸಾಧ್ಯವಿಲ್ಲ. ಹೀಗಾಗಿ ಕೇಂದ್ರದ 15ನೇ ಹಣಕಾಸು ಆಯೋಗದ ಅನುದಾನ ಬರುವ ಸಾಧ್ಯತೆ ಇಲ್ಲ. ನಿನ್ನೆ (ಮಂಗಳವಾರ) ರಾಜ್ಯ ಹಣಕಾಸು ಆಯೋಗದ ಅಧಿಕಾರಿಗಳು ಪಾಲಿಕೆಗೆ ಬಂದಿದ್ದರು. ಅವರ ಪ್ರಕಾರ ಚುನಾಯಿತ ಜನಪ್ರತಿನಿಧಿಗಳ ಕೌನ್ಸಿಲ್ ಅಸ್ತಿತ್ವಕ್ಕೆ ಬಂದಾಗ ಹಣಕಾಸು ಆಯೋಗದ ಅನುದಾನ ಬರಬಹುದು. ಆದರೆ ನಿಶ್ಚಿತವಾಗಿ ಬಂದೇ ಬರುತ್ತದೆಯೇ ಎಂಬುದರ ಬಗ್ಗೆ ಸ್ಪಷ್ಟತೆ ಇಲ್ಲ. 2023–24ನೇ ಸಾಲಿನಲ್ಲಿ 2023ರ ನವೆಂಬರ್‌ವರೆಗೆ ಚುನಾಯಿತ ಕೌನ್ಸಿಲ್ ಅಸ್ತಿತ್ವದಲ್ಲಿತ್ತು. ಆದ್ದರಿಂದ ಆ ಸಾಲಿನ ಅನುದಾನ ಬರುತ್ತದೆ. 2024–25ನೇ ಸಾಲಿನಲ್ಲಿ ಚುನಾಯಿತ ಕೌನ್ಸಿಲ್ ಇಲ್ಲದೇ ಇರುವುದರಿಂದ ಸದ್ಯಕ್ಕೆ ಹಣಕಾಸು ಆಯೋಗದ ಅನುದಾನ ಲಭ್ಯವಿಲ್ಲ. ಹೀಗಾಗಿ ಈಗಾಗಲೇ ಪ್ರಾರಂಭವಾಗಿರುವ ಯೋಜನೆಗಳನ್ನು ಪೂರ್ಣಗೊಳಿಸಲು ರಾಜ್ಯ ಸರ್ಕಾರದಿಂದ ವಿಶೇಷ ಅನುದಾನ ಒದಗಿಸುವಂತೆ ರಾಜ್ಯ ಮುಖ್ಯ ಕಾರ್ಯದರ್ಶಿಗಳಿಗೆ ಮನವಿ ಮಾಡಲಾಗುವುದು. ಅಲ್ಲದೇ ಪಾಲಿಕೆಗೆ ಹೆಚ್ಚಿನ ಮೊತ್ತದ ಕಂದಾಯ ಬಾಕಿ ಉಳಿಸಿಕೊಂಡಿರುವವರನ್ನು ಮನವೊಲಿಸಿ ಸಂಪನ್ಮೂಲ ಕ್ರೋಢೀಕರಣಕ್ಕೆ ಪ್ರಯತ್ನಿಸುವ ನಿಟ್ಟಿನಲ್ಲಿ ಕ್ರಮಗಳನ್ನು ಕೈಗೊಳ್ಳುತ್ತಿದ್ದೇವೆ.
>
> – ಶೇಖ್ ತನ್ವೀರ್ ಆಸೀಫ್, ಮೈಸೂರು ಪಾಲಿಕೆ ಆಯುಕ್ತರು



> "ಚುನಾಯಿತ ಪ್ರತಿನಿಧಿಗಳು ಇಲ್ಲದ ಕಾರಣ ಮೈಸೂರು ಮಹಾನಗರಪಾಲಿಕೆಗೆ ಕೇಂದ್ರದ 2024–25ನೇ ಸಾಲಿನ 15ನೇ ಹಣಕಾಸು ಆಯೋಗದ ಅನುದಾನ ಹಂಚಿಕೆ ಆಗುವುದಿಲ್ಲ ಎಂದು ಸರ್ಕಾರವೇ ಲಿಖಿತವಾಗಿ ಮಾಹಿತಿ ನೀಡಿರುವುದು ಮೈಸೂರಿನ ಸಮಗ್ರ ಅಭಿವೃದ್ಧಿ ಹಾಗೂ ನಿರ್ವಹಣೆಗೆ ತೀವ್ರ ಹಿನ್ನಡೆಯಾಗಿದೆ. ಈ ವಿಶೇಷ ಅನುದಾನದಿಂದ ಎಲ್ಲಾ ವಾರ್ಡ್‌ಗಳಲ್ಲಿ ಒಂದಷ್ಟು ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿದ್ದವು. ಆದರೆ ಪಾಲಿಕೆಯೂ ಸೇರಿದಂತೆ ಇನ್ನಿತರೆ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಯೇ ನಡೆದಿಲ್ಲ. ಹಾಗಾಗಿ ಈ ಅನುದಾನ ಕೈ ತಪ್ಪುತ್ತಿದೆ. ಅದಕ್ಕೆ ನೇರವಾಗಿ ರಾಜ್ಯ ಸರ್ಕಾರವೇ ಹೊಣೆ. ಸದ್ಯದ ಪರಿಸ್ಥಿತಿಯಲ್ಲಿ ಮೈಸೂರು ಮಹಾ ನಗರಪಾಲಿಕೆಯಿಂದ ಯಾವುದೇ ಹೊಸ ಕಾಮಗಾರಿ ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ. ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿ, ಮೈಸೂರು ಮಹಾನಗರಪಾಲಿಕೆಗೆ ಶೀಘ್ರ ಚುನಾವಣೆ ಘೋಷಿಸಬೇಕು. ಪ್ರಜಾತಂತ್ರ ವ್ಯವಸ್ಥೆಯಡಿ ಸಂವಿಧಾನದ ಆಶಯಗಳನ್ನು ಅನುಷ್ಠಾನಗೊಳಿಸುವ ಇಚ್ಛೆ ಇದ್ದರೆ ಅಧಿಕಾರ ವಿಕೇಂದ್ರೀಕರಣದ ತತ್ವವನ್ನು ಪಾಲಿಸಿ, ಕೇಂದ್ರೀಕೃತ ಆಡಳಿತಕ್ಕೆ ಬ್ರೇಕ್ ಹಾಕದಿದ್ದಲ್ಲಿ ಸಮಾನತೆ, ಸಾಮಾಜಿಕ ನ್ಯಾಯ ಹಾಗೂ ಸಂವಿಧಾನದ ಆಶಯಗಳು ನಾಶವಾಗುತ್ತವೆ. –ಶಿವಕುಮಾರ್, ಮಾಜಿ ಮೇಯರ್



ಕನ್ನಡ ಶಾಸ್ತ್ರೀಯ ಭಾಷಾ ಕೇಂದ್ರವನ್ನು ಮೈಸೂರಿಂದ ಬೆಂಗಳೂರಿಗೆ ಸ್ಥಳಾಂತರಿಸುವ ಚಿಂತನೆ ಕೈಬಿಡುವಂತೆ

ಕನ್ನಡಪರ ಚಿಂತಕರ ಆಗ್ರಹ

*** ನೃಪತುಂಗ ಶಾಲೆಯಲ್ಲಿ ನಡೆದ ಕನ್ನಡಪರ, ಪ್ರಗತಿಪರರ ಸಭೆಯಲ್ಲಿ ನಿರ್ಣಯ * ಭಾರತೀಯ ಭಾಷಾ ಸಂಸ್ಥೆಯಿಂದ ಪ್ರತ್ಯೇಕಿಸಿ ಸ್ವಾಯತ್ತತೆ ನೀಡುವ ಭರವಸೆಗೆ ಸ್ವಾಗತ**

ಮೈಸೂರು, ಫೆ.5–ಮೈಸೂರಿನಲ್ಲಿರುವ ಕನ್ನಡ ಶಾಸ್ತ್ರೀಯ ಭಾಷಾ ಕೇಂದ್ರವನ್ನು ಬೆಂಗಳೂರಿಗೆ ಸ್ಥಳಾಂತರಿಸುವ ಆಲೋಚನೆಯನ್ನು ಕೈಬಿಡಬೇಕೆಂದು ಕನ್ನಡ ಕ್ರಿಯಾ ಸಮಿತಿ ಮತ್ತು ಶಾಸ್ತ್ರಿಯ ಕನ್ನಡ ಭಾಷಾ ಹೋರಾಟ ಸಮಿತಿ ವತಿಯಿಂದ ನಡೆದ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.

ಮೈಸೂರಿನ ರಾಮಕೃಷ್ಣನಗರದಲ್ಲಿರುವ ನೃಪತುಂಗ ಕನ್ನಡ ಶಾಲೆಯಲ್ಲಿ ಕನ್ನಡ ಕ್ರಿಯಾಸಮಿತಿ ಅಧ್ಯಕ್ಷ ಮ.ಗು.ಸದಾನಂದಯ್ಯ ಅಧ್ಯಕ್ಷತೆಯಲ್ಲಿ ನಡೆದ ಕನ್ನಡಪರ ಹಾಗೂ ಪ್ರಗತಿಪರ ಸಂಘಟನೆಗಳ ಸದಸ್ಯರ ಸಭೆಯಲ್ಲಿ ಕೆಲವು ಪ್ರಮುಖ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ಮೈಸೂರಿನಲ್ಲಿರುವ ಶಾಸ್ತ್ರೀಯ ಭಾಷಾ ಅತ್ಯುನ್ನತ ಕನ್ನಡ ಕೇಂದ್ರವನ್ನು ಭಾರತೀಯ ಭಾಷಾ ಸಂಸ್ಥೆಯಿಂದ ಪ್ರತ್ಯೇಕಿಸಿ ಸ್ವಾಯತ್ತತೆ ನೀಡಿ ಮುಂದುವರೆಸಲಾಗುವುದು ಎಂಬ ಕೇಂದ್ರ ಸರ್ಕಾರದ ನಿಲುವನ್ನು ಸ್ವಾಗತಿಸಿದ್ದು, ಕೇಂದ್ರದ ಈ ತೀರ್ಮಾನವನ್ನು ಕೂಡಲೇ ಆದೇಶವಾಗಿ ಹೊರಡಿಸಬೇಕೆಂದು ಒತ್ತಾಯಿಸಿತು. ಅದೇ ವೇಳೆ ಕನ್ನಡ ಶಾಸ್ತ್ರೀಯ ಭಾಷಾ ಕೇಂದ್ರವನ್ನು ಮೈಸೂರಿನಿಂದ ಬೆಂಗಳೂರಿಗೆ ಸ್ಥಳಾಂತರಿಸಬೇಕು ಎಂಬ ಆಲೋಚನೆಯನ್ನು ಕೈಬಿಡಬೇಕೆಂದು ಸಭೆ ಒಕ್ಕೊರಲಿನಿಂದ ಒತ್ತಾಯಿಸಿತು. ಈ ಕೇಂದ್ರವು ಮೈಸೂರಿನಲ್ಲಿ ಪ್ರಾರಂಭವಾಗಿ ಹಲವು ವರ್ಷಗಳೇ ಕಳೆದಿವೆ. ಅಲ್ಲದೇ ಈ ಕೇಂದ್ರಕ್ಕೆ ಸ್ವಂತ ಕಟ್ಟಡ ನಿರ್ಮಿಸಲು ಮೈಸೂರು ವಿಶ್ವವಿದ್ಯಾನಿಲಯ ಜಾಗ ಕೊಡುವುದಾಗಿ ಒಪ್ಪಿಗೆ ನೀಡಿದ್ದು, ಅದಕ್ಕೆ ರಾಜ್ಯ ಸರ್ಕಾರದ ಸಮ್ಮತಿಯ ಆದೇಶವೂ ಆಗಿದೆ. ಮೈಸೂರು ನಗರವು ಪಾರಂಪರಿಕ ಹಿನ್ನೆಲೆಯ ಕೇಂದ್ರಸ್ಥಾನವಾಗಿದ್ದು, ವಿದ್ವಾಂಸರ ಬೀಡಾಗಿದೆ. ಅಲ್ಲದೇ ಪ್ರಶಾಂತ ವಾತಾವರಣವೂ ಇಲ್ಲಿದೆ. ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಕನ್ನಡ ಶಾಸ್ತ್ರೀಯ ಭಾಷಾ ಕೇಂದ್ರವನ್ನು ಸ್ಥಳಾಂತರಿಸುವ ಆಲೋಚನೆಯನ್ನು ಕೈಬಿಡಬೇಕೆಂದು ಒತ್ತಾಯಿಸುವ ನಿರ್ಣಯವನ್ನು ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಕರ್ನಾಟಕ ಮುಖ್ಯಮಂತ್ರಿ, ಕರ್ನಾಟಕವನ್ನು ಪ್ರತಿನಿಧಿಸುವ ಕೇಂದ್ರ ಸಚಿವರು ಹಾಗೂ ಪ್ರಮುಖ ಲೋಕಸಭಾ ಮತ್ತು ರಾಜ್ಯಸಭಾ ಸದಸ್ಯರಿಗೆ ಕಳುಹಿಸಬೇಕೆಂದು ಸಭೆ ತೀರ್ಮಾನಿಸಿತು. ಈ ಸಂಬಂಧ ನಿಯೋಗವೊಂದು ಮುಖ್ಯಮಂತ್ರಿಗಳು ಮತ್ತು ಜಿಲ್ಲಾ ಉಸ್ತುವಾರಿ ಸಚಿವರನ್ನು ಶೀಘ್ರದಲ್ಲೇ ಭೇಟಿ ಮಾಡಿ ಕನ್ನಡ ಶಾಸ್ತ್ರೀಯ ಭಾಷಾ ಕೇಂದ್ರವನ್ನು ಮೈಸೂರಿನಲ್ಲೇ ಉಳಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಕೋರುವುದು ಹಾಗೂ ಮೈಸೂರು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮತ್ತು ಚಾಮರಾಜನಗರ ಸಂಸದ ಸುನೀಲ್ ಬೋಸ್ ಅವರನ್ನು ಈ ಸಂಬಂಧ ಭೇಟಿ ಮಾಡಿ ಚರ್ಚಿಸಬೇಕೆಂದು ನಿರ್ಣಯಿಸಲಾಯಿತು. ಅಲ್ಲದೇ ಮುಂದಿನ ಕಾರ್ಯಕ್ರಮ ರೂಪಿಸಲು ಫೆ.8ರಂದು ಸಂಜೆ 4 ಗಂಟೆಗೆ ನೃಪತುಂಗ ಕನ್ನಡ ಶಾಲೆಯ ಆವರಣದಲ್ಲಿ ಸಭೆ ಕರೆಯಲು ತೀರ್ಮಾನಿಸಿತು. ಈ ಸಭೆಯಲ್ಲಿ ಕನ್ನಡ ಕ್ರಿಯಾ ಸಮಿತಿಯ ಸ.ರ.ಸುದರ್ಶನ್, ಶಾಸ್ತ್ರೀಯ ಕನ್ನಡ ಭಾಷಾ ಹೋರಾಟ ಸಮಿತಿಯ ನಾ.ದಿವಾಕರ ಸೇರಿದಂತೆ ಅನೇಕರು ಭಾಗವಹಿಸಿದ್ದರು.

ಈಗಿನ ಧಾರಾವಾಹಿಗಳು ಒಡಕು, ಪಿತೂರಿ ಬಿಂಬಿಸುವಂತಹುಗಳು!

● ಲೇಖಕಿ ಡಾ.ಬಿ.ಟಿ.ಲಲಿತಾನಾಯಕ್ ವಿಷಾದ ● 'ಉರುವಿ' ನಾಟಕ ಪ್ರದರ್ಶನಕ್ಕೆ ಚಾಲನೆ



'ಉರುವಿ' ನಾಟಕ ಪ್ರದರ್ಶನ



ಲೇಖಕ ಡಾ.ಸಿ.ರವೀಂದ್ರನಾಥ ರಚಿತ ಉರುವಿ ನಾಟಕ ಪ್ರದರ್ಶನ ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಡಾ.ಬಿ.ಟಿ.ಲಲಿತಾ ನಾಯಕ್ ಮಾತನಾಡಿದರು.

ಮೈಸೂರು, ಫೆ.5(ಎಸ್‌ಪಿಎನ್)– ಸಾಮಾಜಿಕ ಬದ್ಧತೆಯನ್ನು ಪ್ರದರ್ಶಿಸುವ ನಾಟಕಗಳು ಹೆಚ್ಚುಹೆಚ್ಚು ಪ್ರದರ್ಶನಗೊಳ್ಳಬೇಕು ಎಂದು ಮಾಜಿ ಸಚಿವೆ, ಲೇಖಕಿ ಡಾ.ಬಿ.ಟಿ.ಲಲಿತಾನಾಯಕ್ ಅಭಿಪ್ರಾಯಪಟ್ಟರು.

ಮೈಸೂರು ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಅರಳಿ ತಂಡದ ವತಿಯಿಂದ ಏರ್ಪಡಿಸಿದ್ದ ಲೇಖಕ ಡಾ.ಸಿ.ರವೀಂದ್ರನಾಥ ರಚಿತ, ಬಿ.ರಮ್ಯ ಶೇಖರ್, ಪಾವನ ಧನರಾಜ್ ನಿರ್ದೇಶನ ಮತ್ತು ವಿನ್ಯಾಸದ 'ಉರುವಿ' ನಾಟಕ ಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡಿದರು. ಇತ್ತೀಚಿನ ಟಿವಿ ಧಾರಾವಾಹಿಗಳಲ್ಲಿ ಕುಟುಂಬವನ್ನು ಜೋಡಿಸುವ ಕಥೆಗಳು ಬರುತ್ತಿಲ್ಲ. ಬದಲಾಗಿ, ಅತ್ತೆ–ಸೊಸೆ ಜಗಳ, ಪಿತೂರಿ ಹೀಗೆ ಒಂದಿಲ್ಲೊಂದು ಸಮಾಜವನ್ನು ದಾರಿ ತಪ್ಪಿಸುವ ಕಥೆಗಳು ಹೆಚ್ಚಾಗಿ ಮೂಡಿಬರುತ್ತಿವೆ. ಆದರೆ, ರಂಗಭೂಮಿ ನಾಟಕಗಳಲ್ಲಿ ಸಮಾಜವನ್ನು ಜೋಡಿಸುವ ತಾಕತ್ತು ಇದೆ ಎಂದರು.

ಮಹಾಭಾರತದಲ್ಲಿ ದುರಂತನಾಯಕನೆಂದೇ ಕರೆಯುವ ಕರ್ಣನ ವೈಯಕ್ತಿಕ ಜೀವನದ ಕುರಿತು ಚರಿತ್ರೆಯಲ್ಲಿ ಹೆಚ್ಚಿನ ವಿವರಗಳು ಲಭ್ಯವಿಲ್ಲ. ಕರ್ಣನ ಪ್ರಿಯತಮೆಯರ ಕುರಿತಾಗಲಿ ಅಥವಾ ಆತನ ಪ್ರೇಮದ ಕುರಿತಾಗಲಿ ಸ್ಪಷ್ಟ ಉಲ್ಲೇಖಗಳಿಲ್ಲ. ಪತ್ನಿಯರ ಬಗ್ಗೆ ಪರೋಕ್ಷವಾಗಿ ಸ್ವತಃ ಕರ್ಣನ ಮೂಲಕ ಹಾಗೂ ಸ್ತ್ರೀ ಪರ್ವದಲ್ಲಿ ಗಾಂಧಾರಿಯ ಮೂಲಕ ಕೆಲ ವಿವರಗಳನ್ನು ನೀಡಲಾಗಿದೆ. ಆದರೆ, ಎಲ್ಲಿಯೂ ಕರ್ಣನಿಗೆ ಎಷ್ಟು ಜನ ಹೆಂಡತಿಯರು ಎಂಬುದನ್ನು ಹೇಳಿಲ್ಲ. ವೃಷಸೇನ ಮತ್ತು ಸುಷೇಣ ಎಂಬ ಕರ್ಣನ ಇಬ್ಬರು ಮಕ್ಕಳು ಯುದ್ಧದಲ್ಲಿ ಮಡಿದ ವಿವರಗಳಿವೆ ಎಂದು ತಿಳಿಸಿದರು.

ತಮಿಳುನಾಡಿನ ಜನಪದ ರಂಗ ಪರಂಪರೆಯಲ್ಲಿ ಕಟ್ಟೆಕಟ್ಟುವಿನ ಮುಖ್ಯ ನಾಟಕವಾದ 'ಕರ್ಣಮೋಕ್ಷಂ' ಇಡೀ ರಾತ್ರಿ ನಡೆಯುತ್ತದೆ. ಪೊನ್ನುರುವಿಯನ್ನು ಕರ್ಣ ಸ್ವಯಂವರದಿಂದ ಹಾರಿಸಿಕೊಂಡು ಹೋಗಿ ಮದುವೆ ಆಗುತ್ತಾನೆ. ಇಂತಹ ಘಟನೆಗಳ ಬಗ್ಗೆ ಜನಪದ ಕಥೆಗಳ ಎಳೆಯನ್ನು ಬಳಸಿ ಉರುವಿ ನಾಟಕ ರಚಿಸಲಾಗಿದೆ. ಮಂಗಳೂರು ಎ.ಜೆ.ಮೆಡಿಕಲ್ ಕಾಲೇಜಿನಲ್ಲಿ ಮೈಕ್ರೋಬಯಾಲಜಿ ಪ್ರಾಧ್ಯಾಪಕರಾಗಿ ಕೆಲಸ ನಿರ್ವಹಿಸುತ್ತಿರುವ ಡಾ.ಸಿ.ರವೀಂದ್ರನಾಥ್ 'ಉರುವಿ' ನಾಟಕವನ್ನು ಅದ್ಭುತವಾಗಿ ಚಿತ್ರಿಸಿದ್ದಾರೆ ಎಂದರು. 'ಉರುವಿ' ನಾಟಕದಲ್ಲಿ ಬಿ.ರಮ್ಯ ಶೇಖರ್, ಯಶಸ್ವಿನಿ ದಿವ್ಯಪ್ರಕಾಶ್, ಎಸ್.ಚೈತನ್ಯ, ಗೌತಮ್ ವಿರಾಜ್, ಪಾವನ ಧನರಾಜ್, ಗೌಡ ಪ್ರಿಯ, ಎಂ.ವಿ.ಚಮನ್ ನಾಯಕ್ ಪಾತ್ರ ನಿರ್ವಹಿಸಿದ್ದಾರೆ. ವೇದಿಕೆಯಲ್ಲಿ ಕರಾಮುವಿ ಸಮಾಜ ಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ.ಆರ್. ಸಂತೋಷ್ ನಾಯಕ್, ಹಿರಿಯ ರಂಗಕಲಾವಿದೆ ಗೀತಾ ಮೋಂಟಡ್ಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ ಉಪಸ್ಥಿತರಿದ್ದರು.

ಬ್ಯಾಂಕ್‌ಗಳಿಂದ ವಸೂಲಿಯಾದ ಸಾಲದ ವಿವರ ಕೋರಿ ಹೈಕೋರ್ಟ್‌ಗೆ ವಿಜಯ್ ಮಲ್ಯ ಅರ್ಜಿ



ಬೆಂಗಳೂರು: ಬ್ಯಾಂಕ್‌ಗಳಿಂದ ವಸೂಲಿಯಾದ ಸಾಲದ ವಿವರ ಕೋರಿ ಆರ್ಥಿಕ ಅಪರಾಧಿಯಾಗಿ ವಿದೇಶದಲ್ಲಿ ತಲೆಮರೆಸಿಕೊಂಡಿರುವ ಉದ್ಯಮಿ ವಿಜಯ್ ಮಲ್ಯ ಕರ್ನಾಟಕ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಮಲ್ಯ ಪರವಾಗಿ ಹಿರಿಯ ವಕೀಲ ಸಾಜನ್ ಪೂವಯ್ಯ ವಾದ ಮಂಡಿಸಿದ್ದಾರೆ. ರೂ. 6,200 ಕೋಟಿ ಮರುಪಾವತಿಸಬೇಕಿತ್ತು. ಆದರೆ ರೂ. 14,000 ಕೋಟಿ ವಸೂಲಿ ಮಾಡಲಾಗಿದೆ.ಇದನ್ನು ಲೋಕಸಭೆಗೆ ಹಣಕಾಸು ಸಚಿವರು ತಿಳಿಸಿದ್ದಾರೆ ಎಂದು ಮಲ್ಯ ಪರ ವಕೀಲರು ಹೇಳಿದ್ದಾರೆ. ರೂ. 10,200 ಕೋಟಿ ವಸೂಲಿಯಾಗಿದೆ ಎಂದು ಸಾಲ ವಸೂಲಾತಿ ಅಧಿಕಾರಿ ಹೇಳಿಕೆ ನೀಡಿದ್ದಾರೆ ಎಂದು ಮಲ್ಯ ಪರ ವಕೀಲರು ವಾದಿಸಿದ್ದಾರೆ. ಸಂಪೂರ್ಣ ಸಾಲದ ಮೊತ್ತವನ್ನು ತೆರವುಗೊಳಿಸಲಾಗಿದ್ದರೂ ಪ್ರಕ್ರಿಯೆ ಇನ್ನೂ ಮುಂದುವರೆದಿದೆ. ವಸೂಲಾದ ಸಾಲದ ಮೊತ್ತದ ವಿವರ ನೀಡುವಂತೆ ಬ್ಯಾಂಕ್‌ಗಳಿಗೆ ನಿರ್ದೇಶನ ನೀಡುವಂತೆ ಮನವಿ ಮಾಡಿದ್ದಾರೆ. ಮಲ್ಯ ಅವರ ಅರ್ಜಿಯನ್ನು ಆಧರಿಸಿ ನ್ಯಾಯಮೂರ್ತಿ ಆರ್. ದೇವದಾಸ್ ನೇತೃತ್ವದ ಹೈಕೋರ್ಟ್ ಪೀಠ, ಬ್ಯಾಂಕ್‌ಗಳು ಮತ್ತು ಸಾಲ ವಸೂಲಾತಿ ಅಧಿಕಾರಿಗಳಿಗೆ ನೋಟಿಸ್ ಜಾರಿ ಮಾಡಿದೆ. ಈ ಹಿಂದೆ 2024 ಡಿಸೆಂಬರ್ 18 ರಂದು ವಿಜಯ್ ಮಲ್ಯ ಅವರು ರೂ. 6,203 ಕೋಟಿ ಸಾಲದ ವಿರುದ್ಧ ಬ್ಯಾಂಕ್‌ಗಳು ರೂ. 14, 131.60 ಕೋಟಿ ವಸೂಲಿ ಮಾಡಿದ್ದಾರೆ ಎಂದು ಹೇಳಿದ್ದರು. ಈಗಲೂ ಅವರು ಆರ್ಥಿಕ ಅಪರಾಧಿಯಾಗಿಯೇ ಮುಂದುವರೆದಿದ್ದು, ಲಂಡನ್‌ನಲ್ಲಿದ್ದಾರೆ.

ಸಾಲ ಮರುಪಾವತಿಸದ ಆರೋಪ ಹೊತ್ತಿರುವ ವಿಜಯ್ ಮಲ್ಯ ಅವರನ್ನು ದೇಶಕ್ಕೆ ಹಸ್ತಾಂತರಿಸಲು ಭಾರತ ಸರ್ಕಾರ ಪ್ರಯತ್ನ ನಡೆಸುತ್ತಿದೆ.

ಇಂದು ದಿ ಮೈಸೂರು ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್ ಫಲಿತಾಂಶ

ಫೆ.8ರಂದು ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ಆಡಳಿತ ಮಂಡಳಿ ಚುನಾವಣೆ ಮತ ಎಣಿಕೆ

ಪ್ರಕ್ರಿಯೆ ಪೂರ್ಣಗೊಳಿಸಿ ಫಲಿತಾಂಶ ಪ್ರಕಟಿಸಲು ಹೈಕೋರ್ಟ್ ಆದೇಶ

ಮೈಸೂರು,ಫೆ.5(ಪಿಎಂ)– ಮೈಸೂರಿನ ಗಾಂಧಿಚೌಕದಲ್ಲಿರುವ ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ಮತ್ತು ಜಗನ್ಮೋಹನ ಅರಮನೆ ರಸ್ತೆಯಲ್ಲಿರುವ ದಿ ಮೈಸೂರು ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್‌ನ 2025–2030ನೇ ಸಾಲಿನ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆಯ ಮತ ಎಣಿಕೆ ಪ್ರಕ್ರಿಯೆ ನಡೆಸಿ ಫಲಿತಾಂಶ ಪ್ರಕಟಿಸಲು ಹೈಕೋರ್ಟ್ ಆದೇಶಿಸಿದೆ.

ಈ ಹಿನ್ನೆಲೆಯಲ್ಲಿ ಎರಡೂ ಬ್ಯಾಂಕ್‌ಗಳ ಚುನಾವಣೆಯ ಮತ ಎಣಿಕೆಗೆ ದಿನಾಂಕ ನಿಗದಿಯಾಗಿದೆ. ದಿ ಮೈಸೂರು ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್‌ನ ಮತ ಎಣಿಕೆ ಪ್ರಕ್ರಿಯೆಯು ಫೆ.6ರಂದು ನಡೆಯಲಿದೆ. ದೇವರಾಜ ಮೊಹಲ್ಲಾದ ದಿವಾನ್ಸ್ ರಸ್ತೆಯಲ್ಲಿರುವ ಕುಂಚಿಟಿಗರ ಸಂಘ ಧರ್ಮಪಾರಾಯಣಿ ಶ್ರೀಮತಿ ಆಲಮ್ಮನವರ ಛತ್ರದಲ್ಲಿ ಅಂದು ಮಧ್ಯಾಹ್ನ 2.30 ಗಂಟೆಗೆ ಮತ ಎಣಿಕೆ ಪ್ರಕ್ರಿಯೆ ಆರಂಭಗೊಳ್ಳಲಿದೆ. ಅದೇ ರೀತಿ ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್‌ನ ಮತ ಎಣಿಕೆ ಪ್ರಕ್ರಿಯೆಯು ಫೆ.8ರಂದು ನಿಗದಿಯಾಗಿದೆ. ಕೆಆರ್‌ಎಸ್ ರಸ್ತೆಯಲ್ಲಿರುವ ಶ್ರೀ ಉತ್ತರಾದಿ ಮಠದ ಶ್ರೀ ಸತ್ಯಪ್ರಮೋದ ಕಲ್ಯಾಣ ಮಂಟಪದಲ್ಲಿ (ಶ್ರೀ ಆಂಜನೇಯ ದೇವಸ್ಥಾನ) ಅಂದು ಬೆಳಗ್ಗೆ 9 ಗಂಟೆಗೆ ಮತ ಎಣಿಕೆ ಕಾರ್ಯ ಆರಂಭಗೊಳ್ಳಲಿದೆ. ಈ ಸಂಬಂಧ ಎರಡೂ ಬ್ಯಾಂಕ್‌ಗಳ ಚುನಾವಣಾಧಿಕಾರಿಗಳು ತಿಳುವಳಿಕೆ ನೋಟಿಸ್ ಮೂಲಕ ಮಾಹಿತಿ ನೀಡಿದ್ದಾರೆ.

ಫಲಿತಾಂಶ ತಡೆ ಹಿಡಿದಿದ್ದ ಹೈಕೋರ್ಟ್: ಮತದಾನಕ್ಕೆ ಅನರ್ಹಗೊಂಡಿದ್ದ ಎರಡೂ ಬ್ಯಾಂಕ್‌ಗಳ ಸದಸ್ಯರು ಹೈಕೋರ್ಟ್ ಮೊರೆ ಹೋಗಿದ್ದರು. ಎರಡೂ ಬ್ಯಾಂಕ್ ಸದಸ್ಯರ ಪ್ರತ್ಯೇಕ ರಿಟ್ ಅರ್ಜಿಗಳನ್ನು ವಿಚಾರಣೆ ನಡೆಸಿದ್ದ ಹೈಕೋರ್ಟ್, ಮತದಾನಕ್ಕೆ ಅವಕಾಶ ಕಲ್ಪಿಸಿ, ಮುಂದಿನ ಆದೇಶದವರೆಗೆ ಫಲಿತಾಂಶ ಪ್ರಕಟಿಸದಂತೆ ಮಧ್ಯಂತರ ಆದೇಶ ನೀಡಿತ್ತು. ಈ ಹಿನ್ನೆಲೆಯಲ್ಲಿ ಜ.19ರಂದು ಎರಡು ಬ್ಯಾಂಕ್‌ಗಳ ಮತದಾನ ಪ್ರಕ್ರಿಯೆ ನಡೆದಿತ್ತು. ಅಲ್ಲದೆ, ಕೋರ್ಟ್ ಮೊರೆ ಹೋಗಿ ಮತದಾನಕ್ಕೆ ಅನುಮತಿ ಪಡೆದ ಎರಡೂ ಬ್ಯಾಂಕ್ ಸದಸ್ಯರ ಮತದಾನಕ್ಕೆ ಅವರ ಇನ್ನಿತರ ಬ್ಯಾಂಕ್ ಸದಸ್ಯರ ಹೊರತಾಗಿ ಪ್ರತ್ಯೇಕ ಬೂತ್‌ಗಳಲ್ಲಿ ಮತದಾನಕ್ಕೆ ಅವಕಾಶ ಕಲ್ಪಿಸಲಾಗಿತ್ತು.

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ಹಾಗೂ ಶಿವರಾಂಪೇಟೆಯ ಶ್ರೀಮತಿ ಆಲಮ್ಮನ ಛತ್ರದ ಆವರಣದಲ್ಲಿ ದಿ ಮೈಸೂರು ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್‌ನ ಮತದಾನ ಪ್ರಕ್ರಿಯೆ ನಡೆಸಲಾಗಿತ್ತು. ನಂತರ ಮತಪೆಟ್ಟಿಗೆಗಳನ್ನು ಮೈಸೂರು ಜಿಲ್ಲಾ ಖಜಾನೆಯಲ್ಲಿ ಭದ್ರತೆಯೊಂದಿಗೆ ಇರಿಸಲಾಗಿತ್ತು.

ಮೈಸೂರು ಕೋ ಆಪರೇಟಿವ್ ಬ್ಯಾಂಕ್‌ನ ಆಡಳಿತ ಮಂಡಳಿಯ ಒಟ್ಟು 13 ನಿರ್ದೇಶಕರ ಸ್ಥಾನಗಳಲ್ಲಿ ಹಿಂದುಳಿದ ವರ್ಗ ಬಿ ಕ್ಷೇತ್ರಕ್ಕೆ ಟಿ.ರವಿ ಅವಿರೋಧವಾಗಿ ಆಯ್ಕೆಯಾಗಿ, ಇನ್ನುಳಿದ 12 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಒಟ್ಟು 39 ಅಭ್ಯರ್ಥಿಗಳು ಕಣದಲ್ಲಿದ್ದರು. ಸುಮಾರು 13,500 ಮತದಾರರ ಪೈಕಿ 10,721 ಮಂದಿ ಮತ ಚಲಾಯಿಸಿದ್ದರು. ಅಂತೆಯೇ ದಿ ಮೈಸೂರು ಮರ್ಚೆಂಟ್ಸ್ ಕೋ ಆಪರೇಟಿವ್ ಬ್ಯಾಂಕ್ ಆಡಳಿತ ಮಂಡಳಿತ ಒಟ್ಟು 13 ನಿರ್ದೇಶಕರ ಸ್ಥಾನಗಳಲ್ಲಿ ಪರಿಶಿಷ್ಟ ಜಾತಿ ಕ್ಷೇತ್ರದಿಂದ ರಾಚಪ್ಪಾಜಿ ಅವಿರೋಧ ಆಯ್ಕೆಯಾಗಿ ಇನ್ನುಳಿದ 12 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ 21 ಮಂದಿ ಕಣದಲ್ಲಿದ್ದರು. ಒಟ್ಟು 4,848 ಮತದಾರರ ಪೈಕಿ 3,704 ಮಂದಿ ಮತ ಚಲಾಯಿಸಿದ್ದರು.

> ದಿ ಮೈಸೂರು ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್‌ನ ಆಡಳಿತ ಮಂಡಳಿ ಚುನಾವಣೆ ಸಂಬಂಧ ಕೋರ್ಟ್ ಮೊರೆ ಹೋಗಿದ್ದ ಸದಸ್ಯರ ಮತಗಳೂ ಸೇರಿದಂತೆ ಎಲ್ಲಾ ಮತಗಳನ್ನು ಎಣಿಕೆ ಮಾಡಿ, ಫಲಿತಾಂಶ ಪ್ರಕಟಿಸುವಂತೆ ಹೈಕೋರ್ಟ್ ಆದೇಶ ಮಾಡಿದೆ. ಈ ಹಿನ್ನೆಲೆಯಲ್ಲಿ ಚುನಾವಣಾ ಕಣದಲ್ಲಿರುವ ಅಭ್ಯರ್ಥಿಗಳ ಪೂರ್ವಭಾವಿ ಸಭೆ ಕರೆದು, ಮತ ಎಣಿಕೆ ಪ್ರಕ್ರಿಯೆ ನಡೆಸಿ ಫಲಿತಾಂಶ ಪ್ರಕಟಿಸಲು ದಿನಾಂಕ ನಿಗದಿಗೊಳಿಸಿ ಪೂರ್ವ ಸಿದ್ಧತೆ ಮಾಡಿಕೊಳ್ಳಲಾಗಿದೆ.
>
> –ಎಸ್.ವಸಂತ್‌ಕುಮಾರ್, ಚುನಾವಣಾಧಿಕಾರಿಗಳು ಮತ್ತು ಸಹಕಾರ ಇಲಾಖೆಯ ಸಹಕಾರ ಅಭಿವೃದ್ಧಿ ಅಧಿಕಾರಿಗಳು.

> ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ಆಡಳಿತ ಮಂಡಳಿ ಚುನಾವಣೆ ಸಂಬಂಧ ಮತ ಎಣಿಕೆ ಪ್ರಕ್ರಿಯೆ ನಡೆಸಿ ಫಲಿತಾಂಶ ಪ್ರಕಟಿಸಲು ಹೈಕೋರ್ಟ್ ಆದೇಶಿಸಿದೆ. ಪ್ರತ್ಯೇಕ ಬೂತ್‌ನಲ್ಲಿ ಮತದಾನ ಮಾಡಿದ್ದವರ ಮತಗಳನ್ನು ಒಳಗೊಂಡಂತೆ ಎಲ್ಲಾ ಮತಗಳನ್ನು ಎಣಿಕೆ ಮಾಡಿ ಫಲಿತಾಂಶ ಪ್ರಕಟಿಸಬೇಕೆಂದು ಕೋರ್ಟ್ ಆದೇಶದಲ್ಲಿದೆ.
>
> –ಬಿ.ರಾಜು, ಚುನಾವಣಾಧಿಕಾರಿಗಳು ಮತ್ತು ಸಹಕಾರ ಇಲಾಖೆ ಹಿರಿಯ ನಿರೀಕ್ಷಕರು.

ನಕ್ಕರೆ ಅದೇ ಸ್ವರ್ಗ

ಎಬಿಸಿಡಿಯಲ್ಲಿ 'ಬಿ'ಗೆ ತುಂಬಾ ಚಳಿ ಯಾಕೆ ಗೊತ್ತಾ?
ಅದು 'ಎಸಿ' ಮಧ್ಯೆ ಇದೆ ಅದಕ್ಕೆ.
'ಸಿ' ತುಂಬಾ ಕೆಮ್ಮುತ್ತೆ ಯಾಕೆ ಗೊತ್ತಾ?
ಅದು 'ಬಿಡಿ' ಮಧ್ಯೆ ಇದೆ ಅದಕ್ಕೆ.
'ಬಿ' ಸಿಕ್ಕಾಪಟ್ಟೆ ಫಿಲ್ಮ್ ನೋಡುತ್ತೆ ಯಾಕಂದ್ರೆ 'ಸಿಡಿ' ಅದರ ಮುಂದಿರುತ್ತೆ.

ಮೈಸೂರು ಮಿತ್ರ

ಗುರುವಾರ, 6 ಫೆಬ್ರವರಿ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಮಾತು ಬರದ ನಾಯಿಯನ್ನು ನಂಬು. ಆದರೆ, ಮಾತಿನಲ್ಲೇ ಮರಳು ಮಾಡುವ ಮನುಷ್ಯನನ್ನು ನಂಬಬೇಡ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕರೆದುಣ್ಣುವ ಕೆಚ್ಚಲನ್ನು ಕೊರೆದುಂಡ ಹಾಗೆ.

ನಿಮ್ಮ ಪತ್ರಗಳು

■ ಸಬ್ ರಿಜಿಸ್ಟ್ರಾರ್ ಕಚೇರಿ ಸರ್ವರ್ ಸಮಸ್ಯೆ, ಜನರ ಗೋಳು ಕೇಳುವವರು ಯಾರು?

ಮಾನ್ಯರೆ,

ರಾಜ್ಯ ಸರ್ಕಾರಕ್ಕೆ ಹೆಚ್ಚಿನ ಆದಾಯ ತಂದು ಕೊಡುವಲ್ಲಿ ಕಂದಾಯ ಇಲಾಖೆಯ ಉಪ ನೋಂದಣಾಧಿಕಾರಿಗಳ ಕಚೇರಿಯು ಒಂದಾಗಿದೆ. ಪ್ರತಿದಿನ ಕೋಟ್ಯಾಂತರ ರೂಪಾಯಿ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಮೂಲಕ ಹರಿದು ಬರುತ್ತದೆ. ಆದರೆ ವಿಪರ್ಯಾಸವೆಂದರೆ ಸ್ವತ್ತಿನ ನೋಂದಣಿಗೆ ಉಪ ನೋಂದಣಾಧಿಕಾರಿಗಳ ಕಚೇರಿಗೆ ಹೋದರೆ ಇಲ್ಲಿನ ಸರ್ವರ್ ಸಮಸ್ಯೆ ಪ್ರಮುಖವಾಗಿ ಎದ್ದು ಕಾಣುತ್ತದೆ.

ಅದರಲ್ಲೂ ಕಳೆದ ಹದಿನೈದು ದಿನಗಳಿಂದ ಋಣಭಾರ ಪತ್ರ (ಇ.ಸಿ) ಸರ್ವರ್ ಸಮಸ್ಯೆ ಪ್ರಮುಖವಾಗಿದೆ ಎಂದರೆ ತಪ್ಪಾಗಲಾರದು. ಮೊದ ಮೊದಲು ರಾತ್ರಿ ವೇಳೆಯಲ್ಲಿ ಇಸಿ ಸಮಸ್ಯೆ ಇರಲಿಲ್ಲ. ಆದರೆ, ಇತ್ತೀಚಿನ ಒಂದು ವಾರದಿಂದ ಇಸಿ ರಾತ್ರಿ ವೇಳೆಯಲ್ಲೂ ಸರ್ವರ್ ಸಮಸ್ಯೆ ತುಂಬಾ ಕಾಣುತ್ತಿದೆ. ಅದೃಷ್ಟವಿದ್ದು ಸಿಕ್ಕರೂ ಸರಿಯಾದ ಎಂಟ್ರಿಗಳು ಸಿಗದೇ ನಿರಾಶೆ ಮೂಡಿಸುತ್ತಿದೆ.

ಈ ಬಗ್ಗೆ 'ಮೈಸೂರು ಮಿತ್ರ' ದಿನಪತ್ರಿಕೆಯಲ್ಲಿ ಕಳೆದ ಜನವರಿ 29 ರಂದು ವರದಿ ಪ್ರಕಟಿಸಿದ್ದರೂ ಸಹ ಇಲ್ಲಿಯವರೆಗೂ ಯಾವುದೇ ಪ್ರಯೋಜನವಾಗಿಲ್ಲ. ಕಳೆದ ಶನಿವಾರ ಮತ್ತು ಸೋಮವಾರ (ಫೆಬ್ರವರಿ 1 ಮತ್ತು 3 ರಂದು) ಸರ್ವರ್ ಸಮಸ್ಯೆಯಿಂದಾಗಿ ಉಪ ನೋಂದಣಾಧಿಕಾರಿಗಳ ಕಚೇರಿಗಳಲ್ಲಿ ಬೆರಳೆಣಿಕೆಯಷ್ಟೆ ನೋಂದಣಿ ಆಗಿದೆ. ನೋಂದಣಿಗೆ ಬಂದು ಬರಿಗೈಯಲ್ಲಿ ಹಿಂದಿರುಗಬೇಕಾದ ಪ್ರಸಂಗ ಎದುರಾಗಿದೆ. ದಯವಿಟ್ಟು ಸರ್ಕಾರ ಆದಷ್ಟು ಬೇಗ ಸರ್ವರ್ ಸಮಸ್ಯೆ ಪರಿಹರಿಸಬೇಕಾಗಿ ಸಂಬಂಧಪಟ್ಟ ಅಧಿಕಾರಿಗಳಲ್ಲಿ ಮನವಿ.

–ಎಂ.ಕೆ. ಕಿರಣ್, ಟೆಲಿಕಾಂ ಕಾಲೋನಿ, ಉದಯಗಿರಿ ಅಂಚೆ, ಮೈಸೂರು.

■ ರಸ್ತೆ ವಿಭಜಕ ಮುಚ್ಚಿ, ಸರ್ವೀಸ್ ರಸ್ತೆ ನಿರ್ಮಾಣ ಮಾಡಿ

ಮಾನ್ಯರೆ,

ಮೈಸೂರು ಜಿಲ್ಲೆಯ ಇಲವಾಲ ಸಮೀಪದ ಸೇಂಟ್ ಜೋಸೆಫ್ ಸೆಂಟ್ರಲ್ ಸ್ಕೂಲ್ ಬಳಿ ಇರುವ ವಿನಾಯಕ ಗಾರ್ಡನ್ ಸಿಟಿ ಬ್ರಹ್ಮಾನಂದ ಸಾಗರ ಲೇಔಟ್‌ನ ಬಳಿ ಒಂದು ರಸ್ತೆ ವಿಭಜಕ (ಡಿವೈಡರ್) ಇದೆ. ಇಲವಾಲದಿಂದ ಮೈಸೂರಿನ ಕಡೆಗೆ ಹೋಗುವ ಎಲ್ಲಾ ವಾಹನಗಳು ವೇಗದ ಮಿತಿ ಮೀರಿ ಸಂಚರಿಸುತ್ತಾ ಮೈಮೇಲೆ ಬಂದಂತೆ ಬರುತ್ತವೆ. ಒಂದು ಕ್ಷಣ ಮೈಮರೆತರೆ ಸಾಕು ಸಾವೇ ಏನೋ ಎಂಬಂತಾಗಿದೆ. ವಿನಾಯಕ ಗಾರ್ಡನ್ ಸಿಟಿ ಹಾಗೂ ಅರ್ಬನ್ ವ್ಯಾಲಿ ಲೇಔಟ್‌ನ ನಿವಾಸಿಗಳು ಹಾಗೂ ನಾಗರಿಕರು ಇಲವಾಲದ ಕಡೆಗೆ ಹೋಗಲು ಈ ರಸ್ತೆಯ ವಿಭಜಕವನ್ನು ದಾಟಲು ಮುಂದಾಗುತ್ತಾರೆ. ಆಗ ಅನಾಹುತಗಳು ಸಂಭವಿಸುವ ಸಾಧ್ಯತೆ ಹೆಚ್ಚು ಇರುತ್ತದೆ. ಈಗಾಗಲೇ ಎಲ್ಲರಿಗೂ ತಿಳಿದಿರುವಂತೆ ಇಲ್ಲಿ ಸರಣಿ ಅಪಘಾತಗಳು ಸಂಭವಿಸಿವೆ. ಇದನ್ನು ಪೊಲೀಸ್ ದಾಖಲೆಗಳಲ್ಲೂ ಗಮನಿಸಬಹುದು. ಇದನ್ನು ತಕ್ಷಣ ಸರಿಪಡಿಸದಿದ್ದರೆ ಮುಂದೆಯೂ ಅನಾಹುತಗಳು ಜರುಗುತ್ತಲೇ ಇರುತ್ತವೆ. ಹಾಗಾಗಿ ವಿನಾಯಕ ಗಾರ್ಡನ್ ಸಿಟಿ ಬಳಿ ಇರುವಂತಹ ಈ ವಿಭಜಕವನ್ನು ಮುಚ್ಚಿದರೆ ಅಪಘಾತಗಳನ್ನು ಕಡಿಮೆ ಮಾಡಬಹುದು. ಇಲ್ಲೇ ಶಾಲೆ ಇರುವುದರಿಂದ ವಿದ್ಯಾರ್ಥಿಗಳು ಓಡಾಡಲು ಹಾಗೂ ರಸ್ತೆ ದಾಟಲು ಹರಸಾಹಸ ಪಡುತ್ತಿದ್ದಾರೆ.

ಇದಕ್ಕೆ ಇಲ್ಲಿನ ನಿವಾಸಿಗಳು ಹೇಳುವ ಪ್ರಕಾರ ಈ ಡಿವೈಡರ್‌ನ ಮುಚ್ಚಿ ನಂತರ ಸೇಂಟ್ ಜೋಸೆಫ್ ಸೆಂಟ್ರಲ್ ಶಾಲೆಯ ಬಳಿಯಿಂದ ಇಲವಾಲದವರೆಗೂ ಸರ್ವೀಸ್ ರಸ್ತೆ ನಿರ್ಮಾಣ ಮಾಡಿದರೆ ಮಾತ್ರ ಈ ಸಮಸ್ಯೆ ಸುಧಾರಿಸಬಹುದು. ಇದಕ್ಕೆ ರಸ್ತೆ ಉಬ್ಬು (ರೋಡ್ ಹಂಪ್ಸ್) ಹಾಕುವುದರಿಂದ ಸೂಕ್ತ ಪರಿಹಾರವಿದೆ. ಹಾಗಾಗಿ ಈ ಬಗ್ಗೆ ಆದಷ್ಟು ಬೇಗ ತುರ್ತು ಕ್ರಮ ಕೈಗೊಳ್ಳಬೇಕು ಎಂದು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳಿಗೆ ಈ ಮೂಲಕ ಎಲ್ಲಾ ನಾಗರಿಕರ ಹಾಗೂ ಇಲ್ಲಿನ ನಿವಾಸಿಗಳ ಪರವಾಗಿ ಮನವಿ.

–ಅರ್ಬನ್ ವ್ಯಾಲಿ ಲೇಔಟ್ ಹಾಗೂ ವಿನಾಯಕ ಗಾರ್ಡನ್ ಸಿಟಿ ಇಲವಾಲ, ಮೈಸೂರು.

■ ಬದುಕು ಜಟಕಾ ಬಂಡಿ??!

ಮಾನ್ಯರೆ,

ನಮ್ಮ ಈ ಬದುಕು ಜಟಕಾ ಬಂಡಿಯಂತೆ ಎನ್ನುವುದು ಅಕ್ಷರಶಃ ಸಾರ್ವಕಾಲಿಕ ಸತ್ಯ ಎನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ. ಪ್ರತಿನಿತ್ಯ ನಾವು ಹೊಚ್ಚ ಹೊಸ ಅನುಭವಗಳನ್ನು ಪಡೆಯುತ್ತ ನಮ್ಮ ಜೀವನದ ಪಯಣವನ್ನು ಸಾಗಿಸುತ್ತಿರುತ್ತೇವೆ. ಅನುಭವಗಳು ನಮ್ಮ ಬಾಳಿಗೆ ಕೆಲವು ಧನಾತ್ಮಕ ಪರಿಣಾಮವನ್ನು ಇನ್ನೂ ಕೆಲವು ಋಣಾತ್ಮಕ ಪರಿಣಾಮವನ್ನು ಬೀರಬಹುದು. ಒಟ್ಟಿನಲ್ಲಿ ನಾವು ಅನುಭವಗಳನ್ನು ನಮ್ಮ ಬದುಕೆಂಬ ಜೋಳಿಗೆಯಲ್ಲಿ ತುಂಬಿಸಿಕೊಂಡು ಮುಂದಿನ ದಾರಿ ಹುಡುಕುತ್ತಿರುತ್ತೇವೆ.

ಮಾನವರಾದ ನಾವು ನಮ್ಮ ಜೀವನದ ಜಟಕಾ ಬಂಡಿಯಲ್ಲಿ ಸಾಗುತ್ತಿರುವಾಗ ಸತ್ಯ ಹಾಗೂ ನಂಬಿಕೆ ಎಂಬ ಎರಡು ಚಕ್ರಗಳು ಸಮಾನವಾಗಿ ಚಲಿಸುವಂತೆ ಸದಾ ನಮ್ಮ ಕಣ್ಗಾವಲಿನಲ್ಲಿರಬೇಕು. ಕೆಲವೊಮ್ಮೆ ರಸ್ತೆಯಲ್ಲಿ ಹಳ್ಳದಿಣ್ಣೆಗಳು ಬರುವ ಹಾಗೆ ನಮ್ಮ ಬದುಕಿನಲ್ಲಿ ಈ ಸತ್ಯ ಹಾಗೂ ನಂಬಿಕೆಗಳಲ್ಲಿ ಬದಲಾವಣೆಗಳು ನಮಗೆ ತಿಳಿಯದ ಹಾಗೆ ಮಾರ್ಪಾಡು ಹೊಂದುತ್ತದೆ. ಇದು ಮುಂದೆ ನಮಗೆ ಮುಳುವಾಗಿ ನಮ್ಮ ಬದುಕಿನಲ್ಲಿ ಋಣಾತ್ಮಕ ಬದಲಾವಣೆಗೆ ಅನುವು ಮಾಡಿ ಕೊಡಬಹುದು. ಇನ್ನು ನಮ್ಮ ಸುತ್ತಮುತ್ತಲು ಇರುವ ನಮ್ಮ ಆಪ್ತರು, ಸಂಬಂಧಿಕರು ಇಲ್ಲವೇ ಹಿತೈಷಿಗಳು ನಮ್ಮೊಡನೆ ನಡೆದುಕೊಳ್ಳುವ ರೀತಿಯು ನಮ್ಮ ಮೇಲೆ ಅಗಾಧವಾದ ಪರಿಣಾಮವನ್ನು ಬೀರಬಹುದು. ಅವರ ಮಾತುಗಳಾಗಬಹುದು ಇಲ್ಲವೇ ಅವರ ನಡೆವಳಿಕೆಯಾಗಬಹುದು. ಅವರು ನೋಡುವ ನೋಟವಾಗಬಹುದು ಕೊಂಚ ಬದಲಾವಣೆ ಕಂಡುಬಂದರೂ ಅದು ಸಹ ನಮ್ಮ ಮೇಲೆ ಒಂದು ವ್ಯತಿರಿಕ್ತವಾದ ಪರಿಣಾಮವನ್ನು ಬೀರುತ್ತದೆ. ನಮ್ಮ ಬದುಕಿನ ಬಂಡಿಯನ್ನು ನಾವೇ ಹೊತ್ತು ಸಾಗಬೇಕು. ಹಾಗೇ ನಾವೇ ಅದನ್ನು ಎಳೆದುಕೊಂಡು ಸಾಗಬೇಕು. ಅದರಲ್ಲಿ ದಾರಿಯುದ್ದಕ್ಕೂ ಸಿಗುವ ಕಲ್ಲು ಮುಳ್ಳುಗಳ ತಪ್ಪಿಸಿ ನಮ್ಮ ಗುರಿಯ ತಲುಪಬೇಕೆಂಬುದೇ ನಮ್ಮ ಧ್ಯೇಯವಾಗಬೇಕಲ್ಲವೇ? ನಮ್ಮ ಜೀವನದ ಜಟಕಾ ಬಂಡಿ ಎಳೆಯುವವರು ನಾವು ಮೇಲೆ ಕೂರುವವರು ಇನ್ಯಾರೋ?

–ಅನಿಲ್ ರಾಜು, ಸಹ ಶಿಕ್ಷಕರು, ಮೈಸೂರು




ನಿವೇದಿತ ಹೆಚ್.
ಇಂಗ್ಲಿಷ್ ಉಪನ್ಯಾಸಕಿ
ಯುವರಾಜ ಕಾಲೇಜು
ಮೈಸೂರು.

ಮಂಥನ

ನಿನ್ನೊಲುಮೆಯಿಂದಲೇ ಬಾಳುಬೆಳಕಾಗಿರಲ್...



ಕೆ.ಎಸ್.ನರಸಿಂಹಸ್ವಾಮಿ–ವೆಂಕಮ್ಮ



ರಾಷ್ಟ್ರಕವಿ ಕುವೆಂಪು– ಹೇಮೆ



ಮುದ್ದಣ–ಮನೋರಮೆ.



ಅನುಪಮಾ–ನಿರಂಜನ

ಚಂದ್ರಮುಖಿ ನೀನೆನಲು ತಪ್ಪೇನೆ?
ನಿನ್ನ ಸೌಜನ್ಯವೇ ದಾರಿ ನೆರಳಾಗಿರಲು
ನಿತ್ಯಸುಖಿ ನೀನೆನಲು ಒಪ್ಪೇನೇ?

ಇದಕ್ಕಿಂತಾ ಸುಂದರವಾಗಿ ತನ್ನ ಬಾಳಸಖಿಗೆ ಕೃತಜ್ಞತೆ ಸಲ್ಲಿಸಲು ಸಾಧ್ಯವೇ? ಕನ್ನಡದ ಒಲವ ಕವಿ ಕೆ.ಎಸ್.ನರಸಿಂಹಸ್ವಾಮಿ ಅವರ ಮೈಸೂರು ಮಲ್ಲಿಗೆ ಕನ್ನಡಿಗ ದಂಪತಿ, ಪ್ರೇಮಿಗಳ ಪಾಲಿಗೆ ಭಗವದ್ಗೀತೆ ಎಂದರೆ ಖಂಡಿತಾ ಯಾರೂ ಒಪ್ಪದೇ ಇರಲಾರರು. 'ಮೈಸೂರು ಮಲ್ಲಿಗೆ' ಪ್ರತಿ ಕವನವೂ ಒಂದು ಹೆಣ್ಣು ಅಥವಾ ಗಂಡು ಬಯಸಬಹುದಾದ ಆದರ್ಶಮಯ ಪ್ರೇಮಮಯ ಜೀವನದ ರೂಪಕ. ಸಂಕಲನದ ಪ್ರತಿಯೊಂದು ಕವನವೂ ಪ್ರತಿಯೊಬ್ಬರ ಕನಸಿನ ಜೀವನದ ಭಾವಪೂರ್ಣ ನಿರೂಪಣೆ.

ಶಿಲಾಲತೆಯಂತಹ ಗಂಭೀರ ಕವನಗಳ ಸಂಕಲನವನ್ನು ರಚಿಸಿದ್ದರೂ ನಮಗೆ ಕೆ.ಎಸ್.ನ., ಎಂದರೆ ನೆನಪಾಗುವುದು ಮೈಸೂರು ಮಲ್ಲಿಗೆಯೇ. ಹೆಂಡತಿಯೊಬ್ಬಳು ಮನೆಯೊಳಗಿದ್ದರೆ... ಎಂದು ಹಾಡಿ ಹೆಣ್ಣಿಗೆ ಅತ್ಯುನ್ನತ ಸ್ಥಾನ ನೀಡಿದವರೂ ಅವರೇ ಆದರೆ ಇಂತಹ ನವಿರಾದ ರಮ್ಯ ಪದ್ಯಗಳನ್ನು ನಮಗೆ ನೀಡಿದ ಕೆಎಸ್‌ನ., ತನಗೆ ಒಂದು ಮೊಳ ಹೂ ತಂದುಕೊಟ್ಟದ್ದು ನೆನಪಿಲ್ಲ; ಆದರೆ ಪ್ರೀತಿಯನ್ನು ಮಾತ್ರ ಮೊಗೆಮೊಗೆದು ಕೊಟ್ಟರು ಎಂದು ಅವರ ಪತ್ನಿ ಅತೀವ ಸಂತಸದಿಂದ ಹೇಳುತ್ತಾರೆ.

ಇನ್ನೇನು ಪ್ರೇಮಿಗಳ ದಿನ ಬಂದೇ ಬಿಟ್ಟಿತಲ್ಲ! ಒಲವು, ಪ್ರೇಮ–ಪ್ರೀತಿ ಇತ್ಯಾದಿ ಶಬ್ದಗಳೆಲ್ಲಾ ಮುನ್ನೆಲೆಗೆ ಬರುವ ಹೊತ್ತು? ಹಾಗಾಗಿಯೇ ನನಗೆ ನಮ್ಮ ಕೆ.ಎಸ್.ನ. ಕವನಗಳ ನೆನಪಿನ ಸುರಿಮಳೆ ಧುಮ್ಮಿಕ್ಕಿದ್ದು! ಹಾಗೆಯೇ ಒಂದಷ್ಟು ನೆನಪು ಮಾಡಿಕೊಂಡಾಗ ಕನ್ನಡ ಸಾಹಿತ್ಯ ಲೋಕದಲ್ಲಿ ಅನುರೂಪದ ದಾಂಪತ್ಯಕ್ಕೆ ಹೆಸರಾದ ಕವಿಜೋಡಿಗಳೆಲ್ಲಾ ನೆನಪಿಗೆ ಬಂದರು.

ನಂದಳಿಕೆ ಲಕ್ಷ್ಮೀನಾರಣಪ್ಪ ಸೃಷ್ಟಿಸಿದ ಮುದ್ದಣ–ಮನೋರಮೆಯರು ಬಹುಶಃ ಆಧುನಿಕ ಕನ್ನಡ ಸಾಹಿತ್ಯದಲ್ಲಿ ನಮಗೆ ದೊರೆಯುವ ಮೊದಲ ಕವಿಜೋಡಿ. ಮನೆಯಲ್ಲಿ ಮುದ್ದಿನಿಂದ ಕರೆಯುತ್ತಿದ್ದ ಹೆಸರನ್ನೇ ಕಾವ್ಯನಾಮ ಮಾಡಿಕೊಂಡಿದ್ದ ಮುದ್ದಣರ ಪತ್ನಿ ಕಮಲಾಬಾಯಿ ಸಾಹಿತಿಯಲ್ಲ. ಆದರೆ ಆದರ್ಶ ಕವಿಪತ್ನಿ! ರಾಮಾಶ್ವಮೇಧಂ ಕೃತಿಯಲ್ಲಿ ರಾಮನ ಕತೆ ಹೇಳುವ ಕವಿ, ಕೇಳುಗರನ್ನಾಗಿ ತನ್ನ ಪತ್ನಿಯನ್ನೇ ಕುಳ್ಳಿರಿಸಿ ಒಂದು ವಿನೂತನ ಪ್ರಯೋಗ ಕೈಗೊಳ್ಳುತ್ತಾನೆ. ರಾಮನ ಕತೆಗೆ ಹೆಣ್ಣಾಗಿ ಸ್ಪಂದಿಸುವ ಮನೋರಮೆ ಇಂದಿಗೂ ಸಾಹಿತ್ಯ ಲೋಕದಲ್ಲಿ ಶಾಶ್ವತ. ಮುದ್ದಣರು ಚಿಕ್ಕ ವಯಸ್ಸಿನಲ್ಲಿಯೇ ಕ್ಷಯರೋಗದಿಂದ ನಿಧನರಾದರು. ಅವರ ಮನೋರಮೆಯನ್ನು, ಅಂದರೆ ಕಮಲಾಬಾಯಿ ಅವರನ್ನು ಆಕೆಯ ಇಳಿವಯಸ್ಸಿನಲ್ಲಿ ಆಕೆ ಮಗನ ಮನೆಯಲ್ಲಿ ಕಂಡು ಪುಳಕಿತನಾದೆ ಎಂದು ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟರು ತಮ್ಮ ಆತ್ಮಕತೆಯಲ್ಲಿ ನೆನೆಯುವುದನ್ನು ಓದಿದಾಗ ನಮಗೂ ರೋಮಾಂಚನವೆನಿಸುತ್ತದೆ. ನೇರವಾಗಿ ಕವಿ ಎಲ್ಲಿಯೂ ತಾವೇ ಆ ದಂಪತಿ ಎಂದು ಹೇಳದಿದ್ದರೂ, ಅದು ನಮಗೆ ವೇದ್ಯ!

ನಮ್ಮ ರಾಷ್ಟ್ರಕವಿ ಕುವೆಂಪು ಅವರ ಪ್ರೀತಿಯ ಪತ್ನಿ ಹೇಮಿಯ ಬಗ್ಗೆ ನಾವು ಅವರ ಬರಹ ಮಾತ್ರವಲ್ಲ, ಅವರ ಮಗಳಾದ ತಾರಿಣಿ ಮತ್ತು ಮಗ ಪೂಚಂತೇ ಅವರ ಬರಹಗಳ ಮೂಲಕವೂ ತಿಳಿದಿದ್ದೇವೆ. ನಾನು ಹೇಮಿಯ ಗಂಡ ಎಂದಾಗ ಸ್ವರ್ಗದ ಬಾಗಿಲು ತೆಗೆಯಿತು ಎಂದು ಹೆಮ್ಮೆಯಿಂದ ಹೇಳುವ ಕುವೆಂಪು ಅವರ ಪ್ರೇಮದ ಪರಿ ಅನನ್ಯ. ಹೋಳಿಗೆಗೆ ತಮ್ಮಿಬ್ಬರನ್ನೂ ಹೋಲಿಸಿಕೊಂಡು ಜೀವನದ ಸವಿ ಸವಿಯುವ ಬಾರಾ ಎಂದು ಕರೆಯುವ ಕುವೆಂಪು ಅವರ ಕವನಗಳು ಪ್ರೇಮಿಗಳಿಗೆ ಶುದ್ಧ ಪ್ರೀತಿಯ ಪಾಠ ಹೇಳುತ್ತವೆ. ಪತ್ನಿಯ ಹಸು–ಎಮ್ಮೆ ಸಾಕುವ ಆಸಕ್ತಿಗೆ ಕೊಂಚವೂ ಬೇಸರಿಸದೆ ಹಿಂಡಿಯನ್ನು ಹುಡುಕಿ ತರಲು ಹೊರಟ ಕುವೆಂಪು, ಆಗ ವಿಶ್ವವಿದ್ಯಾನಿಲಯದ ಕುಲಪತಿ! ಅವರ ನೆನಪಿನ ದೋಣಿ, ತಾರಿಣಿ ಅವರು ಬರೆದಿರುವ ಮಗಳು ಕಂಡ ಕುವೆಂಪು ಕೃತಿಗಳನ್ನು ಓದುವಾಗ, ಹೇಮಾವತಿ ಅವರ ನಿಧನದ ನಂತರ ಕುವೆಂಪು ಅವರು ಅನುಭವಿಸಿದ ಶೂನ್ಯತೆ ನಮ್ಮನ್ನೂ ಕಾಡುತ್ತದೆ.

ಇನ್ನು ಬೇಂದ್ರೆ ಅವರ ಕವನಗಳಲ್ಲಿ ದಾಂಪತ್ಯ ಸಾಂಗತ್ಯದ ಪರಿಭಾಷೆಯೇ ನಮಗೆ ಸಿಗುತ್ತದೆ.

ನನ ಕೈಯ್ಯ ಹಿಡಿದಾಕೆ ಅಳುನುಂಗಿ ನಗುವಾಕೆ
ನಾನೂನೂ ನಕ್ಕೇನ

> 66 ಪ್ರೀತಿಯಲ್ಲಿ ಬೀಳುವ ಮುಂಚೆ ಇವೆಲ್ಲದರ ಬಗ್ಗೆ ನಿಚ್ಚಳವಾದ ದೃಷ್ಟಿಯನ್ನು ಬೆಳೆಸಿಕೊಳ್ಳಲೇಬೇಕಾಗುತ್ತದೆ. ಪ್ರೀತಿ ಕುರುಡು, ಪ್ರೇಮಕ್ಕೆ ಕಣ್ಣಿಲ್ಲ ಎಂಬುದೆಲ್ಲ ಹಳೆಯ ಕಾಲದ ಕತೆಯಾಯಿತು. ವ್ಯವಹಾರಿಕವಾಗಿ ಬಹಳ ಬೆಳೆದಿರುವ ಪ್ರಪಂಚ, ಪ್ರೀತಿಯನ್ನು ನವಿರು ಭಾವನೆಯಾಗಿಯಷ್ಟೇ ಇರಲು ಬಿಟ್ಟಿಲ್ಲ. ಈ ವಾಸ್ತವವನ್ನು ನಾವು ಅರಗಿಸಿಕೊಳ್ಳಲೇಬೇಕು.

ಇಲದಿರಕ ನಿನ ಅಳುವ ಹುಚ್ಚು ಹಳ್ಳದ ಕಳ್ಳ
ಹುದಲಾಗ ಸಿಕ್ಕೇನ?

ಪ್ರೀತಿಯ ಹಕ್ಕಿನಿಂದ ಹೆಂಡತಿಗೆ ಮಾತಿನಿಂದಲೇ ಲಘುವಾಗಿ ಗದರಿಸುತ್ತಲೇ ಅವಳ ನಡೆನುಡಿ, ಹಾವಭಾವ, ಅವಳ ಧ್ಯಾನ ಎಲ್ಲವೂ ಹೇಗೆ ತನ್ನ ಜೀವನದ ದಿಕ್ಸೂಚಿಯಾಗಿದೆ ಎಂದು ಹೇಳುವ ಈ ಕವನ ಅನುರೂಪ ದಾಂಪತ್ಯದ ಪಾಠ ಹೇಳುತ್ತದೆ. ಸಖೀಗೀತದ ಹಲವಾರು ಕವನಗಳು ಆಹ್ಲಾದಕರ ಭಾವಗಳನ್ನು ಉಂಟು ಮಾಡುತ್ತವೆ.

ಎಸ್.ವಿ.ಪರಮೇಶ್ವರ ಭಟ್ಟರ ಪತ್ನಿ ದೀರ್ಘಕಾಲದ ಅನಾರೋಗ್ಯಕ್ಕೆ ತುತ್ತಾಗಿ ಹಾಸಿಗೆ ಹಿಡಿದಿದ್ದರು. ಅವರ ಎಲ್ಲ ಸೇವೆಗಳನ್ನು ಪ್ರೀತಿಯಿಂದಲೇ ಮಾಡುತ್ತಾ ಸಾಹಿತ್ಯಲೋಕಕ್ಕೆ ಅನುಪಮವಾದ ಕೊಡುಗೆ ನೀಡಿದರು. ಕನ್ನಡದ ಅತ್ಯಂತ ಪ್ರಮುಖ ಸಾಹಿತಿಗಳಾದ ಅನುಪಮಾ ನಿರಂಜನ ಮತ್ತು ನಿರಂಜನರ ಜೋಡಿ, ಉಷಾ ನವರತ್ನರಾಮ್ ಮತ್ತು ನವರತ್ನ ರಾಮ್, ಸರಿತಾ ಮತ್ತು ಜ್ಞಾನಾನಂದ, ಚೆನ್ನವೀರ ಕಣವಿ ಮತ್ತು ಶಾಂತಾದೇವಿ ಕಣವಿ, ಸಿದ್ಧಲಿಂಗ ಪಟ್ಟಣಶೆಟ್ಟಿ ಮತ್ತು ಹೇಮಾ ಪಟ್ಟಣಶೆಟ್ಟಿ, ಹಂಪನಾ ಮತ್ತು ಕಮಲಾ ಹಂಪನಾ ಹೀಗೆ ಎಷ್ಟೊಂದು ಯಶಸ್ವೀ ಸಾಹಿತಿ ಜೋಡಿಗಳು ನಮ್ಮ ಕಣ್ಣಮುಂದಿದ್ದಾರೆ. ಕನ್ನಡದ ಶ್ರೇಷ್ಠ ವಿಮರ್ಶಕ ಕೀರ್ತಿನಾಥ ಕುರ್ತಕೋಟಿ ಮತ್ತು ಅವರ ಶ್ರೀಮತಿ ಅವರು ಒಂದೇ ದಿನ ನಿಧನರಾದರು. ಸಾವಿನಲ್ಲಿಯೂ ಜೊತೆಗೂಡಿದರು.

ಪಂಜಾಬಿ ಲೇಖಕಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತೆ ಅಮೃತಾ ಪ್ರೀತಮ್ ಮತ್ತು ಸಾಹಿರ್ ಲೂಧಿಯಾನ್ವಿ ಅವರ ಅಸಫಲ ಪ್ರೇಮ ಇಂದಿಗೂ ಎಲ್ಲರ ಬಾಯಲ್ಲಿ ಹರಿದಾಡುತ್ತಿದೆ. ನಂತರ ಇಮ್ರೋಜ್ ಅವರನ್ನು ಭೇಟಿಯಾದ ಅಮೃತಾ ಅವರಲ್ಲಿ ತಮ್ಮ ನಿಜ ಸಂಗಾತಿಯನ್ನು ಕಂಡುಕೊಂಡು ಉತ್ಕಟ ಪ್ರೇಮವನ್ನು ಸೂಸುವ ಹಲವಾರು ಕವನಗಳನ್ನು ಬರೆದರು. ಅವರು ಇಮ್ರೋಜ್‌ಗೆ ಬರೆದ ಪತ್ರಗಳು ಅವರಿಬ್ಬರ ನಡುವಿನ ಅವಿನಾಭಾವ ಸಂಬಂಧವನ್ನು ಮಧುರವಾಗಿ ರೂಪಿಸುತ್ತದೆ.

ಹಾಗೆಯೇ ಪಶ್ಚಿಮದ ಸಾಹಿತ್ಯ ಪ್ರಪಂಚಕ್ಕೆ ಹೋದರೆ, ಸಿಲ್ವಿಯಾ ಪ್ಲಾತ್ ಮತ್ತು ಟೆಡ್ ಹ್ಯೂಸ್ ಅವರ ಪ್ರೇಮ ಪ್ರಕರಣ ಅತ್ಯಂತ ಪ್ರಸಿದ್ಧವಾದದ್ದು. ಟೆಡ್ ಹ್ಯೂಸ್ ತನ್ನ ಪತ್ನಿಗೆ ನಿಷ್ಠನಾಗಿರದೇ ಇದ್ದದ್ದು ಸಿಲ್ವಿಯಾಳನ್ನು ಆತ್ಮಹತ್ಯೆ ಮಾಡಿಕೊಳ್ಳುವಂತೆ ಮಾಡಿತು. ಆದರೂ ಆ ಪ್ರೇಮ ಪರಾಕಾಷ್ಠೆಯ ದಿನಗಳಲ್ಲಿ ಅವರಿಬ್ಬರೂ, ವಿಶೇಷವಾಗಿ ಸಿಲ್ವಿಯಾ ಬರೆದ ಕವನಗಳು ಇಂದಿಗೂ ಮುಗ್ಧ ಸ್ನಿಗ್ಧ ಪ್ರೇಮಕ್ಕೆ ಉದಾಹರಣೆಯಾಗಿ ಅಮರವಾಗಿವೆ.

ಪಿ.ಬಿ.ಷೆಲ್ಲಿ ಮತ್ತು ಮೇರಿ ಷೆಲ್ಲಿ ಇಂಗ್ಲಿಷ್ ಕಾವ್ಯ ಲೋಕದ ಮತ್ತೊಂದು ಕವಿಜೋಡಿ. ಷೆಲ್ಲಿ ರೊಮ್ಯಾಂಟಿಕ್ ಕವಿಗಳಲ್ಲಿ ಅಗ್ರಮಾನ್ಯನಾದರೆ, ಮೊದಲ ವೈಜ್ಞಾನಿಕ ಕಾದಂಬರಿ ಬರೆದ ಮೇರಿ ಷೆಲ್ಲಿಯ ಸಾಧನೆ ಅದ್ಭುತ. ಆಗಿನ ಸಾಂಪ್ರದಾಯಿಕ ಇಂಗ್ಲಿಷ್ ಸಮಾಜದ ಕಟ್ಟುಕಟ್ಟಳೆಗಳನ್ನು ಎದುರಿಸಿ ಪ್ರೀತಿಯನ್ನು ಯಶಸ್ವಿಯಾಗಿಸಿಕೊಂಡ ಇವರಿಬ್ಬರದು ಅನುರೂಪವಾದ ದಾಂಪತ್ಯ.

ತತ್ವಶಾಸ್ತ್ರ ಮತ್ತು ಸ್ತ್ರೀವಾದಕ್ಕೆ ಹೊಸತೊಂದು ವ್ಯಾಖ್ಯೆಯನ್ನೇ ನೀಡಿದ ಜೀನ್ ಪಾಲ್ ಸಾರ್ತ್ರೆ ಮತ್ತು ಸಿಮೋನ್ ಡಿಬೊವರ್ ಅವರ ಸಾಂಗತ್ಯ ವಿಶಿಷ್ಟವಾದುದು. ಬೌದ್ಧಿಕ ಸಾಹಚರ್ಯಕ್ಕೆ ಮತ್ತೊಂದು ಹೆಸರೇ ಇವರಿಬ್ಬರದು. ವೈಯಕ್ತಿವಾಗಿ ಇಬ್ಬರದೂ ಬೇರೆ ಬೇರೆ ಜೀವನವಾದರೂ, ಸಾಹಿತ್ಯಕವಾಗಿ ಇಬ್ಬರೂ ಪರಸ್ಪರರ ಬಲ–ಬೆಂಬಲವಾಗಿದ್ದರು.

ಅಮೆರಿಕೆಯ ಪ್ರಸಿದ್ಧ ಕಾದಂಬರಿಕಾರ ಸ್ಕಾಟ್ ಫಿಟ್ಜರಾಲ್ಡ್ ಮತ್ತು ಝೆಲ್ಡಾ ಫಿಟ್ಜರಾಲ್ಡ್ ಅವರದ್ದು ಇಲ್ಲಿ ಹೆಸರಿಸಬಹುದಾದ ಮತ್ತೊಂದು ಜೋಡಿ. ಎಲಿಝಬೆತ್ ಬ್ಯಾರೆಟ್ ಮತ್ತು ರಾಬರ್ಟ್ ಬ್ರೌನಿಂಗ್‌ರ ಕವಿಜೋಡಿ ಇಂಗ್ಲಿಷ್ ಸಾಹಿತ್ಯವನ್ನು ಸಮೃದ್ಧವಾಗಿಸಿತು.

ಇವರುಗಳಲ್ಲದೆ, ವರ್ಜೀನಿಯಾ ವುಲ್ಫ್ ಮತ್ತು ವಿಟಾ ಸಾಕ್ವಿಲ್‌ರ ಸಲಿಂಗಪ್ರೇಮದ ಕತೆಯೂ ಪಶ್ಚಿಮದ ಸಾಹಿತ್ಯದಲ್ಲಿ ಅಜರಾಮರವಾಗಿದೆ. ಇಬ್ಬರೂ ವೈಯಕ್ತಿಕವಾಗಿ ವಿವಾಹಿತರಾಗಿದ್ದರೂ, ತಮ್ಮ ಸಂಬಂಧವನ್ನು ಜಗಜ್ಜಾಹೀರುಗೊಳಿಸಿ ಸಂತಸದಿಂದಿದ್ದರು ಎಂಬುದನ್ನು ಓದಲು ನಮಗೆ ವಿಚಿತ್ರವೆನಿಸಿದರೂ ನಿಜ!

ಇಂದು ಸಂಬಂಧಗಳು ಮರಳಿನ ಅಡಿಪಾಯದ ಮೇಲೆ ನಿಂತಿವೆ. ಬೇಷರತ್ ಪ್ರೀತಿ (Unconditional Love) ಇಲ್ಲವಾಗಿ ಬೇಡಿಕೆಗಳು ಕೋರಿಕೆಗಳು, ಅಪೇಕ್ಷೆಗಳು ಅತೀ ಹೆಚ್ಚಾಗಿ ಪ್ರೀತಿಯೆಂಬುದು ಸರಕೇನೋ ಎಂಬ ಭಾವ ಮೂಡಿಸಿದೆ. ಪ್ರಪಂಚ ಜ್ಞಾನ ಇಲ್ಲದ, ಓದು ಬರಹ ಮಾಡುವಂತಹ ವಯಸ್ಸಿನಲ್ಲಿಯೇ ಪ್ರೀತಿ–ಪ್ರೇಮದ ಹುಚ್ಚಿಗೆ ಬಿದ್ದು ಭ್ರಮನಿರಸನಗೊಂಡು, ಏನನ್ನೂ ಸಾಧಿಸಲಾಗದೆ ಹತಾಶೆಗೊಳಗಾಗುವವರ ಸಂಖ್ಯೆ ದಿನೇ ದಿನೆ ಹೆಚ್ಚಿದೆ. ಇದಕ್ಕೆ ಜಾಲತಾಣಗಳು, ಸಿನಿಮಾಗಳು, ಧಾರಾವಾಹಿಗಳ ಕೊಡುಗೆ ಸಾಕಷ್ಟಿದೆ.

ಸಮಯ ಕಳೆಯಲು, ವ್ಯಾಲಂಟೈನ್ ಡೇ ಆಚರಿಸಲು, ಸುತ್ತಾಡಲು, ಸಮವಯಸ್ಕರೊಂದಿಗೆ ಸ್ಪರ್ಧಿಸಲು ಮಾತ್ರ ಜೊತೆಗಾರರನ್ನು ಮಾಡಿಕೊಳ್ಳುತ್ತಿರುವುದು ಅತ್ಯಂತ ದುರಂತವೇ ಸರಿ.

ಆಕಾಶವಾಣಿಯಲ್ಲಿ ಅಧಿಕಾರಿಯಾಗಿದ್ದ, ಕನ್ನಡದ ಸೃಜನಶೀಲ ಲೇಖಕಿ, ಇತ್ತೀಚೆಗೆ ನಮ್ಮನ್ನು ಅಗಲಿದ ಜ್ಯೋತ್ಸ್ನಾ ಕಾಮತ್‌ರ ಕಲಕತ್ತಾ ದಿನಗಳು ಕೃತಿಯಲ್ಲಿ ಅವರ ಸಹೋದ್ಯೋಗಿಯೊಬ್ಬರ ಕತೆಯನ್ನು ದಾಖಲಿಸಿದ್ದಾರೆ. ತಮ್ಮ ತಂಗಿಯರ ಜವಾಬ್ದಾರಿಗಳನ್ನು ಹೊತ್ತಿದ್ದ ಅವರ ಸಹೋದ್ಯೋಗಿಯೊಬ್ಬರಿಗೆ ಅವರ ಮತ್ತೊಬ್ಬ ಸಹೋದ್ಯೋಗಿ ಪ್ರೇಮ ನಿವೇದನೆ ಮಾಡುತ್ತಾರೆ.

ಆದರೆ ಅಸಂಖ್ಯ ಜವಾಬ್ದಾರಿಗಳನ್ನು ಹೊತ್ತಿದ್ದ ಆಕೆ ಮದುವೆಯಾಗಲು ಒಪ್ಪುವುದಿಲ್ಲ. ಇನ್ನೇನು ನಿವೃತ್ತಿಯ ಹಂತಕ್ಕೆ ಬರುವ ಹೊತ್ತಿಗೆ ಎಲ್ಲ ಜವಾಬ್ದಾರಿಗಳೂ ಕಳೆದು ನಿರಾಳವಾಗಿದ್ದ ಅವರಿಗೆ, ಮತ್ತೆ ಅದೇ ಸಹೋದ್ಯೋಗಿ ಮದುವೆಯ ಪ್ರಸ್ತಾಪ ಮಾಡುತ್ತಾರೆ. ಅಲ್ಲಿಯವರೆಗೂ ಸುಮಾರು ಇಪ್ಪತ್ತು ಸುದೀರ್ಘ ವರ್ಷಗಳೇ ಕಳೆದಿರುತ್ತವೆ! ಆದರೂ ತನ್ನ ಪರಿಶುದ್ಧ ಪ್ರೇಮದಲ್ಲಿ ನಂಬಿಕೆಯಿಟ್ಟು ಆತ ಕಾಯುತ್ತಿದ್ದ. ನಂತರ ಅವರಿಬ್ಬರ ಮದುವೆ ಜರುಗುತ್ತದೆ. ಸಿನಿಮೀಯ ಎನಿಸಿದರೂ ಇದು ವಾಸ್ತವದ ಸಂಗತಿ.

ಪ್ರೀತಿಸುವವರಿಗೆ ಇಂತಹವರು ಸ್ಫೂರ್ತಿಯಾಗಬೇಕು. ಎಂತಹುದೇ ಸಂದರ್ಭದಲ್ಲೂ ಪ್ರೇಮಿಸಿದವರನ್ನು ಬಿಡದಿರುವ ಅಚಲ ನಿರ್ಧಾರ ಕೈಗೊಳ್ಳುವ ಛಾತಿಯಷ್ಟೇ ಪ್ರೇಮಕ್ಕೆ ನಿಜವಾದ ತಳಹದಿಯಾಗಬೇಕು.

ಸಂಗಾತಿ/ಪತಿ/ಪತ್ನಿಯ ಏಳಿಗೆ, ಸುಖ–ದುಃಖ, ಸಂಕಟ, ಸಫಲತೆ–ಅಸಫಲತೆ ಎಲ್ಲದರಲ್ಲೂ ಜೊತೆಯಾಗಿರುವ ಬದ್ಧತೆ ಮಾತ್ರ ಸಂಬಂಧವನ್ನು ಉಳಿಸುತ್ತದೆ. ಸಂಗಾತಿಯೆಡೆಗೆ ಯಾವುದೇ ವಿಷಯಕ್ಕೆ ಹೊಟ್ಟೆಕಿಚ್ಚು, ಅಸಹನೆ, ದ್ವೇಷ, ಅನುಮಾನ ಹುಟ್ಟಿದರೆ ಆ ಸಂಬಂಧ ಸತ್ತಂತೆ. ಪ್ರೀತಿಯಲ್ಲಿ ಬೀಳುವ ಮುಂಚೆ ಇವೆಲ್ಲದರ ಬಗ್ಗೆ ನಿಚ್ಚಳವಾದ ದೃಷ್ಟಿಯನ್ನು ಬೆಳೆಸಿಕೊಳ್ಳಲೇಬೇಕಾಗುತ್ತದೆ. ಪ್ರೀತಿ ಕುರುಡು, ಪ್ರೇಮಕ್ಕೆ ಕಣ್ಣಿಲ್ಲ ಎಂಬುದೆಲ್ಲ ಹಳೆಯ ಕಾಲದ ಕತೆಯಾಯಿತು. ವ್ಯವಹಾರಿಕವಾಗಿ ಬಹಳ ಬೆಳೆದಿರುವ ಪ್ರಪಂಚ, ಪ್ರೀತಿಯನ್ನು ನವಿರು ಭಾವನೆಯಾಗಿಯಷ್ಟೇ ಇರಲು ಬಿಟ್ಟಿಲ್ಲ. ಈ ವಾಸ್ತವವನ್ನು ನಾವು ಅರಗಿಸಿಕೊಳ್ಳಲೇಬೇಕು.

ವ್ಯಾಲೆಂಟೈನ್ಸ್ ಡೇ ಎಂಬುದು ಇಂದು ಪ್ರೇಮ ನಿವೇದನೆ ಮಾಡಿಕೊಳ್ಳುವ ದಿನಕ್ಕಿಂತ ಹೆಚ್ಚಾಗಿ, ಬಿಲಿಯನ್ ಡಾಲರ್‌ಗಳಲ್ಲಿ ವ್ಯವಹಾರ ಕುದುರುವ ದಿನವಾಗಿದೆ. Brutal Honesty ಅನ್ನು ಬೆಳೆಸಿಕೊಳ್ಳದೆಹೋದರೆ, ಪ್ರೇಮ ಜೀವನದಲ್ಲಿ ಸುಧಾರಿಸಿಕೊಳ್ಳಲು ಸಾಧ್ಯವಾಗದಂತಹ ಪೆಟ್ಟನ್ನು ನೀಡುವ ಅಪಾಯವಿದೆ.

ನಾನು ಮೇಲೆ ಹೇಳಿದ ಮನೋಹರ ಪ್ರೇಮದ ಕತೆಗಳು ಇರುವುದು ಎಷ್ಟು ನಿಜವೋ, ಭಾವನಾರಹಿತ ಪ್ರಪಂಚವೊಂದು ಸಮನಾಂತರವಾಗಿ ಅಸ್ತಿತ್ವದಲ್ಲಿರುವುದು ಅಷ್ಟೇ ನಿಜ!

ವ್ಯಾಲಂಟೈನ್ಸ್ ಡೇ ಎನ್ನುವುದು ಶುದ್ಧ ಪ್ರೇಮವನ್ನು ನಾವು ಗುರುತಿಸಿ ಸಂಭ್ರಮಿಸುವ ದಿನವಾಗಲಿ. ಮನುಜರ ಮನಸಿನಲಿ ಸಹೃದಯತೆ, ನಿರಾಳತೆ ಮೂಡಿ ಪ್ರೇಮವೆಂಬುದು ನಿಸ್ವಾರ್ಥದಿಂದ ಮನದಾಳದಿಂದ ಮೂಡಿಬರಲಿ.

ಫೆ.10, ಬೊಮ್ಮಾಯಿ ನೇತೃತ್ವದಲ್ಲಿ ಬಿಜೆಪಿ ಲಿಂಗಾಯತ ರೆಬೆಲ್ ನಾಯಕರ ಸಭೆ?

ನವದೆಹಲಿ, ಫೆ.5–ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ವಿರುದ್ಧ ಸಮರ ಸಾರಿರುವ ಬಂಡಾಯ ನಾಯಕರು ತಮ್ಮ ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸಲು ನಿರ್ಧರಿಸಿದ್ದಾರೆ. ಫೆ.10ರಂದು ಮಾಜಿ ಮುಖ್ಯಮಂತ್ರಿ, ಸಂಸದ ಬಸವರಾಜ್ ಬೊಮ್ಮಾಯಿ ನೇತೃತ್ವದಲ್ಲಿ ಲಿಂಗಾಯತ ನಾಯಕರ ಸಭೆ ನಡೆಸಲು ನಿರ್ಧರಿಸಿದ್ದಾರೆ ಎಂದು ಮೂಲಗಳು ಹೇಳಿವೆ.



ಬಸವರಾಜ್ ಬೊಮ್ಮಾಯಿ

ದೆಹಲಿಯಲ್ಲಿ ಬೀಡು ಬಿಟ್ಟಿರುವ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್, ರಮೇಶ್ ಜಾರಕಿಹೊಳಿ, ಮಾಜಿ ಸಂಸದ ಜಿ.ಎಂ.ಸಿದ್ದೇಶ್ವರ್, ಕುಮಾರ ಬಂಗಾರಪ್ಪ ಸೇರಿದಂತೆ ಹಲವು ನಾಯಕರು ಕರ್ನಾಟಕ ಭವನದಲ್ಲಿ ಬಸವರಾಜ್ ಬೊಮ್ಮಾಯಿ ಜೊತೆಗೆ ಸಭೆ ನಡೆಸಿದ್ದಾರೆ. ಸಭೆಯಲ್ಲಿ ಹಂತಹಂತವಾಗಿ ಸಮುದಾಯವಾರು ಹೈಕಮಾಂಡ್ ಮೇಲೆ ಒತ್ತಡ ಹೇರುವ ನಿರ್ಧಾರಕ್ಕೆ ಬಂದಿದೆ. ಒಬಿಸಿ ಹಾಗೂ ದಲಿತ ನಾಯಕರು ಈಗಾಗಲೇ ವರಿಷ್ಠರನ್ನು ಭೇಟಿ ಮಾಡಿದ್ದು, ಈಗ ಲಿಂಗಾಯತ ಸಮುದಾಯ ಪ್ರತಿನಿಧಿಸುವ ನಾಯಕರಿಂದ ಹೈಕಮಾಂಡ್ ನಾಯಕರನ್ನು ಭೇಟಿ ಮಾಡುವ ನಿರ್ಧಾರಕ್ಕೆ ಬಂದಿದ್ದಾರೆ ಎನ್ನಲಾಗಿದೆ.

ಫೆ.10ರಂದು ಕೇಂದ್ರ ಸಚಿವ ವಿ.ಸೋಮಣ್ಣ ಅವರ ಸರ್ಕಾರಿ ನಿವಾಸದಲ್ಲಿ ಗೃಹಪ್ರವೇಶ ಪೂಜೆ ನಡೆಯಲಿದ್ದು, ಈ ಸಭೆಗೆ ಎಲ್ಲಾ ರೆಬೆಲ್ ಲಿಂಗಾಯತ ನಾಯಕರನ್ನು ಆಹ್ವಾನಿಸುವ ನಿರ್ಧಾರಕ್ಕೆ ಬರಲಾಗಿದೆ. ಅಂದು ಪೂಜೆಯ ನೆಪದಲ್ಲಿ ಎಲ್ಲ ನಾಯಕರು ಜೊತೆಯಾಗಿ ಸಭೆ ನಡೆಸಿ ಬಿ.ವೈ.ವಿಜಯೇಂದ್ರ ಅವರನ್ನು ಪದಚ್ಯುತಿಗೊಳಿಸಲು ಹೈಕಮಾಂಡ್ ಮೇಲೆ ಒತ್ತಡ ಹೇರುವ ಬಗ್ಗೆ ನಿರ್ಧರಿಸಲಾಗುತ್ತದೆ ಎಂದು ಹೇಳಲಾಗುತ್ತಿದೆ. ಸಭೆ ಬಳಿಕ ಮಾತನಾಡಿದ ಮಾಜಿ ಸಂಸದ ಸಿದ್ದೇಶ್ವರ್, ಫೆ.10ರ ನಂತರ ಶುಭ ಸುದ್ದಿ ಸಿಗಲಿದೆ. ಹೈಕಮಾಂಡ್ ಒಳ್ಳೆಯ ನಿರ್ಧಾರ ತೆಗೆದುಕೊಳ್ಳಲಿದೆ ಎಂದು ಸಭೆ ಬಗ್ಗೆ ಮಾಹಿತಿ ಹಂಚಿಕೊಂಡರು. ಫೆ.10ರ ಬಳಿಕ ಶುಭ ಸುದ್ದಿ ಎಂದು ರಮೇಶ್ ಜಾರಕಿಹೊಳಿ ಕೂಡ ಧ್ವನಿಗೂಡಿಸಿದರು.

ವಿಜಯೇಂದ್ರರನ್ನು ಕೆಳಗಿಳಿಸಿದರೆ ಬಿಜೆಪಿಗೆ 10 ಸೀಟೂ ಬರಲ್ಲ

ಬಸನಗೌಡ ಪಾಟೀಲ್ ಯತ್ನಾಳ್ ಟೀಂಗೆ ರೇಣುಕಾಚಾರ್ಯ ಟಾಂಗ್

ಬೆಂಗಳೂರು,ಫೆ.5–ಬಿಜೆಪಿಯ ಬಣ ಬಡಿದಾಟ ದೆಹಲಿ ಹೈಕಮಾಂಡ್ ಅಂಗಳ ತಲುಪಿದೆ. ರಾಜಕೀಯ ಹೈಡ್ರಾಮಾ ಜೋರಾಗಿದೆ. ರಾಜ್ಯ ಬಿಜೆಪಿ ನಾಯಕರು ಒಬ್ಬೊಬ್ಬರಾಗಿ ದಿಲ್ಲಿ ನಾಯಕರನ್ನು ಭೇಟಿ ಮಾಡಿ ಚರ್ಚೆ ನಡೆಸುತ್ತಿದ್ದಾರೆ.



ರೇಣುಕಾಚಾರ್ಯ

ಶಾಸಕ ಯತ್ನಾಳ್ ದೆಹಲಿಯಲ್ಲೇ ಬೀಡು ಬಿಟ್ಟು ಲಾಬಿ ನಡೆಸುತ್ತಿದ್ದಾರೆ. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರರನ್ನು ಅಧಿಕಾರದಿಂದ ಕೆಳಗಿಳಿಸಲು ಆಗ್ರಹಿಸುತ್ತಿದ್ದಾರೆ. ನಾನೂ ಕೂಡ ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನದ ಆಕಾಂಕ್ಷಿ ಎಂದಿದ್ದಾರೆ.

ಈ ನಡುವೆ ವಿಜಯೇಂದ್ರ ಪರ ಬಣದಲ್ಲಿ ಗುರುತಿಸಿಕೊಂಡಿರುವ ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ, ನಮ್ಮ ಒಳಜಗಳ, ಕಿತ್ತಾಟದ ಲಾಭ ಪಡೆದು ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ. ಈಗ ಪಕ್ಷದಲ್ಲಿನ ಬೆಳವಣಿಗೆಯನ್ನು ನೋಡಿ ಜನ ಉಗಿಯುತ್ತಿದ್ದಾರೆ. ನಮ್ಮ ಕಾರ್ಯಕರ್ತರ ಮನಸ್ಸಿಗೆ ನೋವಾಗಿದೆ. ವಿಜಯೇಂದ್ರರನ್ನು ರಾಜ್ಯಾಧ್ಯಕ್ಷ ಸ್ಥಾನದಿಂದ ಕೆಳಗಿಳಿಸಿದರೆ ಬಿಜೆಪಿಗೆ 10 ಸೀಟೂ ಬರಲ್ಲ. ಹೈಕಮಾಂಡ್‌ಗೂ ವಿಜಯೇಂದ್ರರನ್ನು ಕೆಳಗಿಳಿಸುವ ಇರಾದೆ ಇಲ್ಲ. ಅವರೇ ಮುಂದುವರೆಯುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಯಡಿಯೂರಪ್ಪ, ವಿಜಯೇಂದ್ರ ಅವರು ಮಾತಾಡಬೇಡಿ ಎಂದು ಸೂಚನೆ ನೀಡಿದ್ದರು. ಹಾಗಾಗಿ ಸೈಲೆಂಟಾಗಿ ಇದ್ದೆವು. ಆದರೆ ಯತ್ನಾಳ್ ಅವರ ಬಣ ಬಡಿದಾಟದಿಂದ ನಮ್ಮ ಮನಸ್ಸಿಗೆ ಬಹಳ ನೋವಾಗಿದೆ. ಹೀಗಾಗಿ ತುರ್ತು ಸಭೆ ಕರೆದು ಚರ್ಚಿಸಿದೆವು ಎಂದು ಹೇಳಿದರು.

ನಮ್ಮ ಹೈಕಮಾಂಡ್ ವಿಚಾರಕ್ಕೆ ಬಂದರೆ ಕಳೆದ 3–4 ತಿಂಗಳಿಂದ ಜೆ.ಪಿ.ನಡ್ಡಾ, ಅಮಿತ್ ಶಾ ಅವರನ್ನು ಭೇಟಿ ಮಾಡಲು ಸಾಧ್ಯವಾಗುತ್ತಿಲ್ಲ. ಯತ್ನಾಳ್ ಅವರ ಟೀಂ ಭೇಟಿ ಮಾಡಿದ್ದೆವು ಎಂದು ಸುಳ್ಳು ಹೇಳಿಕೊಂಡು ಸುದ್ದಿಗಳನ್ನು ಹುಟ್ಟು ಹಾಕುತ್ತಿದ್ದಾರೆ. ಫೋಟೋ ತೋರಿಸಿ ಎಂದರೆ, ಫೋಟೋ ತೆಗೆಯಬೇಡಿ ಎಂದು ದೆಹಲಿ ನಾಯಕರು ಹೇಳಿದ್ದಾರೆ ಎಂದು ಸಮರ್ಥನೆ ಕೊಡುತ್ತಿದ್ದಾರೆ. ಇದೆಲ್ಲಾ ಬರೀ ಸುಳ್ಳು ಎಂದರು.

ವಿಜಯೇಂದ್ರರ ಆತ್ಮವಿಶ್ವಾಸವನ್ನು ಕುಗ್ಗಿಸಲು ನಿಮ್ಮಿಂದ ಸಾಧ್ಯವಿಲ್ಲ. ಯಡಿಯೂರಪ್ಪ ಅವರು ಕಾಲಿಗೆ ಚಕ್ರ ಕಟ್ಟಿ ಪಕ್ಷ ಕಟ್ಟಿದವರು. ಅದೇ ರೀತಿ ವಿಜಯೇಂದ್ರ ನಾಡಿನ ಯುವಕರ ಐಕಾನ್. ಅಂತಹವರ ಬಗ್ಗೆ ಮಾತಾಡಲು ನಿಮಗೆ ನೈತಿಕತೆ ಇಲ್ಲ. ಮುಂದಿನ ವಾರ ನಾವು ಮತ್ತೆ ಸಭೆ ಮಾಡುತ್ತೇವೆ. ಪಕ್ಷ ಕಟ್ಟುವ ಶಕ್ತಿ ವಿಜಯೇಂದ್ರಗೆ ಮಾತ್ರ ಇದೆ ಎಂಬುದು ಸತ್ಯ. ವಿಜಯೇಂದ್ರರನ್ನು ಟೀಕೆ ಮಾಡುವುದು, ಮೋದಿ, ಅಮಿತ್ ಶಾ, ನಡ್ಡಾರನ್ನು ಟೀಕೆ ಮಾಡಿದಂತೆ ಎಂದು ನುಡಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ ಗುರುವಾರ 6 ಫೆಬ್ರವರಿ 2025

ಮಾಜಿ ಸಂಸದ ಪ್ರತಾಪ್ ಸಿಂಹರಿಂದ ಅಕ್ಷರಭ್ಯಾಸ ಪೋಸ್ಟರ್ ಬಿಡುಗಡೆ

ಫೆ.14, ಉಚಿತ ಸಾಮೂಹಿಕ ಅಕ್ಷರಾಭ್ಯಾಸ



ಉಚಿತ ಸಾಮೂಹಿಕ ಅಕ್ಷರಾಭ್ಯಾಸ ಕಾರ್ಯಕ್ರಮದ ಪೋಸ್ಟರ್ ಅನ್ನು ಮಾಜಿ ಸಂಸದ ಪ್ರತಾಪ್ ಸಿಂಹ ಬಿಡುಗಡೆ ಮಾಡಿದರು.

ಮೈಸೂರು,ಫೆ.5–ಮೈಸೂರಿನ ಕೆಎಂಪಿಕೆ ಟ್ರಸ್ಟ್ ವತಿಯಿಂದ ಫೆ.14ರಂದು ಬೆಳಗ್ಗೆ 8ರಿಂದ 10.30ರವರೆಗೆ ವಿಶ್ವೇಶ್ವರ ನಗರದ ಮಹರ್ಷಿ ಪಬ್ಲಿಕ್ ಶಾಲೆಯಲ್ಲಿ ಉಚಿತವಾಗಿ ಸಾಮೂಹಿಕ ಅಕ್ಷರಾಭ್ಯಾಸ ಹಾಗೂ ಸರಸ್ವತಿ ಪೂಜೆ ಏರ್ಪಡಿಸಲಾಗಿದೆ.

ಈ ಸಂಬಂಧ ಮಾಜಿ ಸಂಸದ ಪ್ರತಾಪ್ ಸಿಂಹ ಕಾರ್ಯಕ್ರಮದ ಪೋಸ್ಟರ್ ಬಿಡುಗಡೆ ಮಾಡಿ ಮಾತನಾಡಿ, ಪ್ರತಿಯೊಬ್ಬ ನಾಗರಿಕನಿಗೂ ಜೀವಿಸಲು ಮನೆ, ಆಹಾರ, ಬಟ್ಟೆ ಮೂಲಭೂತ ಸೌಲಭ್ಯವಾದರೆ, ಹುಟ್ಟಿದ ಮಗುವಿಗೂ ಅನ್ನ, ಅಕ್ಷರ, ಆರೋಗ್ಯ, ಬದುಕಲು ಆಶ್ರಯ ಬೇಕು. ಹಾಗಾಗಿ ಮಗುವಿಗೆ ಮಾತನಾಡುವ ಭಾಷೆ ಮತ್ತು ವಿದ್ಯೆ ಕಲಿಸುವ ಪ್ರಾರಂಭ ಹಂತ ಅಕ್ಷರಾಭ್ಯಾಸ. ಇದು ಪೋಷಕರ ಮೂಲ ಕರ್ತವ್ಯ. ಮಕ್ಕಳಿಗೆ ಮನೆಯೇ ಮೊದಲ ಪಾಠಶಾಲೆಯಾಗಿದ್ದು, ತಾಯಿಯೇ ಮೊದಲ ಗುರು. ಮಗುವಿಗೆ ಅಕ್ಷರಾಭ್ಯಾಸ ಎನ್ನುವುದು ಜ್ಞಾನ ದೇಗುಲದ ಪ್ರಮುಖ ಘಟ್ಟ, ಅಕ್ಷರಾಭ್ಯಾಸದಲ್ಲಿ ಹೆಚ್ಚು ಮಕ್ಕಳು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಕರೆ ನೀಡಿದರು.

ಅಕ್ಷರಾಭ್ಯಾಸವನ್ನು ಮಾಡಲಿಚ್ಛಿಸುವ ಮಕ್ಕಳ ಪೋಷಕರು ದೂರವಾಣಿ 9880752727/7829067769 ಮೂಲಕ ನೋಂದಾಯಿಸಿಕೊಳ್ಳಬಹುದು. ಅಕ್ಷರಾಭ್ಯಾಸ ಮಾಡಿಸುವವರಿಗೆ ಪ್ಲೇಟ್ – ಬಳಪ ಟ್ರಸ್ಟ್ ವತಿಯಿಂದ ಉಚಿತವಾಗಿ ಪ್ರಸಾದ ರೂಪದಲ್ಲಿ ನೀಡಲಾಗುವುದು. ಫೆ.13ರಂದು ನೋಂದಣಿಗೆ ಕಡೆಯ ದಿನವಾಗಿದೆ. ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ಮಹರ್ಷಿ ಪಬ್ಲಿಕ್ ಶಾಲೆಯ ಸಿಇಓ ತೇಜಸ್ ಶಂಕರ್, ಬಿಜೆಪಿ ಮುಖಂಡ ಆರ್.ಪರಮೇಶ್ ಗೌಡ ಇನ್ನಿತರರು ಈ ಸಂದರ್ಭದಲ್ಲಿ ಹಾಜರಿದ್ದರು.

ವಿಶ್ವ ಕ್ಯಾನ್ಸರ್ ದಿನದ ಪ್ರಯುಕ್ತ ವಾಕಥಾನ್



ವಿಶ್ವ ಕ್ಯಾನ್ಸರ್ ದಿನದ ಪ್ರಯುಕ್ತ ಮೈಸೂರಿನ ಕ್ಲಿಯರ್‌ಮೆಡಿ ರೇಡಿಯೆಂಟ್ ಆಸ್ಪತ್ರೆಯು ವಾಕಥಾನ್ ಏರ್ಪಡಿಸಿತ್ತು. ವಾಕಥಾನ್‌ನಲ್ಲಿ ವೈದ್ಯಕೀಯ ನಿರ್ದೇಶಕ ಡಾ.ಸಂಜಯ್ ಧವಲ್, ಡಾ.ಅವಿನಾಶ್, ಡಾ.ಚೈತ್ರ, ಡಾ.ಎಸ್.ನವೀನ್, ಡಾ.ರಾಕೇಶ್ ಮತ್ತಿತರರಿದ್ದರು.

ಹಿಂದೂ ಸಂಪ್ರದಾಯಗಳನ್ನು ಉಲ್ಲಂಘಿಸಿದ 18 ನೌಕರರ ವಿರುದ್ಧ ಟಿಟಿಡಿ ಕ್ರಮ

ತಿರುಪತಿ, ಫೆ.5–ತಿರುಮಲ ತಿರುಪತಿ ದೇವಸ್ಥಾನಂ(ಟಿಟಿಡಿ) ಹಿಂದೂ ಸಂಪ್ರದಾಯಗಳನ್ನು ಉಲ್ಲಂಘಿಸಿದ್ದಕ್ಕಾಗಿ 18 ನೌಕರರ ವಿರುದ್ಧ ಕ್ರಮ ಕೈಗೊಂಡಿದೆ.

ಟಿಟಿಡಿ ಅಧ್ಯಕ್ಷ ಬಿ.ಆರ್.ನಾಯ್ಡು ಅವರ ನಿರ್ದೇಶನಗಳನ್ನು ಅನುಸರಿಸಿ, ಟಿಟಿಡಿ ಉತ್ಸವಗಳು ಮತ್ತು ಆಚರಣೆಗಳಲ್ಲಿ ಭಾಗವಹಿಸುವುದರೊಂದಿಗೆ ಹಿಂದೂಯೇತರ ಧಾರ್ಮಿಕ ಚಟುವಟಿಕೆಗಳನ್ನು ಆಚರಿಸುತ್ತಿರುವ ನೌಕರರ ವಿರುದ್ಧ ಆದೇಶ ಹೊರಡಿಸಲಾಗಿದೆ. ಈ ನಿರ್ಧಾರವು ತನ್ನ ದೇವಾಲಯದ ಆಧ್ಯಾತ್ಮಿಕ ಪಾವಿತ್ರ್ಯವನ್ನು ಕಾಪಾಡುವ ಟಿಟಿಡಿಯ ಬದ್ಧತೆಗೆ ಅನುಗುಣವಾಗಿದೆ ಎಂದು ಮೂಲಗಳು ತಿಳಿಸಿವೆ.



ಟಿಟಿಡಿ ಅಧಿಕಾರಿಗಳ ಪ್ರಕಾರ ಈ ನೌಕರರು ನೇಮಕಗೊಳ್ಳುವ ಮೊದಲು ದತ್ತಿ ಕಾಯ್ದೆ 1060, 1989ರ ಪ್ರಕಾರ ಹಿಂದೂ ಧಾರ್ಮಿಕ ಆಚರಣೆಗಳನ್ನು ಅನುಸರಿಸುವುದಾಗಿ ಪ್ರಮಾಣವಚನ ಸ್ವೀಕರಿಸಿದ್ದರು. ಆದಾಗ್ಯೂ, ಅವರು ಹಿಂದೂಯೇತರ ಆಚರಣೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ ಎಂಬುದು ಬೆಳಕಿಗೆ ಬಂದಿದೆ. ಇದು ದೇವಾಲಯದ ಪಾವಿತ್ರ್ಯ ಮತ್ತು ಭಕ್ತರ ಭಾವನೆಗಳ ಮೇಲೆ ಪರಿಣಾಮ ಬೀರುತ್ತದೆ. 18 ನೌಕರರು ಟಿಟಿಡಿ ಆಯೋಜಿಸುವ ಧಾರ್ಮಿಕ ಉತ್ಸವಗಳು ಮತ್ತು ಮೆರವಣಿಗೆಗಳು ಸೇರಿದಂತೆ ಹಿಂದೂ ಮತ್ತು ಹಿಂದೂಯೇತರ ಚಟುವಟಿಕೆಗಳಲ್ಲಿ ಏಕಕಾಲದಲ್ಲಿ ಭಾಗವಹಿಸುತ್ತಿರುವುದು ಕಂಡುಬಂದಿದೆ. ಹೀಗಾಗಿ ಟಿಟಿಡಿ ಕಾರ್ಯನಿರ್ವಾಹಕ ಅಧಿಕಾರಿ ಜೆ. ಶ್ಯಾಮಲಾ ರಾವ್ ಅವರು, ಹಿಂದೂಯೇತರ ನೌಕರರ ವಿರುದ್ಧ ಕ್ರಮ ಕೈಗೊಳ್ಳಲು ಮೆಮೊ ಹೊರಡಿಸಿದ್ದಾರೆ. ಟಿಟಿಡಿ ಮಂಡಳಿಯ ನಿರ್ಣಯದ ಪ್ರಕಾರ ಈ ನೌಕರರನ್ನು ಟಿಟಿಡಿ ದೇವಾಲಯಗಳು ಮತ್ತು ಅಂಗಸಂಸ್ಥೆಯ ಇಲಾಖೆಗಳಲ್ಲಿನ ಅವರ ಪ್ರಸ್ತುತ ಕರ್ತವ್ಯಗಳಿಂದ ತೆಗೆದುಹಾಕಲಾಗುತ್ತದೆ ಮತ್ತು ಅವರು ಯಾವುದೇ ಹಿಂದೂ ಧಾರ್ಮಿಕ ಕಾರ್ಯಕ್ರಮಗಳು ಅಥವಾ ಕರ್ತವ್ಯಗಳಲ್ಲಿ ಭಾಗವಹಿಸುವುದನ್ನು ನಿಷೇಧಿಸಲಾಗಿದೆ. ಟಿಟಿಡಿ ಈ ನೌಕರರಿಗೆ ಇನ್ನು ಮುಂದೆ ಟಿಟಿಡಿ ದೇವಾಲಯಗಳೊಳಗಿನ ಹಿಂದೂ ಆಚರಣೆಗಳು, ಹಬ್ಬಗಳು ಅಥವಾ ಮೆರವಣಿಗೆಗಳಿಗೆ ಸಂಬಂಧಿಸಿದ ಕರ್ತವ್ಯಗಳನ್ನು ನಿಯೋಜಿಸಲಾಗುವುದಿಲ್ಲ ಎಂದು ಟಿಟಿಡಿ ಘೋಷಿಸಿದೆ.

ಜೆಎಸ್‌ಎಸ್ ಆಸ್ಪತ್ರೆಯಲ್ಲಿ ನವೀಕೃತ ಸಂಧಿವಾತಶಾಸ್ತ್ರ ಚಿಕಿತ್ಸಾ ಕೊಠಡಿ ಉದ್ಘಾಟನೆ



ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ನವೀಕೃತ ಸಂಧಿವಾತಶಾಸ್ತ್ರ ಚಿಕಿತ್ಸಾ ಕೊಠಡಿಯನ್ನು ಜೆಎಸ್‌ಎಸ್ ಆಸ್ಪತ್ರೆ ಆಡಳಿತ ಮಂಡಳಿ ಸದಸ್ಯ ಡಾ.ವಿವೇಕ್ ಜವಳಿ ಉದ್ಘಾಟಿಸಿದರು.

ಮೈಸೂರು,ಫೆ5–ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ನವೀಕೃತ ಸಂಧಿವಾತಶಾಸ್ತ್ರ ಚಿಕಿತ್ಸಾ ಕೊಠಡಿಯನ್ನು ಬೆಂಗಳೂರಿನ ಫೋರ್ಟಿಸ್ ಆಸ್ಪತ್ರೆಗಳ ಕಾರ್ಯನಿರ್ವಾಹಕ ಮಂಡಳಿ ಅಧ್ಯಕ್ಷ, ಜೆಎಸ್‌ಎಸ್ ಆಸ್ಪತ್ರೆ ಆಡಳಿತ ಮಂಡಳಿ ಸದಸ್ಯರಾದ ಡಾ.ವಿವೇಕ್ ಜವಳಿ ಉದ್ಘಾಟಿಸಿದರು.

ಈ ವೇಳೆ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ ಮಠ, ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಸಮಕುಲಾಧಿಪತಿ ಡಾ.ಬಿ.ಸುರೇಶ್, ವೈದ್ಯಕೀಯ ವಿಭಾಗದ ನಿರ್ದೇಶಕ ಆರ್.ಮಹೇಶ್, ವೈದ್ಯಕೀಯ ಅಧೀಕ್ಷಕ ಡಾ.ಸಿ.ಪಿ.ಮಧು, ವಿಭಾಗದ ಮುಖ್ಯಸ್ಥ ಡಾ.ಸುಬ್ರಮಣಿಯನ್, ಪ್ರಾಧ್ಯಾಪಕರಾದ ಡಾ.ಶಿವಪ್ರಸಾದ್, ಡಾ.ಮಹಾಬಲೇಶ್ ಉಪಸ್ಥಿತರಿದ್ದರು.

ರಥಸಪ್ತಮಿ ಅಂಗವಾಗಿ ಅರಮನೆ ಆವರಣದಲ್ಲಿ ವಿವಿಧ ದೇವಾಲಯಗಳ ಉತ್ಸವ ಮೂರ್ತಿಗಳ ಮೆರವಣಿಗೆ

- ನೂರಾರು ಭಕ್ತರಿಂದ ವಿಶೇಷ ಪೂಜೆ
- ಅರಮನೆ ಆವರಣದಲ್ಲಿರುವ ಎಲ್ಲಾ ದೇವಾಲಯಗಳ ಉತ್ಸವ ಮೂರ್ತಿಗಳ ದರ್ಶನ

ಮೈಸೂರು,ಫೆ5(ಎಂಟಿವೈ)–ರಥಸಪ್ತಮಿ ಅಂಗವಾಗಿ ಬುಧವಾರ ಮೈಸೂರು ಅರಮನೆ ಆವರಣದ ದೇವಾಲಯಗಳ ಉತ್ಸವ ಮೂರ್ತಿ ಮೆರವಣಿಗೆ ವಿಜೃಂಭಣೆಯಿಂದ ನೆರವೇರಿತು.

ರಥಸಪ್ತಮಿ ದಿನದಂದು ಅರಮನೆ ಆವರಣದ ಎಲ್ಲಾ ದೇವಾಲಯಗಳ ಉತ್ಸವ ಮೂರ್ತಿಗಳ ಅಲಂಕರಿಸಿ, ಮೆರವಣಿಗೆ ಮಾಡುವ ಸಂಪ್ರದಾಯವಿದ್ದು, ಇಂದು ಬೆಳಗ್ಗೆ ವಿಶೇಷ ಪೂಜಾ ಕೈಂಕರ್ಯದ ಬಳಿಕ ಉತ್ಸವಮೂರ್ತಿಯನ್ನು ಅಲಂಕರಿಸಿ ಚಿಕ್ಕ ರಥಗಳಲ್ಲಿರಿಸಿ ಮೆರವಣಿಗೆ ನಡೆಸಲಾಯಿತು. ಬಳಿಕ ಅರಮನೆ ಪ್ರಾಂಗಣದಲ್ಲಿ ಉತ್ತರ ಮುಖವಾಗಿ ಸಾಲಾಗಿ ನಿಲ್ಲಿಸಿ ಸಾರ್ವಜನಿಕರ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು.

ಈ ವರ್ಷ ರಥಸಪ್ತಮಿ ಎರಡು ದಿನ ಬಂದಿರುವುದರಿಂದ ಮಂಗಳವಾರ ಯೋಗಪಟುಗಳು ಸಾಮೂಹಿಕ 108 ನಮಸ್ಕಾರ, ಮಂತ್ರ ಪಠಣ ಮಾಡಿದ್ದರು. ನಕ್ಷತ್ರಕ್ಕೆ ಅನುಗುಣವಾಗಿ ಇಂದು ದೇವಾಲಯಗಳಲ್ಲಿ ಸಾಂಪ್ರದಾಯಿಕವಾಗಿ ರಥೋತ್ಸವ ನಡೆಸಲಾಯಿತು.



ಮೈಸೂರು ಅರಮನೆ ಆವರಣದಲ್ಲಿ ಬುಧವಾರ ರಥಸಪ್ತಮಿ ಅಂಗವಾಗಿ ವಿವಿಧ ದೇವಾಲಯಗಳ ಉತ್ಸವ ಮೂರ್ತಿಯ ಮೆರವಣಿಗೆ ನಡೆಸಿ, ಭಕ್ತರ ದರ್ಶನಕ್ಕೆ ಅವಕಾಶ ಮಾಡಿಕೊಡಲಾಗಿತ್ತು.

ಎಂಟು ಉತ್ಸವ ಮೂರ್ತಿಗಳ ಮೆರವಣಿಗೆ: ಅರಮನೆ ಆವರಣದಲ್ಲಿರುವ ಖಿಲ್ಲೆ ವೆಂಕಟರಮಣ, ವರಹಾಸ್ವಾಮಿ, ಲಕ್ಷ್ಮೀರಮಣ, ತ್ರೀನೇಶ್ವರ, ಗಾಯತ್ರಿ ದೇವಿ, ಭುವನೇಶ್ವರಿ, ಪ್ರಸನ್ನ ಕೃಷ್ಣಸ್ವಾಮಿ ಸೇರಿದಂತೆ ಎಂಟು ದೇವಾಲಯಗಳ ಉತ್ಸವಮೂರ್ತಿಯನ್ನು ಒಂದೇ ಸಮಯದಲ್ಲಿ ದೇವಾಲಯದಿಂದ ಹೊರಗೆ ತಂದು ಸಾಲಾಗಿ ಮೆರವಣಿಗೆ ನಡೆಸಿ ಅರಮನೆ ಪ್ರಾಂಗಣದ ಮುಂದೆ ನಿಲ್ಲಿಸಲಾಯಿತು.

ಭಕ್ತರಿಂದ ದರ್ಶನ, ಪ್ರಸಾದ ವಿನಿಯೋಗ: ಅರಮನೆ ಆವರಣದಲ್ಲಿ ರಥಸಪ್ತಮಿ ಹಿನ್ನೆಲೆಯಲ್ಲಿ ವಿವಿಧ ದೇವಾಲಯಗಳ ಉತ್ಸವ ಮೂರ್ತಿಗಳ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಲು ವಿವಿಧ ಬಡಾವಣೆಗಳಿಂದ ನೂರಾರು ಮಂದಿ ಆಗಮಿಸಿದ್ದರು. ಬೆಳಗ್ಗೆ 7.30ರಿಂದ ಮಧ್ಯಾಹ್ನ 12 ಗಂಟೆವರೆಗೆ ಅಪಾರ ಸಂಖ್ಯೆಯ ಭಕ್ತರು ಅರಮನೆ ಆವರಣಕ್ಕೆ ಬಂದು ದರ್ಶನ ಪಡೆದರು.

ಇದೇ ವೇಳೆ ಕೆಲವರು ಸಿಹಿ ತಂದು ಹಂಚಿದರೆ, ದೇವಾಲಯಗಳ ಪುರೋಹಿತರು ಪ್ರಸಾದ ವಿನಿಯೋಗಿಸಿದರು.

ಕರ್ನಾಟಕ ರಾಜ್ಯ ಮುಕ್ತ ವಿವಿಯಲ್ಲಿ ಅನಗತ್ಯ ದುಂದುವೆಚ್ಚ ಆರೋಪ

ಮೈಸೂರು, ಫೆ.5(ಜಿಎ)–ಕರ್ನಾಟಕ ರಾಜ್ಯ ಮುಕ್ತ ವಿವಿಯಲ್ಲಿ ಡ್ರೋನ್ ಬಳಸಿ ಕಟ್ಟಡಗಳ ವರ್ಚ್ಯುಯಲ್ ಟೂರ್, ಕಟ್ಟಡ ನವೀಕರಣ ಮೊದಲಾದವುಗಳಿಗೆ ಟೆಂಡರ್ ನೀಡುವ ಸಂದರ್ಭದಲ್ಲಿ ಭಾರಿ ಅವ್ಯವಹಾರ ನಡೆದಿದೆ. ಈ ನೆಪದಲ್ಲಿ ವಿವಿಯ ಹಣವನ್ನು ಹಲವರು ಲೂಟಿ ಮಾಡಿದ್ದಾರೆ. ಈ ಕುರಿತು ಲೋಕಾಯುಕ್ತರಿಂದ ಸಮಗ್ರ ತನಿಖೆಗೆ ಸರ್ಕಾರ ಆದೇಶಿಸಬೇಕೆಂದು ವಕೀಲ ಪುಟ್ಟಸ್ವಾಮಿಗೌಡ ಆಗ್ರಹಪಡಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕ ಮುಕ್ತ ವಿವಿ ಆವರಣದಲ್ಲಿರುವ ಕಟ್ಟಡಗಳ ಕೆಲ ನಿಮಿಷಗಳ ವರ್ಚ್ಯುಯಲ್ ಟೂರ್ ನ್ಯಾಕ್‌ಗೆ ಅಗತ್ಯವಾಗಿದೆ ಎಂದು ಖಾಸಗಿ ಕಂಪನಿಯೊಂದರಿಂದ ಡ್ರೋನ್ ಬಳಸಿ ದೃಶ್ಯೀಕರಿಸಿದ್ದಾರೆ. ಆದರೆ ಇದಕ್ಕೆ 26 ಲಕ್ಷ ಬಿಲ್ ಮಾಡಿಸಿದ್ದಾರೆ. ತಾವು ವಿಚಾರಿಸಿದಾಗ ಕೇವಲ 30ರಿಂದ 35 ಸಾವಿರದಲ್ಲಿ ಮಾಡಿಸಬಹುದಿತ್ತು ಎಂಬ ಮಾಹಿತಿ ಸಿಕ್ಕಿದೆ ಎಂದರು.

> ಕರ್ನಾಟಕ ರಾಜ್ಯ ಮುಕ್ತ ವಿವಿಯಲ್ಲಿ ಎಲ್ಲವೂ ಕ್ರಮಬದ್ಧವಾಗಿ, ಕಾನೂನಿನ ಅನುಸಾರವಾಗಿಯೇ ನಡೆಯುತ್ತಿದೆ. ನಿಯಮಾವಳಿಯಂತೆಯೇ ಟೆಂಡರ್ ನೀಡಲಾಗಿದೆ. ಸದ್ಯಕ್ಕೆ ವಿವಿ ಆವರಣದಲ್ಲಿ ಯಾವುದೇ ಕಟ್ಟಡಗಳ ನವೀಕರಣವಾಗುತ್ತಿಲ್ಲ. ವಿವಿ ಮೇಲೆ ಮಾಡಿರುವ ಎಲ್ಲಾ ಆರೋಪಗಳು ಸತ್ಯಕ್ಕೆ ದೂರವಾದದು.
>
> **–ಶರಣಪ್ಪ ವಿ.ಹಲಸೆ, ಕುಲಪತಿ, ಕರ್ನಾಟಕ ರಾಜ್ಯ ಮುಕ್ತ ವಿವಿ**

ಮತ್ತೊಂದೆಡೆ ಚಾಮರಾಜನಗರ ಹಾಗೂ ಮಂಡ್ಯದ ಕಟ್ಟಡಗಳ ಡ್ರೋನ್ ವರ್ಚ್ಯುಯಲ್ ಟೂರ್ ಚಿತ್ರೀಕರಣಕ್ಕೆ ತಲಾ ಐದು ಲಕ್ಷ ಬಿಲ್ ಮಾಡಲಾಗಿದೆ. ಈ ನಡುವೆ, ವಿದ್ಯಾರ್ಥಿಗಳು ಮುಗಿಸಿದ ಅಸೈನ್ಮೆಂಟ್ ಪ್ರತಿಗಳನ್ನು ಡಿಜಿಟಲೀಕರಣ ಮಾಡಲು ತಲಾ 250 ರೂ. ನೀಡಿರುವುದಾಗಿ ತಿಳಿಸಲಾಗಿದೆ. ಆದರೆ ನಗರದ ಎಂಜಿನಿಯರಿಂಗ್ ಹಾಗೂ ಇನ್ನಿತರ ಕಾಲೇಜು ವಿದ್ಯಾರ್ಥಿಗಳು ಇದನ್ನು ಸುಲಭವಾಗಿ ಮಾಡಿಕೊಳ್ಳುತ್ತಾರೆ ಎಂದು ಹೇಳಿದರು.

ವಿದ್ಯಾರ್ಥಿಗಳಿಗೆ ಸ್ಟಡಿ ಮೆಟಿರಿಯಲ್ ನೀಡಲು ಬಳಸುವ ಬ್ಯಾಗ್‌ಗೆ 120 ರೂ. ಬಿಲ್ ಮಾಡಲಾಗಿದೆ. ನಗರದ ಶಿವರಾಂಪೇಟೆಗೆ ಹೋಗಿ ಯಾವುದೇ ಅಂಗಡಿಯಲ್ಲಿ ವಿಚಾರಿಸಿದರೂ ಇದು ಕೇವಲ 30 ರೂ.ಗೆ ಸಿಗುತ್ತದೆ. ಈ ರೀತಿ ಒಟ್ಟು 50 ಸಾವಿರ ಬ್ಯಾಗ್ ಖರೀದಿಸಿರುವುದಾಗಿ ಆರೋಪಿಸಿದರು.

ವಿವಿ ಆವರಣದಲ್ಲಿನ ಒಂದು ಕಟ್ಟಡದ ಕಿಟಕಿ, ಬಾಗಿಲು ಬದಲಿಸಲು ಒಟ್ಟಾರೆ ಏಳು ಕೋಟಿ ನೀಡಲಾಗಿದೆ. ಇಷ್ಟೇ ಹಣದಲ್ಲಿ ಒಂದು ಹೊಸ ಕಟ್ಟಡವನ್ನೇ ನಿರ್ಮಿಸಬಹುದಾಗಿತ್ತು. ಜೊತೆಗೆ, ವಿವಿ ಅತಿಥಿ ಗೃಹದಲ್ಲಿನ ಕಟ್ಟಡದ 20 ಕೊಠಡಿಗಳ ಬೆಡ್ ಹಾಗೂ ದಿಂಬುಗಳಿಗಾಗಿ 50 ಲಕ್ಷ ನೀಡಲಾಗಿದೆ. ಈ ರೀತಿ ನೂರಾರು ಕೋಟಿ ರೂ.ಗಳನ್ನು ಲೂಟಿ ಮಾಡಲಾಗಿದ್ದು, ಕೇವಲ ಲೋಕಾಯುಕ್ತರ ಸಮಗ್ರ ತನಿಖೆಯಿಂದಷ್ಟೇ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲು ಸಾಧ್ಯ. ಹೀಗಾಗಿ ಸರ್ಕಾರ ಇತ್ತ ಗಮನಹರಿಸಬೇಕೆಂದು ಕೋರಿದರು. ಗೋಷ್ಠಿಯಲ್ಲಿ ತರಬೇತಿ ವಕೀಲ ಸಂತೋಷ್ ಉಪಸ್ಥಿತರಿದ್ದರು.

ವಿಪ್ರ ಮುಖಂಡ ಪ್ರಶಾಂತ್ ತಾತಾಚಾರ್‌ಗೆ ಗೌರವ ಸಮರ್ಪಣೆ



ಮೈಸೂರಿನ ವಿಪ್ರ ಮುಖಂಡ ಪ್ರಶಾಂತ್ ತಾತಾಚಾರ್ (ಕಣ್ಣನ್) ಅವರು ಇತ್ತೀಚಿಗೆ ಕಾಳಿದಾಸ ರಸ್ತೆಯಲ್ಲಿರುವ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನದಲ್ಲಿ ನೂತನವಾಗಿ ನಿರ್ಮಿಸಿರುವ ಕಾರ್ಯಭವನಕ್ಕೆ ಭೇಟಿ ನೀಡಿ, ಗೌರವ ವಂದನೆ ಸ್ವೀಕರಿಸಿದರು. ಈ ವೇಳೆ ದೇವಸ್ಥಾನದ ಮುಖ್ಯಸ್ಥ ಕೆ.ಆರ್.ಯೋಗಾನರಸಿಂಹನ್ (ಮುರುಳಿ ಅಯ್ಯಂಗಾರ್), ಪುರೋಹಿತ ವೀರರಾಘವಾಚಾರ್, ಸಿಂಹನ್ ವಾದ್ಯಾರ್, ಅಗಸ್ತ್ಯ ಕೋ–ಆಪರೇಟಿವ್ ಸೊಸೈಟಿ ಅಧ್ಯಕ್ಷ ಪಾರ್ಥಸಾರಥಿ, ಟಿ.ಎಸ್.ಅರುಣ್ ಇತರರು ಉಪಸ್ಥಿತರಿದ್ದರು.

ಒಂದು ದಿನ ಪೊಲೀಸ್; ಕ್ಯಾನ್ಸರ್‌ಪೀಡಿತ 4 ಮಕ್ಕಳ ಆಸೆ ಈಡೇರಿಸಿದ ಅಧಿಕಾರಿಗಳು



ದಿನದ ಮಟ್ಟಿಗೆ ಪೊಲೀಸ್ ಅಧಿಕಾರಿಗಳಾದ ಕ್ಯಾನ್ಸರ್‌ಪೀಡಿತ ನಾಲ್ವರು ಮಕ್ಕಳು.

ಬೆಂಗಳೂರು, ಫೆ.5–ವಿಶ್ವ ಕ್ಯಾನ್ಸರ್ ದಿನಾಚರಣೆಯಾದ ಮಂಗಳವಾರ ಬೆಂಗಳೂರು ಸಂಚಾರ ನಿರ್ವಹಣಾ ಕೇಂದ್ರದಲ್ಲಿ ಕ್ಯಾನ್ಸರ್ ವಿರುದ್ಧ ಹೋರಾಡುತ್ತಿರುವ ನಾಲ್ಕು ಮಕ್ಕಳಿಗೆ ಒಂದು ದಿನದ ಮಟ್ಟಿಗೆ ಪೊಲೀಸ್ ಅಧಿಕಾರಿಗಳಾಗಿ ಸೇವೆ ಸಲ್ಲಿಸುವ ಅವಕಾಶ ನೀಡಲಾಯಿತು.

ನಗರ ಪೊಲೀಸರು, ಪರಿಹಾರ ಸಂಸ್ಥೆ ಮತ್ತು ಕಿದ್ವಾಯಿ ಮೆಮೋರಿಯಲ್ ಇನ್‌ಸ್ಟಿಟ್ಯೂಟ್ ಆಫ್ ಆಂಕೋಲಾಜಿ ಸಹಯೋಗದಲ್ಲಿ ಕ್ಯಾನ್ಸರ್ ದಿನವನ್ನು ನಗರ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ವಿಶೇಷವಾಗಿ ಆಚರಿಸಲಾಯಿತು. ಕ್ಯಾನ್ಸರ್‌ನಿಂದ ಬಳಲುತ್ತಿರುವ 12ರಿಂದ 14 ವರ್ಷದೊಳಗಿನ ವಿಶ್ವಾಸ್, ಜೀವನ್ ಕುಮಾರ್, ದಾನಮ್ಮ ಮತ್ತು ದಿವ್ಯಶ್ರೀ ಪೊಲೀಸ್ ಸಮವಸ್ತ್ರ ಧರಿಸಿ ನಗರ ಪೊಲೀಸ್ ಆಯುಕ್ತರ ಕಚೇರಿಗೆ ಆಗಮಿಸಿ ಒಂದು ದಿನದ ಮಟ್ಟಿಗೆ ಪೊಲೀಸ್ ಅಧಿಕಾರಿಗಳಾಗಿ ಕಾರ್ಯ ನಿರ್ವಹಿಸಿದರು.

ನಗರ ಪೊಲೀಸ್ ಆಯುಕ್ತ ಬಿ.ದಯಾನಂದ ಅವರು, ಖುದ್ದು ಈ ನಾಲ್ವರು ಮಕ್ಕಳಿಗೆ ಹೂಗುಚ್ಛ ನೀಡಿ ತಮ್ಮ ಕಚೇರಿಗೆ ಸ್ವಾಗತಿಸಿದರು. ಮಾಧ್ಯಮಗಳೊಂದಿಗೆ ಮಾತನಾಡಿದ ದಯಾನಂದ ಅವರು, ಕ್ಯಾನ್ಸರ್ ದೇಹದ ಕಾಯಿಲೆ ಮತ್ತು ಅಪರಾಧವು ಸಮಾಜದ ಕಾಯಿಲೆ. ಪೊಲೀಸ್ ಸಿಬ್ಬಂದಿ ಅಪರಾಧವನ್ನು ಸಮಾಜದಿಂದ ತೆಗೆದುಹಾಕಲು ಹೋರಾಡುತ್ತಾರೆಂದು ಹೇಳಿದರು.

ಭೂಮಿಗಿರಿ ಪ್ರಕಾಶನ ವತಿಯಿಂದ ನಿತ್ಯೋತ್ಸವ ಕವಿ ಸ್ಮರಣೆ



ಕನ್ನಡದ ಖ್ಯಾತ ನಿತ್ಯೋತ್ಸವ ಕವಿಯೆಂದೇ ಪ್ರಸಿದ್ಧರಾದ ನಾಡೋಜ ಡಾ.ಕೆ.ಎಸ್.ನಿಸಾರ್ ಅಹಮದ್ ಅವರ ಜನ್ಮದಿನಾಚರಣೆ ಅಂಗವಾಗಿ ಭೂಮಿಗಿರಿ ಪ್ರಕಾಶನದ ವತಿಯಿಂದ ಪುಷ್ಪ ನಮನ ಸಲ್ಲಿಸುವ ಮೂಲಕ ಅವರ ಸಾಹಿತ್ಯವನ್ನು ಸ್ಮರಿಸಲಾಯಿತು. ಈ ವೇಳೆ ಭೂಮಿಗಿರಿ ಪ್ರಕಾಶನದ ಎನ್.ಬೆಟ್ಟೆಗೌಡ, ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಎಂ.ಚಂದ್ರಶೇಖರ್, ಜಿಲ್ಲಾ ಜನತಾದಳ (ಜಾ)ದ ಅಧ್ಯಕ್ಷ ಎನ್.ನರಸಿಂಹಸ್ವಾಮಿ, ಪಡುವಾರಹಳ್ಳಿ ಎಂ.ರಾಮಕೃಷ್ಣ, ರಾಜೇಂದ್ರಕುಮಾರ್ ಮತ್ತಿತರರಿದ್ದರು.

ಮಹಿಳಾ ಸ್ವ–ಸಹಾಯ ಸಂಘಗಳಿಂದ ಪ್ರೋತ್ಸಾಹಧನಕ್ಕೆ ಅರ್ಜಿ ಆಹ್ವಾನ

ಮೈಸೂರು,ಫೆ.5– ಕೃಷ್ಣರಾಜನಗರ ಪುರಸಭಾ ವ್ಯಾಪ್ತಿ ಡೇ–ನಲ್ಮ್ ಯೋಜನೆಯಡಿ ರಚಿಸಲಾದ ಮಹಿಳಾ ಸ್ವ–ಸಹಾಯ ಸಂಘಗಳಿಗೆ ಆಸ್ತಿ ತೆರಿಗೆ, ನೀರಿನ ತೆರಿಗೆ ಮತ್ತು ಬಡ್ಡಿ ಸಹಿತವಾಗಿ ವಸೂಲಿ ಮಾಡಲು ಪುರಸಭೆ ವ್ಯಾಪ್ತಿಯಲ್ಲಿ ಡೇ–ನಲ್ಮ್ ಯೋಜನೆಯಡಿ ನೋಂದಣಿಯಾದ ಸ್ಥಳೀಯ ಮಹಿಳಾ ಸ್ವ ಸಹಾಯ ಗುಂಪುಗಳ ಸೇವೆಯನ್ನು ಪಡೆದು ಸದರಿ ಸ್ವ ಸಹಾಯ ಗುಂಪುಗಳಿಗೆ ವಸೂಲಿಯಾದ ಮೊತ್ತದಲ್ಲಿ ಶೇ.5ರಷ್ಟು ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ಆಸಕ್ತ ಮಹಿಳಾ ಸ್ವ–ಸಹಾಯ ಗುಂಪುಗಳು ಫೆ.12ರಂದು ಸಂಜೆ 4 ಗಂಟೆಯೊಳಗೆ ಕಚೇರಿಗೆ ಅರ್ಜಿ ಸಲ್ಲಿಸಬಹುದಾಗಿದೆ. ಮಾಹಿತಿಗೆ ಪುರಸಭೆ ಕಾರ್ಯಾಲಯದ ಡೇ–ನಲ್ಮ್ ಶಾಖೆಗೆ ಕಚೇರಿಯ ವೇಳೆಯಲ್ಲಿ ಮಾಹಿತಿಯನ್ನು ಪಡೆಯಬಹುದು.

ರಘುವೀರ್‌ಗೆ ಪಿಹೆಚ್.ಡಿ ಪದವಿ



ಮೈಸೂರು, ಫೆ.5–ಡಾ.ಡಿ.ಆನಂದ್ ಅವರ ಮಾರ್ಗದರ್ಶನದಲ್ಲಿ ಆರ್.ರಘುವೀರ್ ಅವರು ನಿರ್ವಹಣೆ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಆರಂಭಿಕ ಹಂತದಲ್ಲೇ ಚಿಕಿತ್ಸೆ ಪಡೆದರೆ ಕ್ಯಾನ್ಸರ್ ಗುಣಪಡಿಸಬಹುದು

ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಉಪಕುಲಪತಿ ಡಾ.ಹೆಚ್.ಬಸವನಗೌಡಪ್ಪ ಸಲಹೆ

ಮೈಸೂರು,ಫೆ.5–ಕ್ಯಾನ್ಸರ್‌ಗೆ ಆರಂಭಿಕ ಹಂತದಲ್ಲೇ ಚಿಕಿತ್ಸೆ ಪಡೆದರೆ ಅದನ್ನು ಗುಣಪಡಿಸಬಹುದು ಎಂದು ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಉಪಕುಲಪತಿ ಡಾ.ಹೆಚ್.ಬಸವನಗೌಡಪ್ಪ ತಿಳಿಸಿದರು.

ಮೈಸೂರು ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಆಯೋಜಿಸಿದ್ದ ವಿಶ್ವ ಕ್ಯಾನ್ಸರ್ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಕ್ಯಾನ್ಸರ್ ರೋಗಕ್ಕೆ ಚಿಕಿತ್ಸೆ ಇಲ್ಲವೆಂದು ಮತ್ತು ಈ ರೋಗ ಬಂದರೆ ನಮ್ಮ ಜೀವ ಹಾಗೂ ಜೀವನ ಇಲ್ಲಿಗೆ ಮುಗಿಯಿತು ಎಂಬ ತಪ್ಪು ತಿಳುವಳಿಕೆ, ಭಯ ಜನರಲ್ಲಿ ಇತ್ತು. ಆದರೆ ಆಧುನಿಕ ವೈಜ್ಞಾನಿಕ ಆವಿಷ್ಕಾರಗಳೊಂದಿಗೆ ಕ್ಯಾನ್ಸರ್ ರೋಗವನ್ನು ಪ್ರಾರಂಭದಲ್ಲಿ ಪತ್ತೆ ಹಚ್ಚಿ ಶಸ್ತ್ರಚಿಕಿತ್ಸೆ, ವಿಕಿರಣ ಚಿಕಿತ್ಸೆ ಮತ್ತು ಔಷಧೀಯ ಚಿಕಿತ್ಸೆಯಲ್ಲಿ ಕಿಮೋಥೆರಪಿ, ಹಾರ್ಮೋನ್ ಥೆರಪಿ, ಟಾರ್ಗೆಟೆಡ್ ಥೆರಪಿ ಮತ್ತು ಇಮ್ಯಾನೋಥೆರಪಿ ಇತರೆ ವಿವಿಧ ಚಿಕಿತ್ಸೆಗಳ ಮೂಲಕ ಗುಣಪಡಿಸಬಹುದು ಎಂದು ಹೇಳಿದರು.



ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಆಯೋಜಿಸಿದ್ದ ವಿಶ್ವ ಕ್ಯಾನ್ಸರ್ ದಿನಾಚರಣೆ ಕಾರ್ಯಕ್ರಮವನ್ನು ಡಾ.ಹೆಚ್.ಬಸವನಗೌಡಪ್ಪ ಬುಧವಾರ ಉದ್ಘಾಟಿಸಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್.ಮಹೇಶ್ ಮಾತನಾಡಿ, ವಿಶ್ವ ಕ್ಯಾನ್ಸರ್ ದಿನಾಚರಣೆ ಉದ್ದೇಶ ಸಾರ್ವಜನಿಕರಲ್ಲಿ ಮತ್ತು ಕ್ಯಾನ್ಸರ್ ರೋಗಿಗಳಿಗೆ ಮಾಹಿತಿ ಮತ್ತು ಆತ್ಮಸ್ಥೈರ್ಯವನ್ನು ತುಂಬುವುದು. ಇತ್ತೀಚಿನ ದಿನಗಳಲ್ಲಿ ಕ್ಯಾನ್ಸರ್ ರೋಗಕ್ಕೆ ಔಷಧಿ ಮತ್ತು ಚಿಕಿತ್ಸೆಗಳು ಲಭ್ಯವಿದ್ದು ರೋಗವನ್ನು ಪ್ರಾರಂಭದಲ್ಲಿ ಪತ್ತೆ ಹಚ್ಚಿ ಚಿಕಿತ್ಸೆ ಪಡೆದರೆ ಗುಣಪಡಿಸಬಹುದು ಎಂದರು.

ವೈದ್ಯಕೀಯ ಅಧೀಕ್ಷಕ ಡಾ.ಸಿ.ಪಿ.ಮಧು ಮಾತನಾಡಿ, ಕ್ಯಾನ್ಸರ್ ಕಾಯಿಲೆ ಬಗ್ಗೆ ಭಯ ಬೇಡ. ಅದರ ಬಗ್ಗೆ ಜಾಗೃತಿ ಮುಖ್ಯ ಹಾಗೂ ಆಧುನಿಕ ತಂತ್ರಜ್ಞಾನದಿಂದ ಕ್ಯಾನ್ಸರ್ ರೋಗವನ್ನು ಬೇಗ ಪತ್ತೆ ಮಾಡಿದಷ್ಟೂ ಗುಣವಾಗುವ ಪ್ರಮಾಣ ಹೆಚ್ಚಾಗಿರುತ್ತದೆ. ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಇದಕ್ಕೆ ಸೂಕ್ತ ಚಿಕಿತ್ಸಾ ಸೌಲಭ್ಯವಿದ್ದು, ನುರಿತ ವೈದ್ಯರು ಲಭ್ಯವಿದ್ದಾರೆ ಎಂದರು.

ಜೆಎಸ್‌ಎಸ್ ಆಸ್ಪತ್ರೆ ಕ್ಯಾನ್ಸರ್ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಪಿ.ಕೆ. ಕಿರಣ್ ಮಾತನಾಡಿ, ಕ್ಯಾನ್ಸರ್ ತಡೆಗಟ್ಟುವಲ್ಲಿ ಜೀವನ ಶೈಲಿ ಬಹಳ ಪ್ರಮುಖ ಪಾತ್ರ ವಹಿಸುತ್ತದೆ. ಉತ್ತಮ ಜೀವನ ಶೈಲಿಯೆಂದರೆ ನಿಯಮಿತ ಆಹಾರ, ವ್ಯಾಯಾಮ, ತಂಬಾಕಿನಿಂದ ದೂರ ಉಳಿಯುವುದು, ಆಗಾಗ್ಗೆ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವುದು, ರೋಗದ ಲಕ್ಷಣಗಳು ಕಾಣಿಸಿಕೊಂಡಾಗ ಶೀಘ್ರವೇ ತಜ್ಞ ವೈದ್ಯರ ಸಲಹೆ ಪಡೆಯುವುದು. ರಕ್ತ ಸಂಬಂಧಿಕರಲ್ಲಿ ಕ್ಯಾನ್ಸರ್ ಕಾಯಿಲೆಯಿದ್ದರೆ ಮತ್ತಷ್ಟು ಜಾಗರೂಕತೆ ವಹಿಸುವುದು ಅವಶ್ಯ. ವಿಶ್ವ ಕ್ಯಾನ್ಸರ್ ದಿನಾಚರಣೆಯ ಮೂಲ ಉದ್ದೇಶ ಕ್ಯಾನ್ಸರ್ ಕಾಯಿಲೆ ಪ್ರಮಾಣವನ್ನು ತಗ್ಗಿಸುವುದು ಹಾಗೂ ಕ್ಯಾನ್ಸರ್ ಪಿಡುಗನ್ನು ಸಂಯೋಜಿತ ರೀತಿಯಲ್ಲಿ ನಿಯಂತ್ರಣಕ್ಕೆ ತರುವುದು ಎಂದರು.

ಜೆಎಸ್‌ಎಸ್ ಕಾಲೇಜ್ ಆಫ್ ನರ್ಸಿಂಗ್ ಮತ್ತು ಸ್ಕೂಲ್ ಆಫ್ ನರ್ಸಿಂಗ್ ವಿದ್ಯಾರ್ಥಿಗಳು ಆಸ್ಪತ್ರೆ ಆವರಣದಲ್ಲಿ ಪ್ಲೆಕಾರ್ಡ್, ಭಿತ್ತಿಪತ್ರಗಳು, ಮಾಡಲ್‌ಗಳು, ಪೋಸ್ಟರ್‌ಗಳನ್ನು ಪ್ರದರ್ಶಿಸಿ ಸಾರ್ವಜನಿಕರಿಗೆ ಕ್ಯಾನ್ಸರ್ ಬಗ್ಗೆ ಮಾಹಿತಿ ನೀಡಿದರು. ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಕ್ಯಾನ್ಸರ್‌ನಿಂದ ಗುಣಮುಖರಾಗಿರುವವರನ್ನು ಇದೇ ವೇಳೆ ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಭ್ರಮರಾ ಟ್ರಸ್ಟ್‌ನ ಅಧ್ಯಕ್ಷೆ ಶ್ರೀಮತಿ ಮಾಧುರಿ ತಾತಾಚಾರಿ, ಉಪನಿರ್ದೇಶಕ ಡಾ. ಮಂಜುನಾಥ್, ಡಾ. ರವಿಕೃಷ್ಣಪ್ಪ ಮತ್ತು ಆಸ್ಪತ್ರೆ ಸಿಬ್ಬಂದಿ ಹಾಜರಿದ್ದರು.

ಶ್ರೀರಂಗಪಟ್ಟಣದಲ್ಲಿ ವೈಭವದ ಬ್ರಹ್ಮ ರಥೋತ್ಸವ

ಮೊಳಗಿದ ಗೋವಿಂದ, ಗೋವಿಂದ ಘೋಷಣೆ, ಸಾವಿರಾರು ಭಕ್ತರು ಭಾಗಿ



ಶ್ರೀರಂಗಪಟ್ಟಣದಲ್ಲಿ ಬುಧವಾರ ನಡೆದ ಶ್ರೀರಂಗನಾಥಸ್ವಾಮಿಯ ವೈಭವಯುತ ಬ್ರಹ್ಮ ರಥೋತ್ಸವದಲ್ಲಿ ಪಾಲ್ಗೊಂಡಿರುವ ಭಕ್ತಸಮೂಹ.

ಶ್ರೀರಂಗಪಟ್ಟಣ,ಫೆ.5– ರಥ ಸಪ್ತಮಿ ಅಂಗವಾಗಿ ಪಟ್ಟಣದ ಶ್ರೀ ರಂಗನಾಥ ಸ್ವಾಮಿಯ ವೈಭವಯುತ ಬ್ರಹ್ಮ ರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ರಾಜ್ಯ ಹಾಗೂ ಹೊರ ರಾಜ್ಯಗಳಿಂದ ಆಗಮಿಸಿದ್ದ ಸಾವಿರಾರು ಭಕ್ತರು ರಥೋತ್ಸವವನ್ನು ಕಣ್ತುಂಬಿಕೊಂಡು ಶ್ರೀರಂಗನಾಥಸ್ವಾಮಿಯ ದರ್ಶನ ಪಡೆದರು.

ಮಧ್ಯಾಹ್ನ 3ರ ಸಮಯದಲ್ಲಿ ರಥೋತ್ಸವಕ್ಕೆ ಜಿಲ್ಲಾಧಿಕಾರಿ ಡಾ.ಕುಮಾರ, ಅಪರ ಜಿಲ್ಲಾಧಿಕಾರಿ ಬಿ.ಸಿ.ಶಿವಾನಂದ ಮೂರ್ತಿ, ತಹಸೀಲ್ದಾರ್ ಪರಶುರಾಮ್ ಸತ್ತಿಗೇರಿ, ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಉಮಾ ಸೇರಿದಂತೆ ನ್ಯಾಯಾಧೀಶರು ಹಾಗೂ ಗಣ್ಯರು ಚಾಲನೆ ನೀಡಿದರು.

ಬೆಳಿಗ್ಗೆಯಿಂದಲೇ ಶ್ರೀ ರಂಗನಾಥಸ್ವಾಮಿಯ ಬ್ರಹ್ಮ ರಥೋತ್ಸವಕ್ಕೆ ದೇವಾಲಯದ ಆಡಳಿತ ಮಂಡಳಿ ಸೇರಿದಂತೆ ಪ್ರಧಾನ ಅರ್ಚಕ ವಿಜಯಸಾರಥಿ, ವೇದಬ್ರಹ್ಮ ಡಾ.ವಿ.ಭಾನು ಪ್ರಕಾಶ್ ಶರ್ಮಾ ನೇತೃತ್ವದಲ್ಲಿ ವಿವಿಧ ಹೋಮ–ಹವನಗಳು ಹಾಗೂ ವಿಶೇಷ ಪೂಜಾ ಕೈಂಕರ್ಯಗಳು ಜರುಗಿದವು.

ದೇವಾಲಯದ ಬಳಿ ನೆರೆದಿದ್ದ ಭಕ್ತ ಸಮೂಹ ರಥವನ್ನು ದೇವಾಲಯದ ಸುತ್ತ ಒಂದು ಸುತ್ತಿನ ಪ್ರದಕ್ಷಿಣೆ ನಡೆಸಿ, ಮೂಲ ಜಾಗದಲ್ಲಿ ತಂದು ನಿಲ್ಲಿಸಿದರು. ರಥೋತ್ಸವದ ವೇಳೆ ಗೋವಿಂದ, ಗೋವಿಂದ ಎಂಬ ಹರ್ಷೋದ್ಗಾರ ಭಕ್ತರಿಂದ ಕೇಳಿ ಬಂದಿತು. ನಾಡಿನೆಲ್ಲೆಡೆಗಳಿಂದ ಹಾಗೂ ಭಕ್ತರು ಬ್ರಹ್ಮರಥಕ್ಕೆ ಹಣ್ಣು ಜವನ ಎಸೆದು ಪ್ರಾರ್ಥನೆ ಸಲ್ಲಿಸಿದರು.

ವಿಶೇಷ ಪೂಜೆ: ಇದಕ್ಕೂ ಮುನ್ನ ಶ್ರೀರಂಗನಾಥಸ್ವಾಮಿ ದೇವರನ್ನು ಬೆಳಿಗ್ಗಿನಿಂದಲೇ ವಿವಿಧ ಬಗೆಯ ಪುಷ್ಪಗಳಿಂದ ವಿಶೇಷವಾಗಿ ಅಲಂಕರಿಸಲಾಗಿತ್ತು. ನಂತರ ಕುಂಕುಮಾರ್ಚನೆ, ಅಭಿಷೇಕ, ಸಹಸ್ರನಾಮ ಸೇರಿದಂತೆ ಧಾರ್ಮಿಕ ಪೂಜಾ ಕೈಂಕರ್ಯಗಳನ್ನು ನೆರವೇರಿಸಿ ಭಕ್ತರ ದರ್ಶನಕ್ಕೆ ಅನುವು ಮಾಡಿಕೊಡಲಾಯಿತು. ಇನ್ನು ದೇವಾಲಯದ ಪ್ರಾಂಗಣ ಸೇರಿದಂತೆ ರಾಜ ಗೋಪುರಕ್ಕೆ ತುಳಸಿ ಹಾರ, ಹೂವು, ಬಾಳೆ ಹಾಗೂ ಮಾವಿನ ತೋರಣಗಳಿಂದ ಸಿಂಗರಿಸಲಾಗಿತ್ತು

ಉತ್ತರ ಮೆರವಣಿಗೆ: ಬೆಳಿಗ್ಗೆ 6 ಗಂಟೆಗೆ ಸೂರ್ಯ ಮಂಡಲ ಹಾಗೂ ಚಂದ್ರ ಮಂಡಲದ ಉತ್ಸವವು ಪಟ್ಟಣದ ರಾಜಬೀದಿ ಹಾಗೂ ಪ್ರಮುಖ ರಸ್ತೆಗಳಲ್ಲಿ ಸಾಗಿತು. ತಮ್ಮ ಮನೆಯ ಬಳಿ ಬರುತ್ತಿದ್ದಂತೆಯೇ ಮರ ಜನರು ಪೂಜೆ ಸಲ್ಲಿಸಿ ಸೂರ್ಯದೇವರ ಮತ್ತು ಚಂದ್ರ ದೇವನನ್ನು ಪ್ರಾರ್ಥಿಸಿದರು.

ಪ್ರಸಾದ ವಿತರಣೆ: ನೆರೆದಿದ್ದ ಭಕ್ತರಿಗೆ ಅಲ್ಲಲ್ಲಿ ದಾನಿಗಳು ಪ್ರಸಾದ ರೂಪದಲ್ಲಿ ಅನ್ನಸಂತರ್ಪಣೆ ಮಾಡಿದರು. ಬಿಸಿಲಿನ ತಾಪ ಹೆಚ್ಚಾಗಿದ್ದ ಕಾರಣ ಭಕ್ತಾದಿಗಳಿಗೆ ಮಜ್ಜಿಗೆ, ಪಾನಕ, ಕೋಸಂಬರಿ ಸೇರಿದಂತೆ ಇತರೆ ತಂಪು ಪಾನೀಯಗಳನ್ನು ನೀಡುತ್ತಿದ್ದುದು ಕಂಡುಬಂತು.

ಬಿಗಿ ಭದ್ರತೆ: ಮಂಡ್ಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೋ ಬಸ್ತ್ ಏರ್ಪಡಿಸಲಾಗಿತ್ತು, ಜಿಲ್ಲೆ ಹಾಗೂ ವಿವಿಡೆಡೆಗಳಿಂದ ಸಾವಿರಾರು ಭಕ್ತರು ಆಗಮಿಸಿ ರಥೋತ್ಸವವನ್ನು ಸೊಬಗನ್ನು ಸವಿದು, ಸರದಿ ಸಾಲಿನಲ್ಲಿ ನಿಂತು ಶ್ರೀರಂಗನಾಥಸ್ವಾಮಿಯ ದರ್ಶನ ಪಡೆದರು.

ನಾಳೆ ಆಕಾಶವಾಣಿ ಮೈಸೂರು ವಿಭಾಗದಿಂದ ಜನಪದ ರಂಗ

ಮಂಡ್ಯ,ಫೆ.5– ಮೈಸೂರು ಆಕಾಶವಾಣಿ 90 ವರ್ಷಗಳನ್ನು ಪೂರೈಸಿರುವ ಹಿನ್ನೆಲೆ ಮೈಸೂರು, ಮಂಡ್ಯ, ಚಾಮರಾಜ ನಗರ ಜಿಲ್ಲೆಗಳಲ್ಲಿ ಕಾರ್ಯಕ್ರಮಗಳನ್ನು ರೂಪಿಸಿದ್ದು, ಅಂತೆಯೇ ಮೈಸೂರು ಆಕಾಶವಾಣಿ–90 ಭಾವ ಜನಪದರಂಗ ಕಾರ್ಯಕ್ರಮವನ್ನು ಫೆ.7ರಂದು ಬೆಳಿಗ್ಗೆ 10 ಗಂಟೆಗೆ ನಗರದ ಕಲಾಮಂದಿ ರದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಮೈಸೂರು ಆಕಾಶವಾಣಿಯ ಉಪನಿರ್ದೇಶಕ ಎಸ್.ಎಸ್.ಉಮೇಶ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಂಡ್ಯ, ಮೈಸೂರು, ಚಾಮರಾಜ ನಗರ ಜಿಲ್ಲೆಗಳ ಪ್ರತಿಭೆಗಳನ್ನು ಪೋಷಿಸುವ ನಿಟ್ಟಿನಲ್ಲಿ ಕಾರ್ಯಕ್ರಮ ಆಯೋಜಿಸಿದ್ದು, ಮುಂದಿನ ತಿಂಗಳು ಇದರ ದೊಡ್ಡ ಮಟ್ಟದ ಕಾರ್ಯಕ್ರಮ ಆಯೋಜಿಸಲಾಗುವುದು ಎಂದರು. ಗೋಷ್ಠಿಯಲ್ಲಿ ಸಹಾಯಕ ನಿರ್ದೇಶಕ ಟಿ.ವಿ.ದಿವ್ಯಾಕರ್, ಹಿರಿಯ ಉದ್ಘೋಷಕ ಮೈಸೂರು ಉಮೇಶ್ ಇದ್ದರು.

ಮೇಲುಕೋಟೆಯಲ್ಲಿ ಜಾನಪದ ಲೋಕ ಅನಾವರಣ

ಗಮನ ಸೆಳೆದ ಸಾಂಸ್ಕೃತಿಕ ಕಲಾ ಮೇಳಗಳು





ಮೇಲುಕೋಟೆ: ಚೆಲುವನಾರಾಯಣ ಸ್ವಾಮಿ ಸನ್ನಿಧಿಯಲ್ಲಿ ರಥಸಪ್ತಮಿ ಮಹೋತ್ಸವ ಅಂಗವಾಗಿ ಸ್ಥಾನೀಕಂ ನಾಗರಾಜ ಅಯ್ಯಂಗಾರ್ ಸಾಂಸ್ಕೃತಿಕ ವೇದಿಕೆ ವತಿಯಿಂದ ಏರ್ಪಡಿಸಿದ್ದ 26ನೇ ವರ್ಷದ ಜಾನಪದ ಕಲಾ ಮೇಳಕ್ಕೆ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚೆಲುವರಾಯಸ್ವಾಮಿ ದಂಪತಿ ಚಾಲನೆ ನೀಡಿದರು.

ಬೆಳಿಗ್ಗೆ 5.30ಕ್ಕೆ ಮೇಲುಕೋಟೆಗೆ ಆಗಮಿಸಿದ ಸಚಿವ ಎನ್.ಚಲುರಾಯಸ್ವಾಮಿ ಮತ್ತು ಕುಟುಂಬದವರನ್ನು ಶ್ರೀನಿವಾಸ ನರಸಿಂಹನ್ ಗುರೂಜಿ ಬರಮಾಡಿಕೊಂಡರು. ದೇವರ ದರ್ಶನ ಪಡೆದು ವೇದಿಕೆಗೆ ಆಗಮಿಸಿದ ಸಚಿವರು 6.30ಕ್ಕೆ ಜಾನಪದ ಕಲಾಮೇಳ ಉದ್ಘಾಟಿಸಿದರು. ನಂತರ ಬೆಳಿಗ್ಗೆ 7.30ಕ್ಕೆ ಸಚಿವ ಎನ್.ಚೆಲುವರಾಯಸ್ವಾಮಿ, ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ, ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ನಾಗಣ್ಣಗೌಡ ಸೂರ್ಯಮಂಡಲ ವಾಹನೋತ್ಸವದ ತೇರೆಳೆಯುವ ಮೂಲಕ ರಥಸಪ್ತಮಿಗೆ ಚಾಲನೆ ನೀಡಿದರು.

ಇದಕ್ಕೂ ಮುನ್ನ ಬೆಳಿಗ್ಗೆ 6.30ಕ್ಕೆ ಆರಂಭವಾದ ಜಾನಪದ ಕಲಾಮೇಳದಲ್ಲಿ ಪಾಲ್ಗೊಂಡಿದ್ದ ಸುಮಾರು 600ಕ್ಕೂ ಹೆಚ್ಚು ಕಲಾವಿದರು 10.30ರವರೆಗೆ ಚೆಲುವನಾರಾಯಣ ಸ್ವಾಮಿಗೆ ಕಲಾರಾಧನೆ ಸೇವೆ ಮಾಡಿದರು. ಮೇಲುಕೋಟೆಯ ಉತ್ಸವ ಬೀದಿಗಳೇ ಜನಪದ ಕಲಾರಾಧನೆಗೆ ವೇದಿಕೆಯಾಗಿ ಬದಲಾಗಿ ಜನಪದ ಕಲಾಪ್ರಕಾರಗಳ ಪ್ರದರ್ಶನ ಮೇಳೈಸಿತ್ತು

ಚೆಲುವನಾರಾಯಣಸ್ವಾಮಿ ದೇವಾಲಯದ ಸುತ್ತ ನಡೆದ ಜಾನಪದ ಜಾತ್ರೆಯಲ್ಲಿ ತಮಟೆ, ನಗಾರಿ, ಚಂಡೆಗಳ ನೀನಾದ ಮೈನವಿರೇಳುವಂತೆ ಮಾಡಿದರೆ ಗಾರುಡಿ ಗೊಂಬೆಗಳ ನರ್ತನ ನೋಡುಗರನ್ನು ಜನಪದ ಲೋಕಕ್ಕೆ ಕರೆದೊಯ್ಯಿತು. ಕೇರಳದ ಚೆಂಡೆ ಮೇಳ, ಚಿಲಿಪಿಲಿ ಗೊಂಬೆ, ಕೊತ್ತತ್ತಿಯ ಮರಗಾಲು ಕುಣಿತ, ಚಿಕ್ಕಮಗಳೂರಿನ ಹುಲಿ ವೇಷ, ಕರಗದ ನೃತ್ಯ, ಮೈಸೂರು ನಗಾರಿ, ಹುಬ್ಬಳ್ಳಿಯ ಜಗ್ಗಲಿಕೆ ಮೇಳ, ನಾಸಿಕ್ ಡೋಲ್, ಕರಡಿ ಮಜಲು, ನಂದಿ ಕಂಬ, ಪಟಾ ಕುಣಿತ. ಗಾರುಡಿ ಗೊಂಬೆ, ಹುಲಿ ವೇಷ, ವೀರಗಾಸೆ, ಕೋಲಾಟ, ಡೊಳ್ಳು ಕುಣಿತ, ಜಾಂಜ್ ಮೇಳ, ಸೋಮನ ಕುಣಿತ. ಚಕ್ರಾದಿ ಬಳೆ, ಖಡ್ಗ ಪವಾಡ, ವೀರಭದ್ರನ ಕುಣಿತ, ಗಾರುಡಿ ಗೊಂಬೆಗಳು, ಶಾಲಾ ಮಕ್ಕಳ 101 ಕಳಶ, ವೀರ ಮಕ್ಕಳ ಕುಣಿತ, ಕಂಸಾಳೆ, ನಾದಸ್ವರ, ಚುಡೆ ನಗಾರಿ, ಜಡೆ ಕೋಲಾಟ, ದಾಸಯ್ಯರ ದರ್ಶನ, ಮಹಿಳಾ ಡೊಳ್ಳು, ಯಕ್ಷಗಾನ ಗೊಂಬೆಗಳು,ಕೋಳಿನೃತ್ಯ, ಕರಡಿ ಕುಣಿತ ಸೇರಿದಂತೆ ಗ್ರಾಮೀಣ ಸಂಸ್ಕೃತಿ ಅನಾವರಣಗೊಳಿಸುವ ಜಾನಪದ ಕಲಾ ಪ್ರಕಾರಗಳ ಬಹುತೇಕ ತಂಡಗಳು, ಮಹಿಳಾ ಕಲಾ ತಂಡಗಳು ಮೇಳೈಸಿ ಪ್ರೇಕ್ಷಕರ ಮನಸೂರೆಗೊಂಡವು. ಮಹಿಳಾ ಚಂಡೆ, ಕೋಲಾಟ, ಯಕ್ಷಗಾನ ವೈಭವ, ಮಹಿಳಾ ಡೊಳ್ಳುಕುಣಿತ, ಮಹಿಳಾ ಕೋಲಾಟ ವಿದ್ಯಾರ್ಥಿನಿಯರ ಕಳಸ ತಂಡ ಹೀಗೆ 200ಕ್ಕೂ ಹೆಚ್ಚು ಮಹಿಳಾ ಕಲಾವಿದರು ಉತ್ಸವದಲ್ಲಿ ಭಾಗವಹಿಸಿ ಕಳೆತಂದು ಕೊಟ್ಟರು.

ರೈತ ಸಂಘದಿಂದ ಫೆ.10ರಂದು ವಿಧಾನಸೌಧ ಚಲೋ

ಮಂಡ್ಯ,ಫೆ.5– ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ, ಕರ್ನಾಟಕ ಪ್ರಾಂತ ರೈತ ಸಂಘದ ವತಿಯಿಂದ ರೈತ, ಕೃಷಿ ಕೂಲಿಕಾರರ ಭೂಮಿ ಹಕ್ಕಿಗಾಗಿ, ಬಲವಂತದ ಭೂ ಸ್ವಾಧೀನ ವಿರೋಧಿಸಿ ಫೆ.10ರಂದು ವಿಧಾನಸೌಧ ಚಲೋ, ಅನಿರ್ದಿಷ್ಟಾವಧಿ ಧರಣಿ ಹಮ್ಮಿಕೊಳ್ಳಲಾಗಿದೆ ಎಂದು ಕೃಷಿ ಕೂಲಿಕಾರರ ಸಂಘದ ಎಂ.ಪುಟ್ಟಮಾದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಅತಿದೊಡ್ಡ ಕಾರ್ಪೊರೇಟ್ ಪರ ಸರ್ಕಾರವಾಗಿದ್ದು, ಕೇಂದ್ರದ ಆಣತಿಯಂತೆ ರಾಜ್ಯ ಸರ್ಕಾರವೂ ಕಾರ್ಪೊರೇಟ್ ಲೂಟಿಗೆ ಅವಕಾಶ ಮಾಡಿಕೊಡುತ್ತಿದೆ ಎಂದು ಆರೋಪಿಸಿದರು.

ಚುನಾವಣಾ ಪ್ರಣಾಳಿಕೆಯಲ್ಲಿ ಕೇಂದ್ರದ 3 ರೈತ ವಿರೋಧಿ ಕಾಯ್ದೆಗಳನ್ನು ತಿರಸ್ಕರಿಸುತ್ತೇವೆ ಎಂದು ಕಾಂಗ್ರೆಸ್ ಸರ್ಕಾರ ರಚನೆ ಮಾಡಿ, ರೈತ ವಿರೋಧಿ ಧೋರಣೆಗಳನ್ನು ತಾಳಿ ಮನೆ, ನಿವೇಶನ ರಹಿತರ, ಬಗರ್ ಹುಕುಂ–ಅರಣ್ಯ ಸಾಗುವಳಿ ರೈತರ ಭೂಮಿ ಹಕ್ಕಿಗೆ ಧಕ್ಕೆಯುಂಟು ಮಾಡುತ್ತಿದೆ ಎಂದರು.

ರಾಜ್ಯಾದ್ಯಂತ ಲಕ್ಷಾಂತರ ಸಂಖ್ಯೆಯಲ್ಲಿ ಮನೆ–ನಿವೇಶನ, ಸರ್ಕಾರಿ ಭೂಮಿಗಳಲ್ಲಿ ಕಟ್ಟಿಕೊಂಡ ಮನೆಗಳನ್ನು ಸಕ್ರಮಗೊಳಿಸಲು ಕೋರಿ, ಬಗರ್ ಹುಕುಂ ಸಾಗುವಳಿ ಸಕ್ರಮಕ್ಕೆ ಅರ್ಜಿ ಸಲ್ಲಿಸಿದ್ದು ಇವುಗಳನ್ನು ಸರ್ಕಾರ ತಿರಸ್ಕರಿಸುತ್ತಿರುವುದಲ್ಲದೇ, ರೈತರ ಭೂಮಿ ಕಸಿಯುವ ಕೆಲಸಕ್ಕೆ ಮುಂದಾಗಿದೆ ಎಂದು ದೂರಿದರು.

ಸಹಕಾರ ಸಂಘಗಳು ದೇವಸ್ಥಾನಗಳಿದ್ದಂತೆ



ನೂತನ ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಅವರನ್ನು ನಿರ್ದೇಶಕರು, ಅಭಿನಂಧಿಸಿದರು.

ಚಿನಕುರಳಿ, ಫೆ.5– ಹೈನುಗಾರಿಕೆ ಬಗ್ಗೆ ರೈತ ಸಮುದಾಯಕ್ಕೆ ಹೆಚ್ಚಿನ ಅರಿವು ಮೂಡಿಸಿ ಹಾಲು ಉತ್ಪಾದನೆಯಲ್ಲಿ ಪಾಂಡವಪುರ ತಾಲೂಕನ್ನು ಜಿಲ್ಲೆಗೆ ಮೊದಲ ಸ್ಥಾನಕ್ಕೆ ತೆಗೆದುಕೊಂಡು ಹೋಗಬೇಕು ಎನ್ನುವುದು ನನ್ನ ಮುಖ್ಯಗುರಿಯಾಗಿದೆ ಎಂದು ತಿಳಿಸಿದ ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಸಹಕಾರ ಸಂಘಗಳು ದೇವಸ್ಥಾನವಿದ್ದಂತೆ ಎಂದರು.

ಚಿನಕುರಳಿ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ ಅಭಿನಂಧನೆ ಸ್ವೀಕರಿಸಿ ಅವರು ಮಾತನಾಡಿದರು.

ಹೈನುಗಾರಿಕೆ ರೈತರು ಆರ್ಥಿಕವಾಗಿ ಸದೃಢರಾಗಲು ಸಹಕಾರಿಯಾಗಿದೆ. ಡಿಂಕಾ ಗ್ರಾಮದ ರೈತ ಮಹಿಳೆಯೊಬ್ಬರು ದಕ್ಷಿಣ ಭಾರತದಲ್ಲಿಯೇ ಅತಿಹೆಚ್ಚು ಹಾಲು ಉತ್ಪಾದನೆ ಮಾಡಿದ ಹೆಗ್ಗಳಿಕೆ ಪಾತ್ರರಾಗಿದ್ದಾರೆ. ಗ್ರಾಮೀಣ ಪ್ರದೇಶದ ರೈತ ಕುಟುಂಬಗಳಿಗೆ ಹೈನುಗಾರಿಕೆ ಆರ್ಥಿಕ ಆಧಾರಸ್ಥಂಭವಾಗಿದ್ದು ಲಕ್ಷಾಂತರ ಕುಟುಂಬಗಳ ಬದುಕು ನಿರ್ವಹಣೆಗೆ ಸಹಕಾರಿಯಾಗಿದೆ. ಸಹಕಾರ ಸಂಘಗಳು, ದೇವಸ್ಥಾನಗಳಿದ್ದಂತೆ, ನಾವು ದೇವರ ಬಗ್ಗೆ ಎಷ್ಟು ಭಕ್ತಿ ನಂಬಿಕೆ ಇಟ್ಟು ಪೂಜಿ ಸುತ್ತೇವೋ ಅಷ್ಟೇ ಪ್ರಾಮಾಣಿಕವಾಗಿ ಸಂಘದ ಅಭಿವೃದ್ಧಿಗೆ ಕೆಲಸ ಮಾಡುತ್ತೇನೆ ಎಂದರು.

ಮುಖಂಡ ರಾಧಾಕೃಷ್ಣ ಮಾತನಾಡಿದರು. ಈ ಸಂದರ್ಭದಲ್ಲಿ ಜಿಪಂ ಮಾಜಿ ಸದಸ್ಯ ಸಿ.ಅಶೋಕ್, ವಿಎಸ್‌ಎಸ್‌ಬಿ ಅಧ್ಯಕ್ಷ ಸಿ.ಎಸ್. ಗೋಪಾಲಗೌಡ, ಉಪಾಧ್ಯಕ್ಷ ಸಿ.ಸುರೇಂದ್ರ, ಟಿಎಪಿಸಿಎಂಎಸ್ ನಿರ್ದೇಶಕ ರಾಮಕೃಷ್ಣೇಗೌಡ, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷರಾದ ಸಿ.ಪ್ರಕಾಶ್, ಯಶವಂತ್‌ಕುಮಾರ್, ವೀರಶೈವ–ಲಿಂಗಾಯತ ಮಹಾಸಭ ಜಿಲ್ಲಾಧ್ಯಕ್ಷ ಆನಂದ್, ಡೇರಿ ಉಪಾಧ್ಯಕ್ಷ ಸಿ.ಆರ್.ರಮೇಶ್, ನಿರ್ದೇಶಕರಾದ ಸಿ.ಎಂ. ರಮೇಶ್, ಆರ್.ಮದುರಾಜು, ಸಿ.ಎಸ್.ಲೋಕೇಶ್, ಸಿ.ಎ.ಮಂಜುನಾಥ್, ಸಿ.ಎಸ್.ಕೆಂಪೇಗೌಡ, ಸಿ.ಬಿ.ನಾರಾಯಣಚಾರಿ, ಯೋಗೇಂದ್ರ ವರಲಕ್ಷ್ಮೀ, ಯಶೋಧಮ್ಮ, ಹೇಮಾ, ಕಾರ್ಯದರ್ಶಿ ಲೋಕೇಶ್, ಗ್ರಾಪಂ ಹಾಲಿ ಹಾಗೂ ಮಾಜಿ ಸದಸ್ಯರು, ವಿಎಸ್‌ಎಸ್‌ಎನ್‌ಬಿ ಮಾಜಿ ಅಧ್ಯಕ್ಷರಾದ ಮಂಜುನಾಥ್, ಮೊಗ್ಗಣ್ಣೇಗೌಡ, ಎಲ್ಲಾ ನಿರ್ದೇಶಕರು, ಮುಖಂಡರು ಹಾಜರಿದ್ದರು.

ಒಂದನೇ ಪುಟದಿಂದ

ವಿಜಯೇಂದ್ರ ಸ್ಥಾನ ಅಬಾಧಿತ

ರಾಜ್ಯದ 39 ಜಿಲ್ಲಾ ಧ್ಯಕ್ಷರಲ್ಲಿ 28 ಮಂದಿ ಹಾಲಿ ರಾಜ್ಯಾಧ್ಯ ಕ್ಷರ ಪರ ಇರುವುದು ವಿರೋಧಿಗಳಿಗೆ ಸಹಿಸಲು ಆಗುತ್ತಿಲ್ಲ. ಚುನಾವಣೆ ನಡೆದರೂ ವಿಜಯೇಂದ್ರ ಅವರೇ ಗೆಲ್ಲುವರೆಂಬ ನಿರೀಕ್ಷೆ ಇವರದ್ದಾಗಿದ್ದು, ಹೀಗಾಗಿ, ಅವರಿಗೆ ಧಕ್ಕುವ ಅಧಿಕಾರ ತಪ್ಪಿಸಲು ಬಸನಗೌಡ ಪಾಟೀಲ್ ಯತ್ನಾಳ್ ಪಡೆ ದೆಹಲಿಯಲ್ಲಿ ಬಿಡಾರ ಹೂಡಿ ದಿನನಿತ್ಯ ಒಬ್ಬರಲ್ಲಾ ಒಬ್ಬರು ನಾಯಕರನ್ನು ಭೇಟಿ ಮಾಡಿ ರಾಜ್ಯಕ್ಕೆ ಪರ್ಯಾಯ ನಾಯಕನನ್ನು ಕೊಡಿ ಎಂದು ಕೇಳಿಕೊಳ್ಳುತ್ತಿದ್ದಾರೆ.

ಮತ್ತೊಂದೆಡೆ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ವಿಧಾನಸಭೆಯ ಪ್ರತಿಪಕ್ಷ ನಾಯಕ ಆರ್.ಅಶೋಕ್, ಆರ್‌ಎಸ್‌ಎಸ್ ನಾಯಕ ಮುಂಕುಂದ್ ಅವರನ್ನು ಭೇಟಿ ಮಾಡಿ, ಬಿಜೆಪಿ ರಾಜ್ಯಾಧ್ಯಕ್ಷರ ಬದಲಾವಣೆ ಆಗಬೇಕು ಎಂಬುದನ್ನು ಹೇಳಿದ್ದಾರೆ. ವಿಜಯೇಂದ್ರ ರಾಜ್ಯಾಧ್ಯಕ್ಷರಾದ ನಂತರ ಅವರು ಯಾವ ರೀತಿ ಪಕ್ಷದ ಮುಖಂಡರನ್ನು ಕಡೆಗಣಿಸಿದ್ದಾರೆ. ಉಪಚುನಾವಣಾ ಫಲಿತಾಂಶ, ಸಂಘಟನೆ ವಿಷಯದಲ್ಲಿ ಯಾರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳದಿರುವುದೂ ಸೇರಿದಂತೆ ಹಲವಷ್ಟು ವಿಚಾರಗಳನ್ನು ಈ ಮುಖಂಡರು ಮುಕುಂದ್ ಮುಂದೆ ಬಿಡಿಸಿಟ್ಟಿದ್ದಾರೆ. ಅವರನ್ನೇ ಅಧ್ಯಕ್ಷರನ್ನಾಗಿ ಮುಂದುರೆಸಿದರೆ ಪಕ್ಷದಲ್ಲಿ ಆಂತರಿಕ ಕಲಹ ಮತ್ತಷ್ಟು ಮುಂದುವರೆಯುತ್ತದೆ. ನಿಮಗೂ ಎಲ್ಲಾ ಮಾಹಿತಿ ಇದೆ, ನೀವು ಪಕ್ಷದ ವರಿಷ್ಠರ ಗಮನಕ್ಕೆ ತಂದು ಎಲ್ಲವನ್ನೂ ಸರಿಪಡಿಸಬೇಕು ಎಂದಿದ್ದಾರೆ.

ಆದರೆ, ವಿಜಯೇಂದ್ರ ಮಾತ್ರ ತಮ್ಮ ವಿರುದ್ಧ ಸ್ವಪಕ್ಷೀಯರಿಂದಲೇ ಟೀಕಾ ಪ್ರಹಾರಗಳು ಎದುರಾದರೂ ಏನನ್ನೂ ಪ್ರತಿಕ್ರಿಯಿಸಿದೆ, ನಾನೇ ಅಧ್ಯಕ್ಷನಾಗಿ ಮುಂದುವರೆಯುತ್ತೇನೆ. ಒಂದೆರಡು ವಾರಗಳಲ್ಲಿ ಎಲ್ಲವೂ ಸರಿಹೋಗಲಿದೆ ಎಂದಿದ್ದಾರೆ.

ಒಂದು ಸ್ಟೇಟ್‌ಮೆಂಟ್ ಕೊಡುತ್ತಾರೆ...!

ಲಿಂಗಾಯತ ಕೋಟಾ ಬಂದರೆ ನಾನು ಸ್ಪರ್ಧಿಸಲು ತಯಾರಿದ್ದೇನೆ. ನಮ್ಮಲ್ಲಿ ತೀರ್ಮಾನ ಮಾಡಿಕೊಂಡು ರಾಜ್ಯಾಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿ ಹಾಕುತ್ತೇವೆ. ಅದರಲ್ಲಿ ಲಿಂಗಾಯತರು ಸ್ಪರ್ಧೆ ಮಾಡಬೇಕು ಎಂದು ಬಂದರೆ ನಾನೇ ಅಭ್ಯರ್ಥಿಯಾಗುತ್ತೇನೆ ಎಂದು ಯತ್ನಾಳ್ ಹೇಳಿಕೆ ನೀಡಿದ್ದಾರೆ. ನಮ್ಮನ್ನು ಭೇಟಿ ಮಾಡಲು ಎಲ್ಲಾ ರಾಷ್ಟ್ರೀಯ ನಾಯಕರು ಸಮಯ ನೀಡಿದ್ದಾರೆ. ಸುಮ್ಮ ಸುಮ್ಮನೆ ದೆಹಲಿಗೆ ಬರಲು ನಾವೇನು ಹುಚ್ಚರಾ ಎಂದು ಪ್ರಶ್ನಿಸಿದ ಯತ್ನಾಳ್, ನಮ್ಮದು ಮೂರು ಅಜೆಂಡಾ ಇಟ್ಟುಕೊಂಡು ಕೇಂದ್ರದ ನಾಯಕರನ್ನು ಭೇಟಿ ಮಾಡುತ್ತಿದ್ದೇವೆ. ಹಿಂದುತ್ವ, ಕುಟುಂಬ ರಾಜಕಾರಣ, ಭ್ರಷ್ಟಾಚಾರ ವಿರುದ್ಧ ನಮ್ಮ ಹೋರಾಟ ನಿರಂತರವಾಗಿದೆ. ಈ ಕುರಿತು ಕೇಂದ್ರದ ನಾಯಕರು ನಮಗೆ ಉತ್ತರ ನೀಡಬೇಕಿದೆ. ಕುಟುಂಬ ರಾಜಕಾರಣದ ಬಗ್ಗೆ ಕೇಂದ್ರದಲ್ಲಿ ಮಾತನಾಡುತ್ತಾರೆ. ಆದರೆ ಯಡಿಯೂರಪ್ಪ ಅವರ ಮಗನನ್ನು ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಹೀಗೆಲ್ಲಾ ಮಾತನಾಡೋದಿದ್ದರೆ ಮುಂದೆ ಕುಟುಂಬ ರಾಜಕಾರಣ, ಹಿಂದುತ್ವದ ಬಗ್ಗೆ ಮಾತನಾಡಬಾರದು ಎಂದು ಹೈಕಮಾಂಡ್‌ಗೆ ಸಲಹೆ ನೀಡಿದರು. ನಾನೇ ಮುಂದುವರಿಯುತ್ತೇನೆ ಎಂಬ ಬಿ.ವೈ. ವಿಜಯೇಂದ್ರ ಹೇಳಿಕೆ ವಿಚಾರಕ್ಕೆ ಉತ್ತರಿಸಿದ ಯತ್ನಾಳ್, ಮೊದಲು ಬಿಜೆಪಿ ರಾಜ್ಯಾಧ್ಯಕ್ಷರ ಚುನಾವಣೆ ನಡೆಯಲಿ. ಅಲ್ಲಿವರೆಗೆ ಕೈ ಮುಗಿದುಕೊಂಡು ಓಡಾಡಲಿ. ವಿಜಯೇಂದ್ರ ಹೋದರೆ ಮುಂದಿನ ನಾಲ್ಕೈದು ದಿನದಲ್ಲಿ ಪಕ್ಷದಲ್ಲಿ ಎಲ್ಲವೂ ಒಳ್ಳೆಯದಾಗುತ್ತದೆ ಎಂದು ಟಾಂಗ್ ನೀಡಿದರು.

ನೀರಿನ ಪ್ಲಾಸ್ಟಿಕ್ ಬಾಟಲ್ ನಿಷಿದ್ಧ

ಏರ್ಪಡಿಸುವ ಸಭೆ, ಸಮಾರಂಭಗಳಲ್ಲಿ ಒಂದು ಬಾರಿ ಬಳಕೆಯ ಕುಡಿಯುವ ನೀರಿನ ಪ್ಲಾಸ್ಟಿಕ್ ಬಾಟಲಿಗಳನ್ನು ನಿಷೇಧಿಸಲಾಗಿದೆ. ಇಂತಹ ಸಭೆ, ಸಮಾರಂಭಗಳಲ್ಲಿ ಕುಡಿಯುವ ನೀರನ್ನು ಸಂದರ್ಭಾನುಸಾರ ಶುಚಿತ್ವಕ್ಕಾಗಿ ಗ್ಲಾಸ್, ಸ್ಟೀಲ್, ಪೇಪರ್ ಮತ್ತಿತರ ಪ್ಲಾಸ್ಟಿಕ್ ಅಲ್ಲದ, ಲೋಟಗಳಲ್ಲಿ ಸರಬರಾಜು ಮಾಡಬೇಕು. ಈ ಹಿಂದೆ ಸರ್ಕಾರಿ ಆದೇಶ ಹೊರಡಿಸಿದ್ದರೂ ಅದನ್ನು ಸಂಬಂಧಪಟ್ಟವರು ಪಾಲನೆ ಮಾಡುತ್ತಿಲ್ಲ. ಇನ್ನು ಮುಂದೆ ಕಟ್ಟುನಿಟ್ಟಾಗಿ ಪಾಲನೆ ಮಾಡಬೇಕು ಹಾಗೂ ಪ್ಲಾಸ್ಟಿಕ್ ಬಳಕೆ ಬದಲಿಗೆ ಪರಿಸರ ಸ್ನೇಹಿ ವಸ್ತುಗಳಿಂದ ತಯಾರಿಸಿದ ವಸ್ತುಗಳನ್ನು ಬಳಕೆ ಮಾಡುವಂತೆ ಸೂಚನೆ ನೀಡಲಾಗಿದೆ.

ಸಿದ್ದರಾಮಯ್ಯ ಬಜೆಟ್ ಪೂರ್ವಭಾವಿ ಸಭೆ

ಜೆಡಿಎಸ್ ಆರೋಪಿಸಿದ್ದು, ಹಲವು ಕಾಂಗ್ರೆಸ್ ಶಾಸಕರು ತಮ್ಮ ಕ್ಷೇತ್ರಗಳಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಸಾಕಷ್ಟು ಹಣ ಸಿಗದಿರುವ ಬಗ್ಗೆ ಈಗಾಗಲೇ ಅಸಮಾಧಾನ ವ್ಯಕ್ತಪಡಿಸಿದ್ದರು. ಗೃಹ ಸಚಿವ ಜಿ ಪರಮೇಶ್ವರ್ ಅವರು ಇತ್ತೀಚೆಗೆ ಕಾಂಗ್ರೆಸ್ ಶಾಸಕಾಂಗ ಪಕ್ಷದ (ಸಿಎಲ್‌ಪಿ) ಸಭೆಯ ನಂತರ, ವಿಧಾನಸಭಾ ಕ್ಷೇತ್ರಗಳಲ್ಲಿನ ಕಾಮಗಾರಿಗಳಿಗೆ ತಲಾ 10 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ ಎಂದು ಹೇಳಿದ್ದರು. 2025–26 ನೇ ಸಾಲಿನ ಬಜೆಟ್ ಅನ್ನು ಹಣಕಾಸು ಇಲಾಖೆಯ ಜವಾಬ್ದಾರಿಯನ್ನೂ ಹೊತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾರ್ಚ್ 14 ರಂದು ಮಂಡಿಸಲಿದ್ದು, ಇದು ಸಿದ್ದರಾಮಯ್ಯ ಅವರ 16ನೇ ದಾಖಲೆಯ ಬಜೆಟ್ ಮಂಡನೆ ಯಾಗಿರಲಿದೆ. ಸಿದ್ದರಾಮಯ್ಯ ಅವರ 16ನೇ ಬಜೆಟ್ ಹಲವು ವೈಶಿಷ್ಟ್ಯಗಳನ್ನು ಹೊಂದಿದೆ.

SSLC ಪರೀಕ್ಷೆಯಲ್ಲಿ ಎಐ ಕ್ಯಾಮರಾ ಕಣ್ಗಾವಲು!

ಮಾದರಿಯ ಸಿಸಿ ಕ್ಯಾಮರಾಗಳ ಮೂಲಕ ಪರೀಕ್ಷಾ ಪ್ರಕ್ರಿಯೆಗಳ ಮೇಲೆ ನಿಗಾ ಇರಿಸಲು ಮುಂದಾಗಿದೆ.

ಸೂಕ್ಷ್ಮ ಮತ್ತು ಅತೀ ಸೂಕ್ಷ್ಮ ಎಂದು ಗುರುತಿಸಿರುವ ಪರೀಕ್ಷಾ ಕೇಂದ್ರಗಳಿಗೆ ಎಐ ಮಾದರಿಯ ಸಿಸಿ ಕ್ಯಾಮರಾ ಅಳವಡಿಸುವಂತೆ ರಾಜ್ಯದ ಎಲ್ಲಾ ಶಾಲಾ ಶಿಕ್ಷಣ ಉಪ ನಿರ್ದೇಶಕರಿಗೆ ಮಂಡಳಿ ನಿರ್ದೇಶಕ ಹೆಚ್.ಎನ್. ಗೋಪಾಲ ಕೃಷ್ಣ ನಿರ್ದೇಶನ ನೀಡಿದ್ದಾರೆ.

ಎಐ ಕ್ಯಾಮರಾ ಒದಗಿಸುವ ಮೈಕ್ರೋಸಾಫ್ಟ್ ಸಂಸ್ಥೆ ಸಹಭಾಗಿತ್ವದಲ್ಲಿ ಪ್ರಾಯೋಗಿಕವಾಗಿ ಪರೀಕ್ಷಾ ಕೇಂದ್ರಗಳ ಮೇಲೆ ನಿಗಾ ಇರಿಸಲು ಸರ್ವ ರೀತಿಯಲ್ಲಿ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದೂ ಗೋಪಾಲ ಕೃಷ್ಣ ತಿಳಿಸಿದ್ದಾರೆ. ಕಳೆದ ವರ್ಷಕ್ಕಿಂತ ಈ ವರ್ಷ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ನೋಂದಣಿ ಮಾಡಿಕೊಂಡಿರುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿರುವುದರಿಂದ ಕಾಪಿ ಮಾಡುವುದೂ ಸೇರಿದಂತೆ ಪರೀಕ್ಷಾ ಅಕ್ರಮ ತಡೆಗಟ್ಟಲು ನೂತನ ತಂತ್ರಜ್ಞಾನ ಅಳವಡಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಎಐ ಕ್ಯಾಮರಾಗಳು ಪರೀಕ್ಷಾ ಅಕ್ರಮಗಳು ಕಂಡು ಬಂದಲ್ಲಿ, ಅದರ ಫೋಟೋ ಮತ್ತು ವಿಡಿಯೋ ಕ್ಲಿಪಿಂಗ್‌ಗಳನ್ನು ತಕ್ಷಣವೇ ಪರೀಕ್ಷಾ ಕೇಂದ್ರದ ಮುಖ್ಯಸ್ಥರು, ಆಯಾಯ ಜಿಲ್ಲೆಯ ಜಿಲ್ಲಾಧಿಕಾರಿಗಳು ಹಾಗೂ ಕೆಎಸ್‌ಇಎಬಿ ಅಧ್ಯಕ್ಷರಿಗೆ ರವಾನಿಸುತ್ತವೆ. ಅಧಿಕಾರಿಗಳು ತಕ್ಷಣ ಎಚ್ಚೆತ್ತು ಅಕ್ರಮ ತಡೆದು ಸಂಬಂಧಪಟ್ಟ ವಿದ್ಯಾರ್ಥಿಗಳು ಹಾಗೂ ಅಧಿಕಾರಿಗಳ ವಿರುದ್ಧ ಕ್ರಮ ವಹಿಸಲು ಸಹಕಾರಿಯಾಗಲಿದೆ. ಈ ಕುರಿತು ಪ್ರತಿಕ್ರಿಯೆ ನೀಡಿರುವ ಶಾಲಾ ಶಿಕ್ಷಣ ಇಲಾಖೆ ಮೈಸೂರು ಜಿಲ್ಲಾ ಉಪ ನಿರ್ದೇಶಕ ಎಸ್.ಟಿ.ಜವರೇಗೌಡ, ಕಳೆದ ಬಾರಿಯಂತೆಯೇ ಈ ವರ್ಷದ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕೇಂದ್ರಗಳಿಗೆ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಿ ವೆಬ್ ಕ್ಯಾಸ್ಟಿಂಗ್ ಮಾಡಲಾಗುತ್ತದೆ. ಅದರಿಂದ ಕಾಪಿಯಂತಹ ಪರೀಕ್ಷಾ ಅಕ್ರಮಗಳನ್ನು ಕಟ್ಟುನಿಟ್ಟಾಗಿ ತಡೆಯುತ್ತೇವೆ ಎಂದರು. ಆದರೆ ಸೂಕ್ಷ್ಮ ಮತ್ತು ಅತೀ ಸೂಕ್ಷ್ಮ ಕೇಂದ್ರಗಳಿಗೆ ಎಐ ಸಾಮರ್ಥ್ಯದ ಸಿಸಿ ಕ್ಯಾಮರಾ ಅಳವಡಿಸಬೇಕೆಂಬುದರ ಬಗ್ಗೆ ನಮಗೆ ಸರ್ಕಾರದಿಂದ ಈವರೆಗೆ ಯಾವುದೇ ನಿರ್ದೇಶನ ಬಂದಿಲ್ಲ ಎಂದ ಅವರು, ಇನ್ನೂ ಸಮಯವಿರುವುದರಿಂದ ಕಷ್ಟಪಟ್ಟು ಓದಿಕೊಂಡು ಸಾವಕಾಶವಾಗಿ ಪರೀಕ್ಷೆ ಎದುರಿಸಬೇಕೆಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಬೆಂಗಳೂರಿನ 30 ಕಡೆ ಐಟಿ ದಾಳಿ

ದಾಖಲಾತಿಗಳನ್ನು ಪರಿಶೀಲಿಸಿದ್ದಾರೆ. ಅವರು ಮಾಡಿರುವ ವಹಿವಾಟು ಮತ್ತು ಸರ್ಕಾರಕ್ಕೆ ಪಾವತಿಸಿರುವ ತೆರಿಗೆ ವಿವರ, ಪ್ರತೀ ವರ್ಷ ಸಲ್ಲಿಸಿರುವ ಐಟಿ ರಿಟರ್ನ್ಸ್ ಕುರಿತಂತೆ ಉದ್ಯಮಿಗಳಿಂದ ಮಾಹಿತಿ ಪಡೆದುಕೊಂಡ ಅಧಿಕಾರಿಗಳು, ಗಳಿಸಿರುವ ಅಧಿಕ ಆಸ್ತಿಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಪಟ್ಟಿ ತಯಾರಿಸಿ ದಾಖಲೆಗಳನ್ನು ತಮ್ಮ ವಶಕ್ಕೆ ಪಡೆದುಕೊಂಡರು ಎಂದು ಮೂಲಗಳು ತಿಳಿಸಿವೆ.

ಸಿವಿಲ್ ಕಾಂಟ್ರಾಕ್ಟ್, ರಿಯಲ್ ಎಸ್ಟೇಟ್, ವಾಣಿಜ್ಯೋದ್ಯಮ ಹಾಗೂ ಇನ್ನಿತರ ವೃತ್ತಿಗಳಲ್ಲಿ ಮಾಡಿರುವ ವಹಿವಾಟುಗಳಿಗೆ ಜಿಎಸ್‌ಟಿ, ಎಸ್‌ಎಸ್‌ಟಿ ಪಾವತಿಸಿರುವ ಕುರಿತಂತೆಯೂ ಮಾಹಿತಿಗಳನ್ನು ಪಡೆದುಕೊಂಡಿದ್ದಾರೆ.

ಪ್ರತಿಯೊಬ್ಬರ ಮನೆಗೂ ಸುಮಾರು ಹತ್ತಕ್ಕೂ ಹೆಚ್ಚು ವಾಹನಗಳಲ್ಲಿ ಆಗಮಿಸಿದ 50ಕ್ಕೂ ಹೆಚ್ಚು ಅಧಿಕಾರಿಗಳು ಕುಟುಂಬ ಸದಸ್ಯರು ಹೊರ ಹೋಗದಂತೆ ಹಾಗೂ ಹೊರಗಿನಿಂದ ಯಾರು ಒಳ ಪ್ರವೇಶಿಸುವುದನ್ನು ನಿರ್ಬಂಧಿಸಿದ್ದರು. ಕಾರ್ಯಾಚರಣೆಯಲ್ಲಿ ನವದೆಹಲಿ, ಚೆನ್ನೈ, ಗೋವಾ ಮತ್ತು ಕೊಲ್ಕತ್ತಾದಿಂದ ಬಂದ ಆದಾಯ ತೆರಿಗೆ ಅಧಿಕಾರಿಗಳು ಬೆಂಗಳೂರು, ಮೈಸೂರು ಹಾಗೂ ಮಂಡ್ಯ ಜಿಲ್ಲೆಗಳ ಸುಮಾರು 30ಕ್ಕೂ ಹೆಚ್ಚು ಸ್ಥಳಗಳಲ್ಲಿ ಇಂದು ಮುಂಜಾನೆಯಿಂದ ಸಂಜೆಯವರೆಗೂ ಶೋಧ ಕಾರ್ಯ ನಡೆಸಿದರು.

ಜಯಕೃಷ್ಣ ಅವರ ರಾಮಕೃಷ್ಣನಗರ ಮನೆ ಹಾಗೂ ಸಮೀಪದ ನಿವೇದಿತಾ ನಗರದಲ್ಲಿರುವ ಕಚೇರಿ, ಕಾಂತರಾಜು ಅವರಿಗೆ ಸೇರಿದ ದೇವೇಗೌಡ ಸರ್ಕಲ್ ಬಳಿಯ ರಿಂಗ್ ರಸ್ತೆಗೆ ಹೊಂದಿಕೊಂಡಂತಿರುವ ಎಂ–ಪ್ರೋ ಹೋಟೆಲ್, ಸಮೀಪದ ಮಾರುತಿನಗರದಲ್ಲಿರುವ ಮನೆ ಹಾಗೂ ಮಾನಸಿನಗರದ ಕಚೇರಿಗಳಲ್ಲಿ ತಂಡೋಪತಂಡವಾಗಿ ಏಕಕಾಲದಲ್ಲಿ ದಾಳಿ ನಡೆಸಿ, ಆಸ್ತಿಗಳ ದಾಖಲೆ ಪತ್ರಗಳನ್ನು ಐಟಿ ಅಧಿಕಾರಿಗಳು ವಶಪಡಿಸಿಕೊಂಡರು ಎಂದು ಹೇಳಲಾಗುತ್ತಿದೆ. ಇಂದು ದಾಳಿ ನಡೆಸಲಾದವರಲ್ಲಿ ಬಹುತೇಕರು ಮೈಸೂರಿನ ಪ್ರತಿಷ್ಠಿತ ರಾಜಕಾರಣಿಗಳು ಹಾಗೂ ಹಿರಿಯ ಪೊಲೀಸ್ ಅಧಿಕಾರಿಗಳ ಸಂಬಂಧಿಕರು ಎಂದು ಹೇಳಲಾಗುತ್ತಿದೆ. ದಾಳಿ ವೇಳೆ ಐಟಿ ಅಧಿಕಾರಿಗಳು ಕುವೆಂಪುನಗರ, ವಿಜಯನಗರ, ಆಲನಹಳ್ಳಿ ಪೊಲೀಸರ ಸಹಕಾರ ಪಡೆದಿದ್ದರು. ಅದೇ ರೀತಿ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆ, ಮಂಡ್ಯ ಜಿಲ್ಲೆಯ ಉದ್ಯಮಿಗಳು ಹಾಗೂ ಹಿರಿಯ ನಿವೃತ್ತ ಅಧಿಕಾರಿಗಳ ಮನೆ ಮತ್ತು ಕಚೇರಿಗಳ ಮೇಲೂ ಐಟಿ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಆದರೆ ಅವರು ವಶಪಡಿಸಿಕೊಂಡ ಹಣ, ದಾಖಲೆ ಪತ್ರ, ಆಭರಣ ಹಾಗೂ ಇನ್ನಿತರ ಆಸ್ತಿಗಳ ಸಂಬಂಧ ಮಾಹಿತಿ ಲಭ್ಯವಾಗಿಲ್ಲ.

ಮೋದಿ ಪುಣ್ಯಸ್ನಾನ

ಅವರನ್ನು ಸ್ವಾಗತಿಸಿದರು. ಭಕ್ತರಿಗೆ ಯಾವುದೇ ತೊಂದರೆಯಾಗದಂತೆ ಪ್ರಧಾನಿ ಮೋದಿ ಅವರು ಬಮ್ರೌಲಿ ವಿಮಾನ ನಿಲ್ದಾಣದಿಂದ ಹೆಲಿಕಾಪ್ಟರ್ ಮೂಲಕ ಅರೈಲ್ ತಲುಪಿದರು. ಅಲ್ಲಿಂದ ದೋಣಿ ಮೂಲಕ ಮೇಳದ ಪ್ರದೇಶಕ್ಕೆ ಬಂದರು. ಪ್ರಧಾನಿ ಯವರ ಭೇಟಿ ಹಿನ್ನೆಲೆಯಲ್ಲಿ ಮಹಾಕುಂಭ ಮೇಳದ ಭದ್ರತೆಯನ್ನು ಹೆಚ್ಚಿಸ ಲಾಗಿತ್ತು. ಸಂಗಮ್ ಪ್ರದೇಶದಲ್ಲಿ ಅರೆಸೈನಿಕ ಪಡೆಗಳನ್ನು ಸಹ ನಿಯೋಜಿ ಸಲಾಗಿತ್ತು. ಮೋಟಾರ್ ಬೋಟ್‌ನಲ್ಲಿ ಪ್ರಯಾಣ ಮಾಡುವ ವೇಳೆ ಯೋಗಿ ಆದಿತ್ಯನಾಥ್ ಮಹಾಕುಂಭ ಮೇಳಕ್ಕೆ ಸಂಬಂಧಿಸಿದ ಕೆಲ ಮಾಹಿತಿಗಳನ್ನು ಪ್ರಧಾನಿಗೆ ನೀಡಿದರು.

ದೈವಿಕ ಸಂಪರ್ಕದ ಕ್ಷಣ: ಮಹಾ ಕುಂಭ ತ್ರಿವೇಣಿ ಸಂಗಮದಲ್ಲಿ ಪುಣ್ಯ ಸ್ನಾನದ ಕ್ಷಣಗಳನ್ನು ವಿವರಿಸಿರುವ ಪ್ರಧಾನಿ ಮೋದಿ, ಪ್ರಯಾಗರಾಜ್‌ನಲ್ಲಿ ನಡೆಯುವ ಮಹಾ ಕುಂಭ ಮೇಳದಲ್ಲಿ ಭಾಗವಹಿಸಿದ್ದು ಸಂತೋಷವಾಯಿತು. ಸಂಗಮದಲ್ಲಿನ ಸ್ನಾನವು ದೈವಿಕ ಸಂಪರ್ಕದ ಕ್ಷಣವಾಗಿದೆ. ಅದರಲ್ಲಿ ಭಾಗವಹಿಸಿದ ಕೋಟ್ಯಂತರ ಇತರರಂತೆ ನಾನು ಕೂಡ ಭಕ್ತಿಯ ಮನೋಭಾವದಿಂದ ತುಂಬಿದ್ದೆ. ಗಂಗಾ ಮಾತೆ ಎಲ್ಲರಿಗೂ ಶಾಂತಿ, ಬುದ್ಧಿವಂತಿಕೆ, ಉತ್ತಮ ಆರೋಗ್ಯ ಮತ್ತು ಸಾಮರಸ್ಯವನ್ನು ದಯಪಾಲಿಸಲಿ ಎಂದು ಪ್ರಧಾನಮಂತ್ರಿ ಮೋದಿ ಪ್ರಯಾಗ್ ರಾಜ್ ಮಹಾಕುಂಭ ಮೇಳದ ನಂತರ ತಮ್ಮ ಅಭಿಪ್ರಾಯ ತಿಳಿಸಿದ್ದಾರೆ. ಪ್ರಯಾಗ್ ರಾಜ್ ಮಹಾ ಕುಂಭದಲ್ಲಿ, ಪವಿತ್ರ ಸಂಗಮದಲ್ಲಿ ಸ್ನಾನ ಮಾಡಿದ ನಂತರ, ನಮಗೆ ಪೂಜೆ ಮಾಡುವ ಪರಮ ಭಾಗ್ಯ ಸಿಕ್ಕಿತು. ಗಂಗಾ ಮಾತೆಯ ಆಶೀರ್ವಾದವನ್ನು ಪಡೆದ ಕಾರಣ, ಮನಸ್ಸಿಗೆ ಅಪಾರ ಶಾಂತಿ ಮತ್ತು ತೃಪ್ತಿ ಸಿಕ್ಕಿದೆ. ಎಲ್ಲಾ ದೇಶವಾಸಿಗಳ ಸಂತೋಷ, ಸಮೃದ್ಧಿ, ಆರೋಗ್ಯ ಮತ್ತು ಯೋಗಕ್ಷೇಮಕ್ಕಾಗಿ ಪ್ರಾರ್ಥಿಸಿಕೊಂಡೆ ಎಂದು ಅವರು ಎಕ್ಸ್‌ನಲ್ಲಿ ಬರೆದಿದ್ದಾರೆ.

ಬಿಜೆಪಿಗೆ ದೆಹಲಿ ಗದ್ದುಗೆ

ದೆಹಲಿ ಚುನಾವಣೆ ಎಕ್ಸಿಟ್ ಪೋಲ್ ಫಲಿತಾಂಶ

- ಮ್ಯಾಟ್ರಿಜ್ ಎಕ್ಸಿಟ್ ಪೋಲ್ – 32–37 (ಎಎಪಿ), 35–40 (ಬಿಜೆಪಿ), 0–1 (ಕಾಂಗ್ರೆಸ್)
- ಪೀಪಲ್ಸ್ ಪಲ್ಸ್ ಸಮೀಕ್ಷೆ – 10– 19 (ಎಎಪಿ), 50–60 (ಬಿಜೆಪಿ)
- ಜೆವಿಸಿ ಸಮೀಕ್ಷೆ 32–37 (ಎಎಪಿ), 35– 40 (ಬಿಜೆಪಿ), 0–1 (ಕಾಂಗ್ರೆಸ್)
- ಪೀಪಲ್ಸ್ ಇನ್‌ಸೈಟ್ 25–29 (ಎಎಪಿ), 40–44 (ಬಿಜೆಪಿ) 1 (ಕಾಂಗ್ರೆಸ್)
- ಚಾಣಕ್ಯ ಸ್ಟ್ರಾಟೆಜಿ 25–28 (ಎಎಪಿ), 39–44 (ಬಿಜೆಪಿ), 2–3 (ಕಾಂಗ್ರೆಸ್)
- ಪಿ ಮಾರ್ಕ್ ಸಮೀಕ್ಷೆ 21–31 (ಎಎಪಿ), 39–49 (ಬಿಜೆಪಿ), 0–1 (ಕಾಂಗ್ರೆಸ್)
- ಪೋಲ್ ಡೈರಿ ಸಮೀಕ್ಷೆ 18–25 (ಎಎಪಿ), 42– 50 (ಬಿಜೆಪಿ), 0–2 (ಕಾಂಗ್ರೆಸ್)
- ಡಿವಿ ರಿಸರ್ಚ್ ಸಮೀಕ್ಷೆ 26–34 (ಎಎಪಿ), 36–44 (ಬಿಜೆಪಿ)
- ವೀ ಪ್ರಿಸೈಡ್ ಸಮೀಕ್ಷೆ 46–52 (ಎಎಪಿ), 18–23 (ಬಿಜೆಪಿ) 0–1 (ಕಾಂಗ್ರೆಸ್)
- ಮೈಂಡ್ ಬ್ರಿಂಕ್ ಸಮೀಕ್ಷೆ 44–49 (ಎಎಪಿ), 21– 25 (ಬಿಜೆಪಿ), 0–1 (ಕಾಂಗ್ರೆಸ್)

ಚಿಕ್ಕಬಳ್ಳಾಪುರದಲ್ಲಿ ಫೆ.8 ರಂದು ಭಾರತ–ಶ್ರೀಲಂಕಾ ಕ್ರಿಕೆಟ್ ಮ್ಯಾಚ್

ಚಿಕ್ಕಬಳ್ಳಾಪುರ: ಮುದ್ದೇನಹಳ್ಳಿಯ ಶ್ರೀ ಸತ್ಯಸಾಯಿ ಗ್ರಾಮದಲ್ಲಿ ಭಾರತ ಮತ್ತು ಶ್ರೀಲಂಕಾ ನಡುವೆ ಫೆ.8ರಂದು ಕ್ರಿಕೆಟ್ ಪಂದ್ಯಾವಳಿ ನಡೆಯಲಿದೆ. ಶ್ರೀ ಮಧುಸೂದನ ಸಾಯಿ ಅವರು ಆಯೋಜಿಸುತ್ತಿರುವ 'ಒನ್ ವರ್ಲ್ಡ್ ಒನ್ ಫ್ಯಾಮಿಲಿ' ಕ್ರಿಕೆಟ್ ಪಂದ್ಯವನ್ನು ಭಾರತೀಯ ಕ್ರಿಕೆಟ್ ದಂತಕತೆ ಸುನಿಲ್ ಗವಾಸ್ಕರ್ ಅವರು ಮುಖ್ಯ ಪಾತ್ರವನ್ನು ವಹಿಸಿ ಸಂಘಟಿಸುತ್ತಿದ್ದಾರೆ.

ಭಾರತದ ಕ್ರಿಕೆಟ್ ದಿಗ್ಗಜರಾದ ಇರ್ಫಾನ್ ಪಠಾಣ್, ಯೂಸುಫ್ ಪಠಾಣ್, ವೆಂಕಟೇಶ್ ಪ್ರಸಾದ್ ಹಾಗೂ ಶ್ರೀಲಂಕಾದ ದಿಗ್ಗಜರಾದ ಅರವಿಂದ ಡಿ ಸಿಲ್ವಾ, ಮುತ್ತಯ್ಯ ಮುರಳೀಧರನ್, ಟಿಎಂ ದಿಲ್ಶಾನ್ ಕ್ರಿಕೆಟ್ ಆಡಲಿದ್ದಾರೆ.

2025ರ ಒಂದು ವಿಶ್ವ ಒಂದು ಕುಟುಂಬ ಕಪ್‌ನಲ್ಲಿ 'ಜಗತ್ತೇ ಒಂದು ಕುಟುಂಬ' (ವಸುಧೈವ ಕುಟುಂಬಕಂ) ಎಂದು ಕೆತ್ತಲಾಗಿದೆ. ಮುದ್ದೇನಹಳ್ಳಿಯ ಸತ್ಯಸಾಯಿ ಗ್ರಾಮದಲ್ಲಿ ಬಾಲಕರಿಗಾಗಿ ಗವಾಸ್ಕರ್–ವಿಶ್ವನಾಥ್ ಕ್ರಿಕೆಟ್ ಅಕಾಡೆಮಿಯನ್ನು ಸ್ಥಾಪಿಸಲಾಗುವುದು ಎಂದು ಸದ್ಗುರು ಶ್ರೀ ಮಧುಸೂದನ ಸಾಯಿ ಅವರು ಈಗಾಗಲೇ ಘೋಷಿಸಿದ್ದಾರೆ. ಹೆಸರಾಂತ ಕ್ರಿಕೆಟ್ ಆಟಗಾರರು ಕ್ಯಾಂಪಸ್‌ಗೆ ಆಗಮಿಸಿ ತರಬೇತಿ ನೀಡಲಿದ್ದಾರೆ. ಬಾಲಕರನ್ನು ಅರ್ಹತೆಗೆ ಅನುಗುಣವಾಗಿ ಆರಿಸಿ ಯಾವುದೇ ಶುಲ್ಕವಿಲ್ಲದೆ ವಸತಿ ಸಹಿತ ಸಂಪೂರ್ಣ ಉಚಿತವಾಗಿ ಕ್ರಿಕೆಟ್ ಅಕಾಡೆಮಿಯಲ್ಲಿ ತರಬೇತಿಯನ್ನು ನೀಡಲಾಗುತ್ತದೆ. ಅಕಾಡೆಮಿಯ ಹೆಸರಿನಲ್ಲಿ ಆಟಗಾರರನ್ನು ಗೌರವಿಸಲಾಗುವುದು. ಅರ್ಹತೆಯ ಆಧಾರದ ಮೇಲೆ ಮಾತ್ರ ಆಯ್ಕೆ ಮಾಡಲಾಗುತ್ತದೆ. ಅರ್ಹ ಅಭ್ಯರ್ಥಿಗಳಿಗೆ ಯಾವುದೇ ಶುಲ್ಕ ವಿಧಿಸಲಾಗುವುದಿಲ್ಲ ಎಂದು ಮಾನವ ಅಭ್ಯುದಯ ವಿಶ್ವವಿದ್ಯಾಲಯದ ಕುಲಾಧಿಪತಿಗಳಾದ ನರಸಿಂಹಮೂರ್ತಿ ತಿಳಿಸಿದರು.

ರಾಯಚೂರಿನಲ್ಲಿ ರಾಜ್ಯದ ಮೊದಲ ಕ್ಯಾನ್ಸರ್ ಡೇ ಕೇರ್ ಕೀಮೋಥೆರಪಿ ಸೆಂಟರ್ ಆರಂಭ

ರಾಯಚೂರು: ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ಕಾಡುತ್ತಿರುವ ಆರೋಗ್ಯ ಸಮಸ್ಯೆಗಳಲ್ಲಿ ಕ್ಯಾನ್ಸರ್ ಪ್ರಮುಖವಾಗಿದೆ. ಹಿಂದುಳಿದ ಜಿಲ್ಲೆಯಾದ ರಾಯಚೂರಿನಲ್ಲಿ ವರ್ಷದಿಂದ ವರ್ಷಕ್ಕೆ ಕ್ಯಾನ್ಸರ್ ರೋಗಿಗಳ ಸಂಖ್ಯೆ ಹೆಚ್ಚುತ್ತಿರುವುದು ಜನರಲ್ಲಿ ಆತಂಕ ಹೆಚ್ಚಿಸಿದೆ. ಈ ನಿಟ್ಟಿನಲ್ಲಿ ರಾಜ್ಯದ ಮೊದಲ ಸರ್ಕಾರಿ ಕ್ಯಾನ್ಸರ್ ಡೇ ಕೇರ್ ಕೀಮೋಥೆರಪಿ ಯೂನಿಟ್ ಅನ್ನು ರಾಯಚೂರಿನಲ್ಲಿ ಆರಂಭಿಸಲಾಗಿದೆ.

ವಿಶ್ವ ಕ್ಯಾನ್ಸರ್ ದಿನಾಚರಣೆಯ ಹೊತ್ತಿನಲ್ಲಿ ಜಿಲ್ಲೆಯಲ್ಲಿ ಪ್ರತಿ ವರ್ಷ ಕ್ಯಾನ್ಸರ್ ಕಾಯಿಲೆಗೆ ತುತ್ತಾಗುತ್ತಿರುವವರ ಸಂಖ್ಯೆ ಹೆಚ್ಚಾಗುತ್ತಲೇ ಇದೆ. ಪ್ರತಿ ವರ್ಷ ಮೂರು ಸಾವಿರಕ್ಕೂ ಹೆಚ್ಚು ಜನ ಹೊಸದಾಗಿ ಕ್ಯಾನ್ಸರ್ ರೋಗಕ್ಕೆ ತುತ್ತಾಗುತ್ತಿದ್ದಾರೆ. ಆರಂಭದ ಹಂತದಲ್ಲಿ ಚಿಕಿತ್ಸೆ ಪಡೆದವರು ಗುಣಮುಖರಾದರೆ, ಸ್ವಲ್ಪ ನಿರ್ಲಕ್ಷ್ಯ ವಹಿಸಿದವರು ಪ್ರಾಣವನ್ನೇ ಕಳೆದುಕೊಳ್ಳುತ್ತಿದ್ದಾರೆ. ರಾಜ್ಯದಲ್ಲಿ ಕ್ಯಾನ್ಸರ್ ಕಾಯಿಲೆಯಿಂದ ಬಳಲುತ್ತಿರುವವರ ಪೈಕಿ ಬೆಂಗಳೂರು ಮೊದಲ ಸ್ಥಾನದಲ್ಲಿದ್ದರೆ, ರಾಯಚೂರು 9ನೇ ಸ್ಥಾನದಲ್ಲಿದೆ. 2022ರ ಅಂಕಿ ಸಂಖ್ಯೆಯ ಪ್ರಕಾರ ರಾಜ್ಯದಲ್ಲಿ 87,424 ಜನರಿಗೆ ಕ್ಯಾನ್ಸರ್ ಕಾಣಿಸಿಕೊಂಡಿದ್ದರೆ, ರಾಯಚೂರಿನಲ್ಲಿ 2,782 ಜನರಲ್ಲಿ ಕಾಣಿಸಿಕೊಂಡಿತ್ತು. ಇನ್ನೂ ಅದೇ ವರ್ಷ ರಾಜ್ಯದಲ್ಲಿ ಒಟ್ಟು ರೋಗಿಗಳ ಸಂಖ್ಯೆ 2,40,116 ಆಗಿದ್ದರೆ, ರಾಯಚೂರು ಜಿಲ್ಲೆಯಲ್ಲಿ 7,531 ರೋಗಿಗಳು ಇದ್ದರು. ಇನ್ನೂ ಈಗ ಈ ಸಂಖ್ಯೆಯಲ್ಲಿ ಭಾರೀ ಏರಿಕೆಯಾಗಿದ್ದು, ಸರ್ಕಾರದಿಂದ ಅಧಿಕೃತ ಅಂಕಿಸಂಖ್ಯೆ ಹೊರಬರಬೇಕು ಎಂದು ವೈದ್ಯರು ತಿಳಿಸಿದ್ದಾರೆ.

ಕ್ಯಾನ್ಸರ್ ಡೇಕೇರ್ ಸೆಂಟರ್ ಆರಂಭಿಸಿರುವ ಕುರಿತು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಸುರೇಂದ್ರ ಬಾಬು ಮಾತನಾಡಿ, ಹೆಚ್ಚುತ್ತಿರುವ ರೋಗಿಗಳ ಸಂಖ್ಯೆ ಹಿನ್ನೆಲೆ ರಾಯಚೂರಿನ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಓಪೆಕ್ ಆಸ್ಪತ್ರೆಯಲ್ಲಿ ರಾಜ್ಯದಲ್ಲೇ ಮೊದಲ ಕ್ಯಾನ್ಸರ್ ಡೇ ಕೇರ್ ಸೆಂಟರ್ ಆರಂಭಿಸಲಾಗಿದೆ. ಶಸ್ತ್ರಚಿಕಿತ್ಸೆ, ಕಿಮೋಥೆರಫಿ ಸೇರಿ ವಿವಿಧ ರೀತಿಯ ಕ್ಯಾನ್ಸರ್ ಚಿಕಿತ್ಸೆಗಳನ್ನ ನೀಡಲು ಆಸ್ಪತ್ರೆ ಸಜ್ಜಾಗಿದೆ ಎಂದು ಹೇಳಿದರು. ಗುಟ್ಕಾ, ತಂಬಾಕು, ತಂಬಾಕು ಉತ್ಪನ್ನಗಳ ಸೇವನೆಯಿಂದ ಪುರುಷರಲ್ಲಿ ಶೇ.24 ರಷ್ಟು, ಮಹಿಳೆಯರಲ್ಲಿ ಶೇ.15 ರಷ್ಟು ಜನರಿಗೆ ಕ್ಯಾನ್ಸರ್ ಕಾಣಿಸಿಕೊಳ್ಳುತ್ತಿದೆ. ಅಂಕಿ ಸಂಖ್ಯೆಗಳ ಪ್ರಕಾರ ಗ್ರಾಮೀಣ ಭಾಗದ ಜನರೇ ಹೆಚ್ಚು ಸಮಸ್ಯೆಗೆ ಒಳಗಾಗುತ್ತಿದ್ದಾರೆ. ಇನ್ನೂ ಇತ್ತೀಚೆಗೆ ಪುರುಷರಿಗಿಂತ ಮಹಿಳೆಯರಲ್ಲಿ ಹೆಚ್ಚಾಗಿ ಕ್ಯಾನ್ಸರ್ ಕಾಣಿಸಿಕೊಳ್ಳುತ್ತಿದ್ದು, ಸ್ತನ ಹಾಗೂ ಗರ್ಭಕೋಶದ ಕ್ಯಾನ್ಸರ್ ಪ್ರಕರಣಗಳು ಹೆಚ್ಚಾಗಿವೆ ಎಂದರು.

ಮೈಸೂರು ಮಿತ್ರ

ರಾಷ್ಟ್ರೀಯ ಶಿಕ್ಷಣ ನೀತಿ ಹಿಂಪಡೆಯಲು ಕೇಂದ್ರದ ಮೇಲೆ ಒತ್ತಡ ತರೋಣ

ದಕ್ಷಿಣ ರಾಜ್ಯಗಳ ಉನ್ನತ ಶಿಕ್ಷಣ ಸಚಿವರ ಸಮ್ಮೇಳನದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಘೋಷಣೆ



ದಕ್ಷಿಣ ರಾಜ್ಯಗಳ ಉನ್ನತ ಶಿಕ್ಷಣ ಸಚಿವರ ಸಮ್ಮೇಳನದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿದರು.

ಬೆಂಗಳೂರು, ಫೆ. 5(ಕೆಎಂಶಿ)–ಕೇಂದ್ರ ಸರ್ಕಾರ ಹಾಗೂ ಯುಜಿಸಿ (ವಿಶ್ವವಿದ್ಯಾಲಯ ಧನಸಹಾಯ ಆಯೋಗ) ಮೇಲೆ ಒತ್ತಡ ತಂದು ಅನೇಕ ಲೋಪದೋಷ ಹೊಂದಿರುವ ರಾಷ್ಟ್ರೀಯ ಶಿಕ್ಷಣ ನೀತಿ ಹಿಂಪಡೆಯಲು ಎಲ್ಲರೂ ಸೇರಿ ಆಗ್ರಹಿಸಬೇಕು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ.

ದಕ್ಷಿಣ ರಾಜ್ಯಗಳ ಉನ್ನತ ಶಿಕ್ಷಣ ಸಚಿವರ ಸಮ್ಮೇಳನದಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ಜಾರಿಗೆ ತಂದ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಸಾಕಷ್ಟು ಲೋಪಗಳಿದ್ದವು, ಕರ್ನಾಟಕ ಸರ್ಕಾರ ಧೈರ್ಯದಿಂದ ಒಂದಷ್ಟು ತಿದ್ದುಪಡಿ ಮಾಡುವ ತೀರ್ಮಾನ ತೆಗೆದುಕೊಂಡಿದೆ ಎಂದರು.

ಸಮ್ಮೇಳನದಿಂದ ಹೊರ ಹೊಮ್ಮುವ ವಿಚಾರಗಳು ಕೇಂದ್ರ ಸರ್ಕಾರಕ್ಕೆ ಮುಟ್ಟಬೇಕು, ಕರ್ನಾಟಕ ಸೇರಿದಂತೆ ದಕ್ಷಿಣ ಭಾರತದ ಎಲ್ಲಾ ರಾಜ್ಯಗಳ ಶೈಕ್ಷಣಿಕ ಗುಣಮಟ್ಟ ಅತ್ಯುತ್ತಮವಾಗಿದ್ದು, ಸೌಲಭ್ಯ ಕೊಡುವುದರಲ್ಲೂ ಮುಂದಿದ್ದೇವೆ. ಕಳೆದ 30 ವರ್ಷಗಳ ಹಿಂದೆಯೇ ಉತ್ತರ ಭಾರತದ ವಿದ್ಯಾರ್ಥಿಗಳು ಉತ್ತಮ ಶಿಕ್ಷಣ ಪಡೆಯಲು ದಕ್ಷಿಣ ಭಾರತ ರಾಜ್ಯಗಳಿಗೆ ವಲಸೆ ಬರುತ್ತಿದ್ದುದ್ದನ್ನು ಗಮನಿಸಿದ್ದೇನೆ.

ಕರ್ನಾಟಕದಲ್ಲಿ ಸುಮಾರು 70ಕ್ಕೂ ಹೆಚ್ಚು ವೈದ್ಯಕೀಯ ಕಾಲೇಜುಗಳು, 250ಕ್ಕೂ ಹೆಚ್ಚು ಎಂಜಿನಿಯರಿಂಗ್ ಕಾಲೇಜುಗಳಿವೆ. ತಮಿಳುನಾಡು, ಕೇರಳ, ತೆಲಂಗಾಣ, ಆಂಧ್ರಪ್ರದೇಶಗಳೂ ಹೆಚ್ಚು ಕಾಲೇಜುಗಳನ್ನು ಹೊಂದಿವೆ. ಆದರೆ ನಮ್ಮ ಶಿಕ್ಷಣ ನೀತಿಗಳನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟಕ್ಕೆ ತೆಗೆದುಕೊಂಡು ಹೋಗಲು ಸಾಧ್ಯವಾಗುತ್ತಿಲ್ಲ ಎಂಬುದೇ ದೊಡ್ಡ ಪ್ರಶ್ನೆಯಾಗಿ ಕಾಡುತ್ತಿದೆ.

ನಮ್ಮ ಗಣತಂತ್ರ ವ್ಯವಸ್ಥೆ ವಿನೂತನವಾದುದು. ಸಂವಿಧಾನ ಹಲವು ಹಕ್ಕುಗಳನ್ನು ನೀಡಿದೆ. ಭಾಷೆಗಳ ವಿಚಾರದಲ್ಲಿಯೂ ನಾವು ವೈವಿಧ್ಯತೆ ಹೊಂದಿದ್ದೇವೆ. ನಾವು ಜಾಗತಿಕ ಮಟ್ಟದಲ್ಲಿ ಸ್ಪರ್ಧಿಸಬೇಕಿದೆ.

ಈ ಕಾರಣಕ್ಕಾಗಿ ವ್ಯವಸ್ಥೆಯನ್ನು ನಾವುಗಳೆಲ್ಲ ಸೇರಿ ಬದಲಾಯಿಸಬೇಕಿದೆ. ಕಳೆದ 30 ವರ್ಷಗಳಲ್ಲಿ ಇಡೀ ಶಿಕ್ಷಣ ವ್ಯವಸ್ಥೆಯೇ ಬದಲಾಗಿದೆ. ಜೊತೆಗೆ ಸಾಕಷ್ಟು ಬದಲಾವಣೆಗಳನ್ನೂ ನಾವು ನೋಡಿದ್ದೇವೆ. ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಬೆರಗು ಹುಟ್ಟಿಸಿದೆ. ಯುವ ಜನತೆಗೆ ಅವಕಾಶ ಸೃಷ್ಟಿಸುವುದು ನಮ್ಮೆಲ್ಲರ ಗುರಿಯಾಗಬೇಕು.

ಬೆಂಗಳೂರು, ಚೆನ್ನೈ, ಹೈದರಾಬಾದ್ ತಾಂತ್ರಿಕ ಪರಿಣತರ ಸೃಷ್ಟಿಯಲ್ಲಿ ಮುಂಚೂಣಿಯಲ್ಲಿವೆ, ದಕ್ಷಿಣ ಭಾರತದ ರಾಜ್ಯಗಳಿಗೆ ಸರಿಸಮಾನವಾಗಿ ಯಾರೂ ನಿಲ್ಲಲು ಸಾಧ್ಯವಿಲ್ಲ, ರಾಜ್ಯಗಳು ತಮ್ಮದೇ ಆದ ಶಕ್ತಿಗಳನ್ನು ಹೊಂದಿವೆ.

ನಮ್ಮ ದೇಶ ಶಿಕ್ಷಣ ವಿಚಾರದಲ್ಲಿ ಮಹತ್ತರ ಸಾಧನೆ ಮಾಡಿದೆ. ಕೆಲಸ ಮಾಡಲು, ಕಲಿಯಲು, ದುಡಿಯಲು ಪ್ರಸಕ್ತವಾಗಿವೆ. ಹಿಂದಿನವರು ಶಿಕ್ಷಣ ಕ್ಷೇತ್ರಗಳಿಗೆ ಹಾಕಿಕೊಟ್ಟಿರುವ ಗುಣಮಟ್ಟದ ಅಡಿಪಾಯ ಕಾಪಾಡಬೇಕು.

ಜೊತೆಗೂಡುವುದು ಆರಂಭ, ಜೊತೆಗೂಡಿ ಆಲೋಚಿಸುವುದು ಪ್ರಗತಿ, ಜೊತೆಗೂಡಿ ಕೆಲಸ ಮಾಡುವುದು ಯಶಸ್ಸು ಶಿಕ್ಷಣ ಕ್ಷೇತ್ರದ ಯುವಜನತೆ ಭವಿಷ್ಯ ಉತ್ತಮವಾಗಿರಬೇಕು ಎಂಬ ಕಾರಣಕ್ಕೆ ನಾವೆಲ್ಲ ಇಲ್ಲಿ ಸೇರಿದ್ದೇವೆ ಮತ್ತು ಗುಣಮಟ್ಟದ ಶಿಕ್ಷಣ ಪರ ದನಿ ಎತ್ತಲು ಒಂದುಗೂಡಿದ್ದೇವೆ ಎಂದು ಹೇಳಿದರು.

ಶಿಕ್ಷಣ ಕ್ಷೇತ್ರದಲ್ಲಿನ ಅನಾನುಕೂಲತೆಗಳ ಬಗ್ಗೆ ತಿಳಿದಿದೆ, ಕರ್ನಾಟಕ ಹಾಗೂ ತೆಲಂಗಾಣಕ್ಕೆ ಹೋಲಿಸಿದಲ್ಲಿ ಮಹಾರಾಷ್ಟ್ರ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಪ್ರತ್ಯೇಕ ಮಾದರಿ ಹೊಂದಿದೆ, ಕೇಂದ್ರ ಹಾಗೂ ರಾಜ್ಯಗಳಲ್ಲಿ ಬೇರೆ ಬೇರೆ ರಾಜಕೀಯ ಪಕ್ಷಗಳು ಅಧಿಕಾರದಲ್ಲಿದ್ದಾಗ ಕುಲಪತಿ ಹಾಗೂ ಉಪಕುಲಪತಿಗಳ ವಿಚಾರದಲ್ಲಿ ತೀರ್ಮಾನ ಮಾಡುವುದು ಕಷ್ಟವಾಗುತ್ತದೆ. ಆದರೂ ನಿಭಾಯಿಸುತ್ತಿದ್ದೇವೆ ಎಂದರು

ಸುಧಾರಣೆ ಅವಶ್ಯ

"ವಿಶ್ವವಿದ್ಯಾನಿಲಯಗಳ ಆಡಳಿತ ವಿಚಾರದಲ್ಲೂ ಸಾಕಷ್ಟು ಸುಧಾರಣೆ ಮಾಡಬೇಕಾಗಿದೆ. ಕುಲಪತಿಗಳ ನೇಮಕ ಸೇರಿದಂತೆ ಹಲವು ವಿಷಯಗಳು ನಮ್ಮ ಮುಂದಿವೆ. ಕುಲಪತಿಗಳು ಹಾಗೂ ಶೈಕ್ಷಣಿಕ ಸಿಬ್ಬಂದಿಗಳ ನೇಮಕಾತಿಗೆ ಕನಿಷ್ಠ ಮಾನದಂಡ, ಅರ್ಹತೆಗಳನ್ನು ನಿಗದಿ ಮಾಡಬೇಕಿದೆ. ಎಲ್ಲಕ್ಕಿಂತ ಮುಖ್ಯವಾಗಿ ಉನ್ನತ ಶಿಕ್ಷಣ ವ್ಯವಸ್ಥೆ ಗಟ್ಟಿಯಾಗಬೇಕಿದೆ, ಅನೇಕ ದೇಶಗಳ ವಿಶ್ವವಿದ್ಯಾನಿಲಯಗಳಲ್ಲಿ ಭಾರತೀಯರು ಉತ್ತಮ ಸ್ಥಾನಗಳನ್ನು ಅಲಂಕರಿಸಿದ್ದಾರೆ, ಜಾಗತಿಕ ಮಟ್ಟಕ್ಕೆ ನಮ್ಮ ಶಿಕ್ಷಣ ವ್ಯವಸ್ಥೆ ಬೆಳೆಯಲು ಅನೇಕ ತಜ್ಞರ ಸಲಹೆ ಉಪಯುಕ್ತವಾಗುತ್ತವೆ. –ಡಿ.ಕೆ.ಶಿವಕುಮಾರ್

ಸವಿತಾ ಸಮಾಜ ಸಂಘಟಿತವಾಗಿ ಮುಖ್ಯವಾಹಿನಿಗೆ ಬರಬೇಕು

ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಸಲಹೆ



ಮೈಸೂರು ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಕಿರುರಂಗಮಂದಿರದಲ್ಲಿ ಹಮ್ಮಿಕೊಂಡಿದ್ದ ಸವಿತಾ ಮಹರ್ಷಿ ಜಯಂತಿ ಕಾರ್ಯಕ್ರಮವನ್ನು ಎಂಎಲ್‌ಸಿ ಸಿ.ಎನ್.ಮಂಜೇಗೌಡ ಉದ್ಘಾಟಿಸಿದರು.

ಮೈಸೂರು, ಫೆ.5– ಸವಿತಾ ಸಮಾಜಕ್ಕೆ ಎರಡು ಸಾವಿರ ವರ್ಷಗಳ ಇತಿಹಾಸ ವಿದೆ. ಈ ಸಮಾಜವನ್ನು ಸೂರ್ಯ ವಂಶ ಎಂದು ಕರೆಯುತ್ತಾರೆ. ಸವಿತಾ ಸಮಾಜವು ಸಂಘಟಿತವಾಗುವ ಮೂಲಕ ಸಮಾಜದ ಮುಖ್ಯವಾಹಿನಿಗೆ ಬರಬೇಕು ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಸಲಹೆ ನೀಡಿದರು.

ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಹಮ್ಮಿಕೊಂಡಿದ್ದ ಸವಿತಾ ಮಹರ್ಷಿ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಮಾಜವು ಶಿಕ್ಷಣಕ್ಕೆ ಒತ್ತು ನೀಡಬೇಕು. ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕವಾಗಿ ಈ ಸಮುದಾಯ ಮತ್ತಷ್ಟು ಸದೃಢವಾಗಬೇಕಿದೆ ಎಂದು ಹೇಳಿದರು.

ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಮಾತನಾಡಿ, ಸವಿತಾ ಮಹರ್ಷಿ ಇಡೀ ಸಮಾಜದ ಕಣ್ಣು. ಅವರ ಆದರ್ಶಗಳು ನಮಗೆ ಮುಖ್ಯ. ಇಂದಿನ ಸಮಾಜದಲ್ಲಿ ಸುಂದರವಾಗಿ ಕಾಣಿಸಲು ಸವಿತಾ ಸಮಾಜದವರ ಪಾತ್ರ ಮಹತ್ವವಾಗಿದೆ ಎಂದರು.

ಮಹಾರಾಣಿ ಮಹಿಳಾ ಕಲಾ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಕೆ.ಎಸ್.ರಾಮ್‌ಪ್ರಸಾದ್ ಮಾತನಾಡಿ, ಪ್ರಪಂಚದಲ್ಲಿ ಎಲ್ಲಾ ಧರ್ಮಗಳಿಗೆ, ಜಾತಿಯವರಿಗೆ ಬೇಕಾಗಿರುವಂತವರು ಸೂರ್ಯದೇವನೊಬ್ಬನೆ. ದೇಶದಲ್ಲಿ ಶುಭಕಾರ್ಯಗಳಿಗೆ ನಿಂತವರು ಸವಿತಾ ಮಹರ್ಷಿಯವರು. ಸವಿತಾ ಸಮಾಜದವರು ತಮ್ಮ ವೃತ್ತಿಯ ಬಗ್ಗೆ ಕೀಳರಿಮೆಪಡಬಾರದು ಎಂದರು.

ಸವಿತಾ ಮಹರ್ಷಿ ಸೂರ್ಯನಿಗೆ ಮೊದಲು ಕೇಶವಿನ್ಯಾಸವನ್ನು ಮಾಡಿದರು. ಸವಿತಾ ಸಮಾಜದವರು ಒಂದಾಗಬೇಕು. ಸವಿತಾ ಮಹರ್ಷಿಯವರನ್ನು ಇಡೀ ಬ್ರಹ್ಮಾಂಡದಲ್ಲಿ ಪ್ರಮುಖರಾಗಿದ್ದು ಇವರನ್ನು ಸವಿತಾ ಸಮಾಜದ ಪ್ರತಿಯೊಬ್ಬರು ನೆನಪಿಟ್ಟುಕೊಳ್ಳಬೇಕು ಎಂದರು. ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೈಸೂರು ವಿಭಾಗದ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ ಹಾಜರಿದ್ದರು.

ಕೇರ್ಗಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಎಚ್.ಮಹದೇವ ಆಯ್ಕೆ



ಕೇರ್ಗಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಕಾಂಗ್ರೆಸ್ ಬೆಂಬಲಿತ ಎಚ್.ಮಹದೇವ ಅವರನ್ನು ಮುಡಾ ಮಾಜಿ ಅಧ್ಯಕ್ಷ ಕೆ.ಮರೀಗೌಡ ಆತ್ಮೀಯವಾಗಿ ಅಭಿನಂದಿಸಿದರು.

ಮೈಸೂರು, ಫೆ.5– ತಾಲೂಕಿನ ಜಯಪುರ ಹೋಬಳಿಯ ಕೇರ್ಗಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ಎಚ್.ಮಹದೇವ, ಉಪಾಧ್ಯಕ್ಷರಾಗಿ ಬಡಗಲಹುಂಡಿ ಬಸಮ್ಮ ಆಯ್ಕೆಯಾದರು. ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆಗೆ ಮಂಗಳವಾರ ಚುನಾವಣೆ ನಡೆಯಿತು. ಜನವರಿ 24ರಂದು 12 ನಿರ್ದೇಶಕರ ಆಯ್ಕೆಗಾಗಿ ಚುನಾವಣೆ ನಡೆದಿತ್ತು. ನೂತನ ನಿರ್ದೇಶಕರಾಗಿ ಎಂ.ಕೆಂಚಪ್ಪ, ಎಸ್.ಸಿದ್ದೇಗೌಡ, ಹೊಂಬೇಗೌಡ, ಎಚ್.ಮಹದೇವ, ಬಸಮ್ಮ, ಪುಟ್ಟಸ್ವಾಮಿಗೌಡ, ಎಂ.ಜವರೇಗೌಡ, ಕುಮಾರ್, ಬಸವರಾಜು, ಗೋಳನಾಯಕ, ಚಿಕ್ಕತಿಮ್ಮಯ್ಯ, ಗೌರಮ್ಮ ಚುನಾವಣೆಯಲ್ಲಿ ಗೆದ್ದು ನಿರ್ದೇಶಕರಾಗಿ ಆಯ್ಕೆಯಾಗಿದ್ದರು. ನೂತನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರನ್ನು ಮುಡಾ ಮಾಜಿ ಅಧ್ಯಕ್ಷ ಕೆ.ಮರೀಗೌಡ ಮತ್ತು ಸಂಘದ ನಿರ್ದೇಶಕರು ಅಭಿನಂದಿಸಿದರು.


ಕುವೆಂಪುನಗರ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಎಲ್.ಅರುಣ್ ಅವರಿಗೆ ಸನ್ಮಾನ...



ಮೈಸೂರಿನ ಕನ್ನೇಗೌಡನಕೊಪ್ಪಲಿನ ಶ್ರೀ ಚಾಮುಂಡೇಶ್ವರಿ ಅಮ್ಮನವರ 35ನೇ ವರ್ಷದ ಕುಂಭಾಭಿಷೇಕ ಮಹೋತ್ಸವದಲ್ಲಿ ಕುವೆಂಪುನಗರ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಎಲ್.ಅರುಣ್ ಅವರನ್ನು ಸನ್ಮಾನಿಸಲಾಯಿತು. ದೇವಸ್ಥಾನದ ಸಮಿತಿ ಧರ್ಮದರ್ಶಿ ನಿಂಗಪ್ಪ, ಅಧ್ಯಕ್ಷ ಗಿರೀಶ್ ಡಿ.ಗೌಡ, ಉಪಾಧ್ಯಕ್ಷರಾದ ವಿಕ್ರಾಂತ್ ಪಿ.ದೇವೇಗೌಡ, ಕಾರ್ಯದರ್ಶಿ ಮಲ್ಲೇಗೌಡ, ಸಹ ಕಾರ್ಯದರ್ಶಿ ಬಿ.ಲಕ್ಷ್ಮಣ್, ಖಜಾಂಚಿ ವಿ.ರಾಜು, ಮುಖಂಡರಾದ ಎಸ್.ಬಾಲು, ನಾಗೇಗೌಡ ಸಣ್ಣಪ್ಪ, ನಾಗರಾಜು ಇನ್ನಿತರರಿದ್ದರು.

ಬಿಟ್ ಕಾಯಿನ್ ಕೇಸ್: ಮಹಮದ್ ನಲಪಾಡ್‌ಗೆ ಎಸ್‌ಐಟಿ ನೋಟಿಸ್

ಬೆಂಗಳೂರು: ಬಿಟ್ ಕಾಯಿನ್ ಕೇಸ್‌ನಲ್ಲಿ ಯುವ ಕಾಂಗ್ರೆಸ್ ಅಧ್ಯಕ್ಷ ಮಹಮದ್ ನಲಪಾಡ್ ಅವರಿಗೆ ವಿಚಾರಣೆಗೆ ಹಾಜರಾಗುವಂತೆ ಎಸ್‌ಐಟಿ ನೋಟಿಸ್ ನೀಡಿದೆ. ನಲಪಾಡ್ ವಿರುದ್ಧ ಶ್ರೀಕಿ ಜೊತೆಗೆ ಸೇರಿ ಅವ್ಯವಹಾರಕ್ಕೆ ಕೈ ಜೋಡಿಸಿದ ಆರೋಪ ಮಾಡಲಾಗಿದೆ. ಈ ಮೂಲಕ ಬಿಟ್ ಕಾಯಿನ್ ಪ್ರಕರಣದಲ್ಲಿ ನಲಪಾಡ್ ಅವರನ್ನು ಎಸ್‌ಐಟಿ ಆರೋಪಿ ಎಂದು ಪರಿಗಣಿಸಿದ್ದು, ನೋಟಿಸ್ ನೀಡಿದೆ. ಫೆ.7ರಂದು ವಿಚಾರಣೆಗೆ ಹಾಜರಾಗಲು ಎಸ್‌ಐಟಿ ನೋಟಿಸ್‌ನಲ್ಲಿ ಉಲ್ಲೇಖಿಸಿದೆ. ಈ ಹಿಂದೆ ಹೇಳಿಕೆ ದಾಖಲು ಮಾಡಿದ್ದ ಎಸ್‌ಐಟಿ ಅಧಿಕಾರಿಗಳು. ಹೇಳಿಕೆಯ ಬಳಿಕ ಅವರನ್ನು ಆರೋಪಿಯನ್ನಾಗಿಸಿತ್ತು. ಶ್ರೀಕಿ ಜೊತೆಗೆ ಕೋಟ್ಯಾಂತರ ರೂ. ವ್ಯವಹಾರ ಹಿನ್ನೆಲೆಯಲ್ಲಿ ನೋಟಿಸ್ ನೀಡಲಾಗಿದೆ.



ಬೆಂಗಳೂರಿಗೆ ದೆಹಲಿ ದುಸ್ಥಿತಿ ಎದುರಾಗುವುದು ಬೇಡ; ವಿದ್ಯುತ್‌ಚಾಲಿತ ವಾಹನಗಳಿಗಷ್ಟೇ ಅನುಮತಿ ನೀಡಿ

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರಿಗೆ ದಿನೇಶ್ ಗುಂಡೂರಾವ್ ಪತ್ರ



ದಿನೇಶ್ ಗುಂಡೂರಾವ್

ಬೆಂಗಳೂರು, ಫೆ.5– ಬೆಂಗಳೂರಿಗೆ ದೆಹಲಿಯಲ್ಲಿ ನಿರ್ಮಾಣವಾಗಿರುವ ದುಸ್ಥಿತಿ ಎದುರಾಗುವುದು ಬೇಡ. ವಿದ್ಯುತ್ ಚಾಲಿತ ವಾಹನಗಳಿಗೆ ಮಾತ್ರವೇ ಅನುಮತಿ ನೀಡಿ ಎಂದು ಸರ್ಕಾರಕ್ಕೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮನವಿ ಮಾಡಿಕೊಂಡಿದ್ದಾರೆ.

ಈ ಬಗ್ಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರಿಗೆ ಪತ್ರ ಬರೆದಿರುವ ಅವರು, ಸಾಂಪ್ರದಾಯಿಕ ಇಂಧನಗಳಿಂದ ಚಲಿಸುವ ವಾಹನಗಳ ಬಳಕೆಯಿಂದಾಗಿ ವಾಯುಮಾಲಿನ್ಯ ಜಗತ್ತಿನಲ್ಲಿ ಸರ್ವೇ ಸಾಮಾನ್ಯವಾಗಿದ್ದು, ಇದು ಸಾರ್ವಜನಿಕರ ಆರೋಗ್ಯದ ಮೇಲೆ ನೇರ ದುಷ್ಪರಿಣಾಮ ಬೀರುವುದು ಸರ್ವವೇದ್ಯವಾಗಿದೆ. ವಿಶೇಷವಾಗಿ ಬೆಂಗಳೂರಿನಂತಹ ಮಹಾನಗರಗಳಲ್ಲಿ ಇರುವ ಹೆಚ್ಚಿನ ವಾಹನ ಸಂಖ್ಯೆಯಿಂದಾಗಿ ಮಾಲಿನ್ಯದ ಪ್ರಮಾಣವು ಅಗಾಧವಾಗಿದ್ದು ನಗರದ ಜನ ಸಾಂದ್ರತೆಯೂ ಹೆಚ್ಚಾಗಿರುವ ಕಾರಣ ಮಾಲಿನ್ಯ ಹೆಚ್ಚು ಜನರನ್ನು ಬಾಧಿಸುತ್ತದೆ. ಬೆಂಗಳೂರಿನ ಭೌಗೋಳಿಕ ಸ್ಥಿತಿ ಹಾಗೂ ಹವಾಮಾನಗಳು ವಾಯುಮಾಲಿನ್ಯವನ್ನು ಸಂಕೀರ್ಣಗೊಳಿಸುತ್ತವೆ. ದೆಹಲಿಯಂತೆ ವಾಯುಮಾಲಿನ್ಯಕ್ಕಾಗಿ ಬೆಂಗಳೂರು ಸಹ ಕುಖ್ಯಾತಗೊಳ್ಳುವ ಪೂರ್ವದಲ್ಲಿಯೇ ನಾವು ಎಚ್ಚೆತ್ತುಕೊಳ್ಳುವ ಅಗತ್ಯವಿದೆ ಎಂದು ಹೇಳಿದ್ದಾರೆ.

ಪರಿಸರದ ಮೇಲೆ ದೂರಗಾಮಿ ದುಷ್ಪರಿಣಾಮಗಳನ್ನು ಮಿತಿಗೊಳಿಸುವ ನಿಟ್ಟಿನಲ್ಲಿ ವಾಯುಮಾಲಿನ್ಯವನ್ನು ನಿಯಂತ್ರಿಸಲು ನಮ್ಮ ತಲೆಮಾರು ಕ್ರಮ ಕೈಗೊಳ್ಳಲೇಬೇಕಿದ್ದು, ಸರ್ಕಾರ ಈ ಬಗ್ಗೆ ಉತ್ತರದಾಯಿತ್ವವನ್ನು ಕೂಡ ಹೊಂದಿದೆ. ಈ ಹಿನ್ನೆಲೆಯಲ್ಲಿ ಸಾರ್ವಜನಿಕ ಸಾರಿಗೆಯ ಬಳಕೆಯನ್ನು ಹೆಚ್ಚಿಸುವುದು ಅತ್ಯಗತ್ಯವಾಗಿರುತ್ತದೆ. ಆದರೆ, ಇದರ ಜೊತೆಯಲ್ಲೇ ನಗರದಲ್ಲಿ ವಿದ್ಯುತ್ ಚಾಲಿತ ಇವಿ ವಾಹನಗಳ ಸಂಖ್ಯೆಯನ್ನು ಹೆಚ್ಚಿಸುವ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಸಾರಿಗೆ ಮೂಲಸೌಕರ್ಯವನ್ನು ರೂಪಿಸುವಾಗ ಸಾಂಪ್ರದಾಯಿಕ ಇಂಧನಗಳಿಂದ ದೂರ ಸರಿಯುವುದು ತುರ್ತು ಅಗತ್ಯವಾಗಿದೆ.

ಈ ಹಿನ್ನೆಲೆಯಲ್ಲಿ ಭವಿಷ್ಯದಲ್ಲಿ ನಗರದಲ್ಲಿ ಕಾರ್ಯನಿರ್ವಹಿಸುವ ಎಲ್ಲಾ ಆಟೋಗಳು, ಕ್ಯಾಬ್‌ಗಳು, ಟ್ಯಾಕ್ಸಿಗಳು, ಸರಕು ಆಟೋಗಳು, ಘನತ್ಯಾಜ್ಯ ಸಂಗ್ರಹಣೆ ವಾಹನಗಳಿಗೆ ಅನುಮತಿ ನೀಡುವಾಗ ಅವುಗಳು ಇವಿ ವಾಹನಗಳಾಗಿದ್ದಲ್ಲಿ ಮಾತ್ರ ಅನುಮತಿ ನೀಡುವುದು ಸೂಕ್ತ. ಇದಕ್ಕೆ ಪೂರಕವಾಗಿ ಇನ್ನು ಮುಂದೆ ನಗರ ಸಾರಿಗೆ ಬಸ್‌ಗಳನ್ನು ಖರೀದಿಸುವಾಗಲೂ ಸಹ ಎಲೆಕ್ಟ್ರಿಕ್ ಇಂಧನ ಬಳಸುವ ಇವಿ ಬಸ್‌ಗಳನ್ನು ಮಾತ್ರ ಸಾರಿಗೆ ಸೇವೆಗೆ ಬಳಸಿಕೊಳ್ಳುವುದು ಸೂಕ್ತವೆಂಬುದು ಆರೋಗ್ಯ ಇಲಾಖೆಯ ಅಭಿಪ್ರಾಯವಾಗಿದೆ. ಆದ್ದರಿಂದ ಈ ನಿಟ್ಟಿನಲ್ಲಿ ಸೂಕ್ತ ತೀರ್ಮಾನವನ್ನು ಕೈಗೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆಂದು ತಿಳಿಸಿದ್ದಾರೆ.

ಸಚಿವರ ಪತ್ರ ಕುರಿತು ಪ್ರತಿಕ್ರಿಯೆ ನೀಡಿರುವ ರಾಮಲಿಂಗಾ ರೆಡ್ಡಿಯವರು, ನನಗೆ ಪತ್ರ ಬಂದಿದೆ. ಕೆಲವು ಕ್ರಮಗಳ ಕೈಗೊಳ್ಳಲು ಕೇಂದ್ರ ಸರ್ಕಾರದಿಂದ ಅನುಮೋದನೆ ಬೇಕಿದೆ. ಆದರೂ ಕೆಲವು ಕ್ರಮಗಳನ್ನು ಕೈಗೊಳ್ಳಲು ರಾಜ್ಯ ಸರ್ಕಾರಕ್ಕೂ ಅಧಿಕಾರವಿದೆ. ವಾಹನಗಳಿಂದ ಹೊರಸೂಸುವ ಹೊಗೆಯನ್ನು ಕಡಿಮೆ ಮಾಡಲು ಅಗತ್ಯ ಕ್ರಮ ಕೈಗೊಳ್ಳುತ್ತೇವೆ ಎಂದು ಹೇಳಿದರು.

ಮಹಿಳಾ ಸ್ವ–ಸಹಾಯ ಸಂಘಗಳಿಂದ ಪ್ರೋತ್ಸಾಹಧನಕ್ಕೆ ಅರ್ಜಿ ಆಹ್ವಾನ

ಮೈಸೂರು,ಫೆ.5–ಬೋಗಾದಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಡೇ–ನಲ್ಮ್ ಯೋಜನೆಯಡಿ ರಚಿಸಲಾದ ಮಹಿಳಾ ಸ್ವ–ಸಹಾಯ ಸಂಘಗಳಿಗೆ ಹಿಂದಿನ ನೀರಿನ ಶುಲ್ಕ, ಪ್ರಸ್ತುತ ವಾರ್ಷಿಕ ಬೇಡಿಕೆಯ ಹಾಗೂ ಆಸ್ತಿ ತೆರಿಗೆಯನ್ನು ವಸೂಲಿ ಮಾಡಲು ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಡೇ–ನಲ್ಮ್ ರೀತ್ಯಾ ಆಸ್ತಿ ತೆರಿಗೆ ಮತ್ತು ನೀರಿನ ತೆರಿಗೆ ವಸೂಲಿ ಮಾಡಲು ಪ್ರೋತ್ಸಾಹಧನ ನೀಡಲಾಗುವುದು. ಅರ್ಹ ಆಸಕ್ತ ಮಹಿಳಾ ಸ್ವ–ಸಹಾಯ ಗುಂಪುಗಳು ಫೆ.25ರಂದು ಸಂಜೆ 4 ಗಂಟೆಯೊಳಗೆ ಕಚೇರಿಗೆ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಯನ್ನು ಕಚೇರಿ ವೇಳೆಯಲ್ಲಿ ಮಾಹಿತಿಯನ್ನು ಪಡೆದುಕೊಳ್ಳಬಹುದಾಗಿದೆ ಎಂದು ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉಸಿರಾಟದ ಸಮಸ್ಯೆಗಳಿಗೆ ಇಂದಿನಿಂದ ಚಿಕಿತ್ಸಾ ಶಿಬಿರ

ಮೈಸೂರು, ಫೆ.5–ಮೈಸೂರಿನ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಫೆ.6ರಿಂದ 28ರವರೆಗೆ ಉಸಿರಾಟದ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಶಿಬಿರದಲ್ಲಿ ಶೀತಜ್ವರ, ನೆಗಡಿ, ಉಬ್ಬಸ, ಕೆಮ್ಮು ತೊಂದರೆ ಬಗ್ಗೆ ತಜ್ಞ ವೈದ್ಯರಿಂದ ತಪಾಸಣೆ, ಸಲಹೆ ಮತ್ತು ಚಿಕಿತ್ಸೆ ನೀಡಲಾಗುವುದು. ಶಿಬಿರವು ಬೆಳಗ್ಗೆ 9ರಿಂದ ಸಂಜೆ 4.30ರವರೆಗೆ ನಡೆಯಲಿದೆ. ಹೆಚ್ಚಿನ ಮಾಹಿತಿಗೆ ಮೊ. 7907256203, ದೂ. 0821–2548231 ಸಂಪರ್ಕಿಸಬಹುದು.

ನಾಳೆ ರಾಜ್ಯಾದ್ಯಂತ ಜೆಪಿ ನಟನೆಯ 'ಭಗೀರಥ' ಚಲನಚಿತ್ರ ಬಿಡುಗಡೆ



ಮೈಸೂರಿನ ಜಲದರ್ಶಿನಿ ಸರ್ಕಾರಿ ಅತಿಥಿ ಗೃಹದಲ್ಲಿ ಕಾವೇರಿ ಕ್ರಿಯಾ ಸಮಿತಿ ಮತ್ತು ಜೆಪಿ ಅಭಿಮಾನಿ ಬಳಗದ ವತಿಯಿಂದ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಭಗೀರಥ ಚಿತ್ರದ ಪೋಸ್ಟರ್ ಬಿಡುಗಡೆಗೊಳಿಸಲಾಯಿತು.

ಮೈಸೂರು, ಫೆ.5(ಜಿಎ)–ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷರೂ ಆದ ನಟ ಡೇರಿಂಗ್ ಸ್ಟಾರ್ ಎಸ್.ಜಯಪ್ರಕಾಶ್ (ಜೆಪಿ) ನಟಿಸಿರುವ 'ಭಗೀರಥ' ಚಲನಚಿತ್ರ ಫೆ.7ರಂದು ರಾಜ್ಯಾದ್ಯಂತ ಬಿಡುಗಡೆಗೊಳ್ಳಲಿದೆ ಎಂದು ಸಮಿತಿಯ ತೇಜೇಶ್ ಲೋಕೇಶ್ ಗೌಡ ತಿಳಿಸಿದರು.

ಮೈಸೂರಿನ ಜಲದರ್ಶಿನಿ ಸರ್ಕಾರಿ ಅತಿಥಿ ಗೃಹದಲ್ಲಿ ಕಾವೇರಿ ಕ್ರಿಯಾ ಸಮಿತಿ ಮತ್ತು ಜೆಪಿ ಅಭಿಮಾನಿ ಬಳಗದ ವತಿಯಿಂದ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಲ್ಲಿ ಅಂದು ಬೆಳಗ್ಗೆ 10 ಗಂಟೆಗೆ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಿಂದ, ಪ್ರಭಾ ಚಿತ್ರಮಂದಿರವರೆಗೆ ಸ್ಟಾರ್ ಮೆರವಣಿಗೆಯನ್ನು ಏರ್ಪಡಿಸಿದ್ದೇವೆ. ಮೆರವಣಿಗೆಯಲ್ಲಿ ಜೆಪಿ ಅಭಿಮಾನಿಗಳು, ಸ್ನೇಹಿತರು, ಬಂಧು ಮಿತ್ರರು ಪಾಲ್ಗೊಳ್ಳಬೇಕೆಂದು ಕೋರಿದರು.

ಭಗೀರಥ ಪ್ರತಿಯೊಬ್ಬ ಮನುಷ್ಯನಲ್ಲಿ ಇರುವಂತಹ ಸಾಹಸಕತೆ, ಅಸಾಧ್ಯವಾದದನ್ನು ಸಾಧ್ಯವಾಗಿಸುವ ಚಿತ್ರದ ಕಥೆ. ಈ ಸಿನಿಮಾದಲ್ಲಿ ಒಂದು ಸಾಮಾಜಿಕ ಸಂದೇಶ ಇದೆ. ಡಾ.ರಾಜಕುಮಾರ್ ಅವರ ಸಿನಿಮಾಗಳಲ್ಲಿ ಸಾಮಾಜಿಕ ಸಂದೇಶಗಳು ಇರುತ್ತಿದ್ದವೋ, ಅದೇ ಮಾದರಿಯಲ್ಲಿ ಈ ಸಿನಿಮಾದಲ್ಲಿಯೂ ಜೀವನದಲ್ಲಿ ಸಾಧಿಸಬೇಕಾದನ್ನು ಗುರಿಯಾಗಿಟ್ಟುಕೊಂಡು ಸಾಧಿಸಬೇಕು ಎಂಬ ಸಂದೇಶವಿದೆ. ವಿದ್ಯಾರ್ಥಿ ದೆಸೆಯಿಂದ ಹೋರಾಟಗಳನ್ನು ಮಾಡಿಕೊಂಡು ಬಂದಿರುವ ಹಿರಿಯ ಹೋರಾಟಗಾರ ಹಾಗೂ ಕಾವೇರಿ ಕ್ರಿಯಾ ಸಮಿತಿಯ ಅಧ್ಯಕ್ಷ ಎಸ್.ಜಯಪ್ರಕಾಶ್ ಅವರ ಈ ಚಿತ್ರವನ್ನು ನೋಡಲೇಬೇಕು. ಕನ್ನಡ ಸಿನಿಮಾಗಳನ್ನು ನೋಡಿ ಕನ್ನಡ ಕಲಾವಿದರನ್ನು ಬೆಳೆಸಬೇಕು ಎಂದರು. ಸುದ್ದಿಗೋಷ್ಠಿಯಲ್ಲಿ ಸಿಂಧುವಳ್ಳಿ ಶಿವಕುಮಾರ್, ಭಾಗ್ಯಮ್ಮ, ನಾಗರಾಜ್, ಬೋಗಾದಿ ಸಿದ್ದೇಗೌಡ, ಲತಾ ಶಂಕರಿ, ಸುಧಾಮಣಿ, ಪುಷ್ಪಾವತಿ, ವಿನೋದ್‌ಕುಮಾರ್, ಮಂಜುಳಾ, ಕೃಷ್ಣಪ್ಪ, ರವೀಶ್, ಮಹೇಶ್ ಒಂಟಿಕೊಪಲು, ಅಶೋಕ್ ಹನುಮಂತಯ್ಯ, ಪೈ ನಾಗರಾಜು, ಆಟೋ ಶಿವು ಭಗೀರಥ, ವಿಷ್ಣು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ದೇಶ - ವಿದೇಶ

ಅಮೆರಿಕಾದಿಂದ ಗಡಿಪಾರಾಗಿ ತಾಯ್ನಾಡಿಗೆ ಬಂದ ಭಾರತೀಯರು



ಅಮೃತಸರ: ನೂತನ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಸಂದರ್ಭದಿಂದಲೂ ಅಕ್ರಮ ವಲಸಿಗರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುತ್ತಿರುವ ಡೊನಾಲ್ಡ್ ಟ್ರಂಪ್ ಅವರ ಕ್ರಮದಂತೆ ದಾಖಲೆಯಿಲ್ಲದೆ ಅಮೆರಿಕಾದಲ್ಲಿ ವಾಸವಾಗಿದ್ದ ಭಾರತದ 13 ಮಕ್ಕಳು ಸೇರಿದಂತೆ 104 ಅಕ್ರಮ ಭಾರತೀಯ ವಲಸಿಗರು ಇಂದು ಭಾರತದ ಅಮೃತಸರಕ್ಕೆ ಬಂದಿಳಿದಿದ್ದಾರೆ. ಭಾರತೀಯ ಮೂಲದ 104 ಅಕ್ರಮ ವಲಸಿಗರನ್ನು ಹೊತ್ತು ಅಮೆರಿಕಾದ ಟೆಕ್ಸಾಸ್‌ನ ಸ್ಯಾನ್ ಆಂಟೋನಿಯೊ ವಿಮಾನ ನಿಲ್ದಾಣದಿಂದ ಹೊರಟ C-17 ಸೇನಾ ವಿಮಾನವು ಮಧ್ಯಾಹ್ನ 1.59ಕ್ಕೆ ಪಂಜಾಬ್‌ನ ಶ್ರೀ ಗುರು ರಾಮ್‌ದಾಸ್ ಜೀ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂದಿಳಿಯಿತು. ಅಲ್ಲಿ ಜಿಲ್ಲಾಡಳಿತದ ಅಧಿಕಾರಿಗಳು ಸಹ ಹಾಜರಿದ್ದರು. ಇನ್ನು ಅತೀ ಹೆಚ್ಚು ಗಡಿಪಾರುಗೊಂಡವರಲ್ಲಿ 33 ಮಂದಿ ಗುಜರಾತ್, ಪಂಜಾಬ್ 30 ಜನರು ಹಾಗೂ 33 ಜನರು ಹರಿಯಾಣ ರಾಜ್ಯದವರಾಗಿದ್ದರೆ, ಇನ್ನುಳಿದವರು ಮಹಾರಾಷ್ಟ್ರ ಮತ್ತು ಉತ್ತರ ಪ್ರದೇಶದ ತಲಾ ಮೂವರು ನಾಗರಿಕರಿದ್ದಾರೆ ಎನ್ನಲಾಗಿದೆ.

ಸ್ವೀಡನ್ ಶಾಲೆ ಮೇಲೆ ದುಷ್ಕರ್ಮಿಗಳ ದಾಳಿ, 10 ಮಂದಿ ಸಾವು



ಸ್ವೀಡನ್: ಸ್ವೀಡನ್‌ನ ಶಾಲೆಯೊಂದರ ಮೇಲೆ ದುಷ್ಕರ್ಮಿಗಳು ಗುಂಡಿನ ದಾಳಿ ನಡೆಸಿದ್ದು, 10 ಮಂದಿ ಸಾವನ್ನಪ್ಪಿ, ಐವರು ಗಾಯಗೊಂಡಿದ್ದಾರೆ. ದಾಳಿ ನಡೆಸಿದವರು ಯಾರೆಂಬುದು ಇನ್ನೂ ತಿಳಿದುಬಂದಿಲ್ಲ. ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಸುದ್ದಿ ಸಂಸ್ಥೆ ರಾಯ್ಟರ್ಸ್ ಪ್ರಕಾರ ಒರೆಬ್ರೊ ನಗರದ ಶಾಲೆಯ ಮೇಲೆ ದಾಳಿ ನಡೆಸಿದೆ. ದಾಳಿಕೋರ ಮನಬಂದಂತೆ ಗುಂಡು ಹಾರಿಸಿದ್ದಾನೆ. ಸ್ವೀಡನ್‌ನಲ್ಲಿ ಈ ನಗರವನ್ನು ಸುರಕ್ಷಿತ ನಗರವೆಂದೇ ಪರಿಗಣಿಸಲಾಗಿತ್ತು. ಗುಂಡಿನ ದಾಳಿಯಿಂದ ಜನರು ಆಘಾತಕ್ಕೊಳಗಾಗಿದ್ದಾರೆ. ಗುಂಡಿನ ದಾಳಿಯ ನಂತರ ಶಾಲೆಯಲ್ಲಿ ಪೊಲೀಸರು, ಇತರೆ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಸ್ಥಳೀಯರು ಹತ್ತಿರ ಹೋಗದಂತೆ ಮನವಿ ಮಾಡಲಾಗಿದೆ. ಅಲ್ಲದೆ ತನಿಖೆ, ಭದ್ರತೆಗೆ ಸಂಬಂಧಿಸಿದ ಕೆಲಸದಲ್ಲಿ ಹಸ್ತಕ್ಷೇಪ ಮಾಡಬೇಡಿ ಎಂದು ಕೂಡ ಹೇಳಿದ್ದಾರೆ. ಶಸ್ತ್ರಸಜ್ಜಿತ ವ್ಯಕ್ತಿ ಒಬ್ಬನೇ ಈ ಕೆಲಸವನ್ನು ಮಾಡಿದ್ದಾನೆ ಎನ್ನಲಾಗುತ್ತಿದೆ. ಇದರಲ್ಲಿ ಭಯೋತ್ಪಾದಕರ ಕೈವಾಡವಿದ್ದಂತೆ ತೋರುತ್ತಿಲ್ಲ ಎಂದು ಪೊಲೀಸರು ಹೇಳಿದ್ದಾರೆ.

ಉತ್ತರಾಖಂಡದಲ್ಲಿ ಲಿವ್–ಇನ್–ರಿಲೇಷನ್‌ಶಿಪ್ ನೋಂದಣಿ



ಡೆಹ್ರಾಡೂನ್: ಉತ್ತರಾಖಂಡದಲ್ಲಿ ಏಕರೂಪ ನಾಗರಿಕ ಸಂಹಿತೆ(ಯುಸಿಸಿ) ಜಾರಿಗೆ ಬಂದ 10 ದಿನಗಳಲ್ಲಿ ಪೋರ್ಟಲ್‌ನಲ್ಲಿ ಕೇವಲ ಒಂದು ಲಿವ್–ಇನ್–ರಿಲೇಷನ್‌ಶಿಪ್ ನೋಂದಾಯಿಸಲಾಗಿದೆ. ಕಡ್ಡಾಯ ನೋಂದಣಿಗಾಗಿ ಲಿವ್–ಇನ್ ಜೋಡಿಗಳಿಂದ 5 ಅರ್ಜಿಗಳನ್ನು ಸ್ವೀಕರಿಸಲಾಗಿದೆ. ಒಬ್ಬರಿಗೆ ನೋಂದಣಿ ನೀಡಲಾಗಿದೆ ಮತ್ತು ಇತರ ನಾಲ್ವರ ಅರ್ಜಿಯನ್ನು ಪರಿಶೀಲಿಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಜ.27ರಂದು ಬಿಜೆಪಿ ಆಡಳಿತದ ಉತ್ತರಾಖಂಡವು ಸ್ವತಂತ್ರ ಭಾರತದಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿಗೆ ತಂದ ಮೊದಲ ರಾಜ್ಯವಾಯಿತು. ಇದು ಎಲ್ಲಾ ಧರ್ಮಗಳಲ್ಲಿ ಪ್ರತಿ ನಾಗರಿಕರಿಗೂ ಸಮಾನ ಕಾನೂನುಗಳನ್ನು ಉತ್ತೇಜಿಸುತ್ತದೆ. ಆದರೆ ಲಿವ್–ಇನ್ ಸಂಬಂಧಗಳನ್ನು ಕಡ್ಡಾಯವಾಗಿ ನೋಂದಣಿ ಮಾಡಿಸಬೇಕು ಎಂಬ ಯುಸಿಸಿಯ ನಿಬಂಧನೆಯು ಜನರ ಖಾಸಗಿತನದ ಹಕ್ಕನ್ನು ಉಲ್ಲಂಘಿಸುತ್ತದೆ ಎಂದು ಹಲವರು ಟೀಕಿಸಿದ್ದರು. ಆದಾಗ್ಯೂ, ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ, ಲಿವ್–ಇನ್ ಜೋಡಿಗಳ ಕಡ್ಡಾಯ ನೋಂದಣಿಯು ಶ್ರದ್ಧಾ ವಾಲ್ಕರ್ ಅವರ ಕೊಲೆಯಂತಹ ಕ್ರೂರ ಘಟನೆಗಳನ್ನು ತಡೆಯಲು ಸಹಾಯ ಮಾಡುತ್ತದೆ ಎಂದು ಸಮರ್ಥಿಸಿಕೊಂಡಿದ್ದರು.

ಗಾಜಾ ಪಟ್ಟಿ ಸ್ವಾಧೀನಕ್ಕೆ ಮುಂದಾದ ಅಮೆರಿಕ

ವಾಷಿಂಗ್ಟನ್: ಇಸ್ರೇಲ್– ಹಮಾಸ್ ನಡುವಿನ ಕದನ ವಿರಾಮದಲ್ಲಿ ಮಹತ್ವದ ಪಾತ್ರ ವಹಿಸಿದ್ದ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇದೀಗ ಇಸ್ರೇಲ್‌ನ ಗಾಜಾಪಟ್ಟಿಯನ್ನು ಸ್ವಾಧೀನಕ್ಕೆ ಪಡೆಯಲು ಪ್ಲಾನ್ ಮಾಡಿದ್ದಾರೆ. ಅಮೆರಿಕಕ್ಕೆ ಭೇಟಿ ನೀಡಿದ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಜೊತೆಗಿನ ಮಾತುಕತೆ ನಂತರ ಟ್ರಂಪ್ ಈ ಬಗ್ಗೆ ಘೋಷಣೆ ಮಾಡಿರುವುದು ಭಾರಿ ಕುತೂಹಲ ಮೂಡಿಸಿದೆ. ಪುನರಾಭಿವೃದ್ಧಿ ಯೋಜನೆಯಡಿ ಪ್ಯಾಲೆಸ್ತೀನಿಯರನ್ನು ಬೇರೆಡೆ ಪುನರ್ವಸತಿಗೊಳಿಸಿದ ನಂತರ ಅಮೆರಿಕವು ಗಾಜಾವನ್ನು ಸ್ವಾಧೀನಪಡಿಸಿಕೊಳ್ಳುತ್ತದೆ. ಈ ಯೋಜನೆಯು ಎನ್‌ಕ್ಲೇವ್ ಅನ್ನು 'ಮಧ್ಯಪ್ರಾಚ್ಯದ ರಿವೇರಿಯಾ' ಆಗಿ ಪರಿವರ್ತಿಸಲಿದೆ ಎಂದು ಟ್ರಂಪ್ ಹೇಳಿಕೊಂಡಿದ್ದಾರೆ. ಇಸ್ರೇಲ್–ಪ್ಯಾಲೆಸ್ತೀನಿಯನ್ ಸಂಘರ್ಷದ ಬಗ್ಗೆ ದಶಕಗಳ ಕಾಲದ ಯುಎಸ್ ನೀತಿಯನ್ನು ರದ್ದುಗೊಳಿಸಿದ ಆಘಾತಕಾರಿ ಘೋಷಣೆಯ ಬೆನ್ನಲ್ಲೇ ಟ್ರಂಪ್ ಯುನೈಟೆಡ್ ಸ್ಟೇಟ್ಸ್ ಗಾಜಾ ಪಟ್ಟಿಯನ್ನು ಸ್ವಾಧೀನಪಡಿಸಿಕೊಳ್ಳುತ್ತದೆ ಮತ್ತು ನಾವು ಗಾಜಾದೊಂದಿಗೆ ಕೆಲಸ ಮಾಡುತ್ತೇವೆ ಎಂದಿದ್ದಾರೆ. ಗಾಜಾದಲ್ಲಿರುವ ನಾಶವಾದ ಕಟ್ಟಡಗಳನ್ನು ತೆರವುಗೊಳಿಸಿ, ಸ್ಫೋಟಗೊಳ್ಳದ ಅಪಾಯಕಾರಿ ಬಾಂಬ್‌ಗಳನ್ನು ತೆರವುಗೊಳಿಸುವ ಜವಾಬ್ದಾರಿಯನ್ನು ಅಮೆರಿಕದ ಆಡಳಿತವು ವಹಿಸಿಕೊಳ್ಳುತ್ತದೆ ಎಂದಿದ್ದಾರೆ.

40 ಅಡಿ ಆಳದ ಬಾವಿಗೆ ಬಿದ್ದ ಗಂಡನ ರಕ್ಷಿಸಿದ 56 ವರ್ಷದ ಮಹಿಳೆ



ಕೊಚ್ಚಿನ್: ಬಾವಿಗೆ ಬಿದ್ದ ಗಂಡನ ಪ್ರಾಣ ಉಳಿಸಲು ತಾನೂ ಕೂಡ ಬಾವಿಗೆ ಬಿದ್ದು ಕೇರಳದ ಮಹಿಳೆಯೊಬ್ಬರು ಸಾಹಸ ಪ್ರದರ್ಶಿಸಿದ ಘಟನೆ ವರದಿಯಾಗಿದೆ. ಕೇರಳದ ಎರ್ನಾಕುಲಂ ಜಿಲ್ಲೆಯ ಪಿರವೋಮ್ ಗ್ರಾಮದಲ್ಲಿ ಕಾಳುಮೆಣಸು ಕೀಳುವಾಗ ಮನೆಯ ಹಿಂದಿನ ಬಾವಿಗೆ ಬಿದ್ದಿದ್ದ ತನ್ನ ಗಂಡನನ್ನು 56 ವರ್ಷದ ಮಹಿಳೆಯೊಬ್ಬರು ಬಾವಿಗಿಳಿದು ರಕ್ಷಿಸಿದ್ದಾರೆ. 64 ವರ್ಷದ ರಮೇಶ್ ಎಂಬಾತ ಬಳ್ಳಿಗಳಿಂದ ಕರಿಮೆಣಸು ಕೀಳುವಲ್ಲಿ ನಿರತರಾಗಿದ್ದರು. ಈ ವೇಳೆ ಅವರು ನಿಂತಿದ್ದ ಏಣಿ ಜಾರಿ ಬಿದ್ದಿದ್ದು, ಮರ ಬಾವಿಯ ಹತ್ತಿರ ಇದ್ದುದರಿಂದ ರಮೇಶ್ ಬಾವಿಯೊಳಗೆ ಬಿದ್ದಿದ್ದಾರೆ. ಬಾವಿಗೆ ಬೀಳುತ್ತಲೇ ಗಂಡ ರಮೇಶ್ ಕೂಗಿಕೊಂಡಿದ್ದು, ಗಂಡನ ಕೂಗು ಕೇಳಿದ ಪತ್ನಿ ಗಾಬರಿಯಿಂದ ಓಡಿ ಬಂದು ಆತನನ್ನು ರಕ್ಷಿಸಲೇಬೇಕು ಎಂದು ಪಣತೊಟ್ಟು ಕೂಗುತ್ತಾ ಕೂಗುತ್ತಾ, ಪದ್ಮ ನಿಧಾನವಾಗಿ ಮತ್ತು ಎಚ್ಚರಿಕೆಯಿಂದ ಹಗ್ಗವನ್ನು ಬಳಸಿ ಬಾವಿಯೊಳಗೆ ಇಳಿದರು. ಸುಮಾರು 5 ಅಡಿ ನೀರಿದ್ದ ಬಾವಿಯ ತಳವನ್ನು ತಲುಪಿದ ನಂತರ ರಮೇಶ ಅವರನ್ನು ಮೇಲಕ್ಕೆತ್ತಲು ಪ್ರಯತ್ನಿಸಿದ್ದಾರೆ. ಆ ಹೊತ್ತಿಗಾಗಲೇ ಸ್ಥಳೀಯರು ಕೂಡ ಓಡಿ ಬಂದಿದ್ದು, ಕೆಲವೇ ಸಮಯದಲ್ಲಿ ಅಗ್ನಿಶಾಮಕ ದಳ ಆಗಮಿಸಿ ಬಾವಿಯಲ್ಲಿದ್ದ ರಮೇಶ್ ಮತ್ತು ಅವರ ಪತ್ನಿಯ ರಕ್ಷಣೆಗೆ ಕಾರ್ಯಾಚರಣೆ ನಡೆಸಿದ್ದಾರೆ.

ಬಿಟ್ಟಂಗಾಲದಿಂದ ಬೇತ್ರಿವರೆಗೆ ಸಾಗಿದ ಪಾದಯಾತ್ರೆ

'ಕೊಡವಾಮೆ ಬಾಳೋ'ಗೆ ಅಂಬಟ್ಟಿಯಲ್ಲಿ ಕೊಡವ ಮುಸ್ಲಿಂ ಅಸೋಸಿಯೇಷನ್ ಬೆಂಬಲ

ವಿರಾಜಪೇಟೆ, ಫೆ.5– ಕೊಡವ ಜನಾಂಗ ಮತ್ತು ಕೊಡವ ಭಾಷಿಕ ಸಮುದಾಯಗಳ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಅಖಿಲ ಕೊಡವ ಸಮಾಜದ ನೇತೃತ್ವದಲ್ಲಿ ಹಮ್ಮಿಕೊಂಡಿರುವ 'ಕೊಡವಾಮೆ ಬಾಳೋ' ಪಾದಯಾತ್ರೆ 4ನೇ ದಿನವಾದ ಬುಧವಾರ ವಿರಾಜಪೇಟೆಯ ಬಿಟ್ಟಂಗಾಲದಿಂದ ಮೂರ್ನಾಡು ಸಮೀಪದ ಬೇತ್ರಿವರೆಗೆ ಸಾಗಿತು.

ಕುಟ್ಟದಿಂದ ಮಡಿಕೇರಿವರೆಗಿನ ಪಾದಯಾತ್ರೆಯಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಪಾಲ್ಗೊಂಡಿದ್ದ ಕೊಡವ ಮತ್ತು ಕೊಡವ ಭಾಷಿಕ ಸಮುದಾಯಗಳ ಸದಸ್ಯರು ಹೆಜ್ಜೆ ಹಾಕಿದರು. ಕೊಡವ ಸಾಂಪ್ರದಾಯಿಕ ದುಡಿಕೊಟ್ಟ್ ಪಾಟ್, ತಳಿಯ ತಕ್ಕಿ ಬೊಳಕ್, ಚೀನಿ ದುಡಿಯೊಂದಿಗೆ ಪಾದಯಾತ್ರೆ ನಡೆಯಿತು.

ಅಂಬಟ್ಟಿಯಲ್ಲಿ ಮುಸ್ಲಿಮರು, ವಿರಾಜಪೇಟೆ ಕಾವೇರಿ ಕಾಲೇಜು ಬಳಿ ವಿರಾಜಪೇಟೆ ಏಳ್ ಕೇರಿ ಕೊಡವ ಸಂಘ, ಕೊಡವ ಭಾಷಿಕ ಸಮಾಜದಿಂದ ಸ್ವಾಗತಿಸಲಾಯಿತು. ಪಾದಯಾತ್ರೆ ವಿರಾಜಪೇಟೆಗೆ ಆಗಮಿಸಿದಾಗ ಕೊಡವ ಮುಸ್ಲಿಮರ ಪ್ರಾತಿನಿಧಿಕ ಸಂಘಟನೆಯಾದ ಕೊಡವ ಮುಸ್ಲಿಂ ಅಸೋಸಿಯೇಷನ್ ವತಿಯಿಂದ ಪಾದಯಾತ್ರೆ ಬರ ಮಾಡಿಕೊಳ್ಳಲಾಯಿತು.



'ಕೊಡವಾಮೆ ಬಾಳೋ' ಪಾದಯಾತ್ರೆ 4ನೇ ದಿನವಾದ ಬುಧವಾರ ವಿರಾಜಪೇಟೆಯ ಬಿಟ್ಟಂಗಾಲದಿಂದ ಬೇತ್ರಿವರೆಗೆ ಸಾಗಿತು.

ಕೊಡವ ಮುಸ್ಲಿಂ ಅಸೋಸಿಯೇಷನ್ ಅಧ್ಯಕ್ಷ ದುದ್ದಿಯಂಡ ಸೂಫಿ ಹಾಜಿ ನೇತೃತ್ವದ ಕೊಡವ ಮುಸ್ಲಿಮರ ತಂಡ ಪಾದಯಾತ್ರೆಯ ನೇತೃತ್ವ ವಹಿಸಿರುವ ಅಖಿಲ ಕೊಡವ ಸಮಾಜದ ಅಧ್ಯಕ್ಷ ಪರದಂಡ ಸುಬ್ರಮಣಿ ಅವರಿಗೆ ಹೂಗುಚ್ಛ ನೀಡುವ ಮೂಲಕ ಸ್ವಾಗತಿಸಿತು.

ನಮ್ಮ ಜನ್ಮಭೂಮಿ ಕೊಡಗಿನಲ್ಲಿ ಶಾಂತಿ ಸಮಾಧಾನ ಮತ್ತು ಸಹೋದರತೆ ಶಾಶ್ವತವಾಗಿ ನೆಲೆಸಲು ಹಾಗೂ ಕೊಡಗಿನ ಮೂಲ ನಿವಾಸಿಗಳ ಅಸ್ತಿತ್ವಕ್ಕೆ ಸಂಬಂಧಿಸಿದ ಹಕ್ಕೊತ್ತಾಯಕ್ಕಾಗಿ ಸೀಮಿತವಾಗಿ ಕೊಡವ ಮುಸ್ಲಿಂ ಅಸೋಸಿಯೇಷನ್ ಸದಾ ಬೆಂಬಲ ನೀಡುತ್ತದೆ ಎಂದು ಘೋಷಿಸಿದರು.

ಬಿಟ್ಟಂಗಾಲದಿಂದ ವಿರಾಜಪೇಟೆ ಗಡಿಯಾರ ಕಂಬ ಮಾರ್ಗವಾಗಿ ಬೇತ್ರಿಯ ಕಾವೇರಿ ನದಿ ಸೇತುವೆ ಬಳಿ ಆಗಮಿಸಿದ ಪಾದಯಾತ್ರೆಯನ್ನು ಉತ್ತರ ಕೊಡಗಿನ ಕೊಡವ ಮತ್ತು ಕೊಡವ ಭಾಷಿಕ ಸಮುದಾಯದ ಪ್ರಮುಖರು ಸ್ವಾಗತದ ಮೂಲಕ ಬರ ಮಾಡಿಕೊಂಡರು. ಫೆ.2ರಂದು ಕುಟ್ಟದಿಂದ ಆರಂಭಗೊಂಡಿರುವ ಪಾದಯಾತ್ರೆ ಇದೀಗ ಬೇತ್ರಿ ಸಮೀಪದ ನೆಲ್ಲಿಮಾನಿಗೆ ತಲುಪುವ ಮೂಲಕ ಒಟ್ಟು 48 ಕಿ.ಮೀ. ದೂರ ಕ್ರಮಿಸಿದೆ. ಕುಟ್ಟದಿಂದ ಮಡಿಕೇರಿವರೆಗಿನ 'ಕೊಡವಾಮೆ ಬಾಳೋ' ಪಾದಯಾತ್ರೆ ಒಟ್ಟು 82 ಕಿ.ಮೀ ಸಾಗಲಿದ್ದು, ಫೆ.7ರಂದು ಮಡಿಕೇರಿಯ ಕೊಡವ ಸಮಾಜ ಮಂದ್‌ನಲ್ಲಿ ಸಮಾಗಮವಾಗುವ ಮೂಲಕ ಜನಪ್ರತಿನಿಧಿಗಳು ಮತ್ತು ಸರ್ಕಾರಕ್ಕೆ ತಮ್ಮ ಬೇಡಿಕೆ ಈಡೇರಿಕೆಗೆ ಮನವಿ ಸಲ್ಲಿಸಲಾಗುವುದು.

ವಿರಾಜಪೇಟೆಯಲ್ಲಿ ಭವ್ಯ ಸ್ವಾಗತ



ವಿರಾಜಪೇಟೆಯಲ್ಲಿ ಪುರಸಭೆ ಅಧ್ಯಕ್ಷೆ ದೇಚಮ್ಮ ಕಾಳಪ್ಪ ಹಾಗೂ ಸದಸ್ಯರು, ಬೆಪ್ಪುನಾಡು ಕೊಡವ ಸಮಾಜದ ಕಡಂಗಮೂರುರು, ಕಾಕೋಟು ಪರಂಬು, ನಾಲ್ಕೇರಿ ಬೇತ್ರಿಯಲ್ಲಿ ಸ್ಥಳೀಯರು ಯಾತ್ರೆಗೆ ಭವ್ಯ ಸ್ವಾಗತಿಸಿದರು.

ಯೂತ್‌ವಿಂಗ್ ಅಧ್ಯಕ್ಷ ಚಮ್ಮಟ್ಟಿರ ಪ್ರವೀಣ್, ಕನೆಕ್ಟಿಂಗ್ ಕೊಡವ ಸಂಸ್ಥೆ ಪ್ರಥ್ವಿ ಮಾದಯ್ಯ ಮತ್ತು ಅಮಿತ್ ಭೀಮಯ್ಯ, ಯುಕೊ ಸಂಘಟನೆ ಕೊಕ್ಕಲೆಮಾಡ ಮಂಜು ಚಿಣ್ಣಪ್ಪ, ಜಬ್ಬೂಮಿ ಸಂಘಟನೆ ರಾಜೀವ್ ಬೋಪಯ್ಯ, ಮಲ್ಲಪನೆರ ವಿನು, ಚಾಮೇರ ದಿನೇಶ್, ಅಪಡೆರಂಡ ಯಶವಂತ್, ಮಾಳೇಟಿರ ಶ್ರೀನಿವಾಸ್ ನೇತೃತ್ವದಲ್ಲಿ ಪಾದಯಾತ್ರೆ ಸಾಗಿತು. ಬಳಿಕ ಪಾದಯಾತ್ರೆ ಮೂರ್ನಾಡು ಕಡೆ ತರಳಿತು.

ಕೊಡವ ಸಮಾಜದ ಅಧ್ಯಕ್ಷ ಕುಂಬೇರ ಮನು ಕುಮಾರ್, ಉಪಾಧ್ಯಕ್ಷ ಕುಯಿಮಂಡ ಕಿರಣ್, ಕೊಡವ ಕೇರಿ ಒಕ್ಕೂಟಗಳ ಅಧ್ಯಕ್ಷ ಮೇಕೇರಿರ ರವಿ ಪೆಮ್ಮಯ್ಯ, ಕೊಡವ ಸಮಾಜದ ಪೊಮ್ಮಕ್ಕಡ ಕೂಟದ ಅಧ್ಯಕ್ಷೆ ಕಾಂತಿ ಸತೀಶ್, ಕೊಡಗು ದಂತ ವೈದ್ಯಕೀಯ ಕಾಲೇಜಿನ ಡೀನ್ ಸುನಿಲ್ ಮುದ್ದಯ್ಯ, ಅಂತಾರಾಷ್ಟ್ರೀಯ ರಗ್ಬಿ ಮಾಜಿ ಆಟಗಾರ ಮಾದಂಡ ತಿಮ್ಮಯ್ಯ, ಪಟ್ಟಡ ರಂಜಿಪೂಣಚ್ಚ, ರಾಜ್ಯ ಭಾಷ ಅಲ್ಪಸಂಖ್ಯಾತರ ಅಯೋಗದ ಸಂಚಾಲಕ ಪ್ರತಿಕ್ ಪೊನ್ನಣ್ಣ ಅಚ್ಚಪಂಡ ಮಹೇಶ್ ಗಣಪತಿ, ನಿಸರ್ಗ ಲೇಔಟ್ ಕೆ.ಕೆ.ಗ್ರೂಪ್ಸ್ ಡಾ.ಸೋನಿಯ ಮಂದಪ್ಪ, ಡಾ.ಎಂ.ಸಿ.ಕಾರ್ಯಪ್ಪ, ಮಾಜಿ ಸೈನಿಕರ ಸಹಕಾರ ಸಂಘದ ಅಧ್ಯಕ್ಷ ಚಪ್ಪಂಡ ಹರೀಶ್, ಪುರಸಭೆ ಸದಸ್ಯ ಮಹಮದ್ ರಫಿ ಇದ್ದರು.



ವಿರಾಜಪೇಟೆಯ ಐತಿಹಾಸಿಕ ಗಡಿಯಾರ ಗೋಪುರಕ್ಕೆ 111 ವರ್ಷ

ವಿರಾಜಪೇಟೆ, ಫೆ.5– ಕೊಡಗಿನ ಪ್ರಮುಖ ಹೆಗ್ಗುರುತಾದ ವಿರಾಜಪೇಟೆಯ ಐತಿಹಾಸಿಕ ಗಡಿಯಾರ ಗೋಪುರವು ಬುಧವಾರ (ಫೆ.5, 2025) 111 ವರ್ಷಗಳನ್ನು ಪೂರೈಸಿತು.

1911ರಲ್ಲಿ ಬ್ರಿಟಿಷ್ ರಾಜ ಜಾರ್ಜ್‌ರ ಪಟ್ಟಾಭಿಷೇಕದ ದರ್ಬಾರ್ ನೆನಪಿಗಾಗಿ ನಿರ್ಮಿಸಲಾದ ಇದರ ಅಡಿಪಾಯಕ್ಕೆ 1914ರ ಫೆ.5ರಂದು ಅಂದಿನ ಕೊಡಗು ಚೀಫ್ ಕಮಿಷ್ನರ್ ಸರ್ ಹ್ಯೂಗ್‌ಡಾಲೆ ಶಿಲಾನ್ಯಾಸ ನೆರವೇರಿಸಿದ್ದರು. ದೇವಣಗೇರಿ ಗ್ರಾಮದ ಮುಕ್ಕಾಟಿರ ಕುಟುಂಬವು ಇದಕ್ಕಾಗಿ ಭೂಮಿ ದಾನ ಮಾಡಿತು. 1915ರ ಜನವರಿಯಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟ್ ಆಗಿದ್ದ ಆರ್.ಕೆ.ಎಲ್ಲಿಸ್ ಇದರ ಉದ್ಘಾಟನೆ ನೆರವೇರಿಸಿದ್ದರು. ನಂತರ ಇದನ್ನು ಮುಕ್ಕಾಟಿರ ಅಯ್ಯಪ್ಪ ವಿರಾಜಪೇಟೆಯ ಅಂದಿನ ಪುರಸಭೆಗೆ ಹಸ್ತಾಂತರಿಸಿದರು.

1977ರಲ್ಲಿ ಅಂದಿನ ಲೋಕೋಪಯೋಗಿ ಸಚಿವ ಚೆನ್ನಬಸಪ್ಪ ಅವರ ರಸ್ತೆ ಅಗಲೀಕರಣದ ಪ್ರಸ್ತಾಪದಿಂದ ಈ ಗೋಪುರ ನೆಲಸಮಗೊಳ್ಳುವ ಆತಂಕ ಎದುರಿಸಿತು. ಆದರೆ ಸಾರ್ವಜನಿಕರ ವ್ಯಾಪಕ ವಿರೋಧದ ಕಾರಣ ವಿರಾಜಪೇಟೆಯ ಪರಂಪರೆಯ ಸಂಕೇತವಾಗಿ ಈಗ ಸಂರಕ್ಷಿಸಲ್ಪಟ್ಟು ಅಲುಗಾಡದೇ ನಿಂತಿದೆ.

ಚೆಂಬೆ ಬೆಳ್ಳೂರಲ್ಲಿ ವ್ಯಕ್ತಿ ಮೇಲೆ ಕಾಡಾನೆ ದಾಳಿ

ಮಡಿಕೇರಿ, ಫೆ.5– ವ್ಯಕ್ತಿ ಮೇಲೆ ಕಾಡಾನೆ ದಾಳಿ ನಡೆಸಿ ಗಾಯಗೊಳಿಸಿರುವ ಘಟನೆ ವಿರಾಜಪೇಟೆ ತಾಲೂಕಿನ ಚೆಂಬೆಬೆಳ್ಳೂರು ಗ್ರಾಮದಲ್ಲಿ ಬುಧವಾರ ನಡೆದಿದೆ.

ಗ್ರಾಮದ ನಿವಾಸಿ ಚಂಬಂಡ ಜನತ್ ಕುಮಾರ್ ಗಾಯ ಗೊಂಡಿದ್ದು, ಮಡಿಕೇರಿ ಜಿಲ್ಲಾಸ್ಪತ್ರೆಗೆ ದಾಖಲಾಗಿದ್ದಾರೆ. ಜನತ್ ಕುಮಾರ್ ಎಂದಿನಂತೆ ಮುಂಜಾನೆ ತಮ್ಮ ದನದ ಕೊಟ್ಟಿಗೆ ಬಳಿ ತೆರಳಿದ್ದಾರೆ. ಈ ವೇಳೆ ಕಾಡಾನೆ ಏಕಾಏಕಿ ದಾಳಿ ನಡೆಸಿದೆ. ಇದರಿಂದ ಜನತ್ ಕುಮಾರ್‌ಗೆ ಗಾಯಗಳಾಗಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ. ನಂತರ ವಿರಾಜಪೇಟೆ ಸರ್ಕಾರಿ ಆಸ್ಪತ್ರೆ ಯಲ್ಲಿ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಮಡಿಕೇರಿ ಜಿಲ್ಲಾಸ್ಪತ್ರೆಗೆ ದಾಖಲಾಗಿದೆ. ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿ ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ.

ಕೈಮಗ್ಗ ಉತ್ಪನ್ನ ಮಾರಾಟ ಮೇಳಕ್ಕೆ ಚಾಲನೆ...



ಮಡಿಕೇರಿ ಕೊಡವ ಸಮಾಜದ ಪ್ರಾಂಗಣದಲ್ಲಿ ಫೆ.11ರವರೆಗೆ ನಡೆಯುವ ಜಿಲ್ಲಾ ಮಟ್ಟದ ಕೈಮಗ್ಗ ಉತ್ಪನ್ನಗಳ ವಸ್ತುಪ್ರದರ್ಶನ ಮತ್ತು ಮಾರಾಟ ಮೇಳಕ್ಕೆ ಕೊಡಗು ಜಿಲ್ಲಾ ಕೈಗಾರಿಕಾ ಉತ್ಪನ್ನ ಮಾರಾಟ ಸಹಕಾರ ಸಂಘದ ಅಧ್ಯಕ್ಷ ಸಿ.ವಿ.ನಾಗೇಶ್ ಬುಧವಾರ ಚಾಲನೆ ನೀಡಿದರು. ಕೈಮಗ್ಗ ಮತ್ತು ಜವಳಿ ಇಲಾಖೆ ಸಹಾಯಕ ನಿರ್ದೇಶಕ ಜಿ.ಎಸ್. ಗುರುಸ್ವಾಮಿ, ಕೈಗಾರಿಕೆ ಇಲಾಖೆ ಉಪನಿರ್ದೇಶಕ ರಘು, ಪಶುಪಾಲನಾ ಇಲಾಖೆ ಉಪ ನಿರ್ದೇಶಕ ಲಿಂಗರಾಜ ದೊಡ್ಡಮನಿ, ಖಾದಿ ಮಂಡಳಿ ಅಧಿಕಾರಿ ಎಚ್.ಆರ್.ರಾಮಕೃಷ್ಣ ಇದ್ದರು.

ಕೊಡಗು ಹೆಗ್ಗಡೆ ಸಮಾಜದಿಂದ ಸಚಿವರಿಗೆ ಮನವಿ ಸಲ್ಲಿಕೆ



ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ನೇತೃತ್ವದಲ್ಲಿ ಕೊಡಗು ಹೆಗ್ಗಡೆ ಸಮಾಜದ ನಿಂಯೋಗ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಮನವಿ ಸಲ್ಲಿಸಿತು.

ಮಡಿಕೇರಿ: ಕೊಡಗು ಹೆಗ್ಗಡೆ ಸಮಾಜದ ನಿಯೋಗ ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅವರನ್ನು ಭೇಟಿ ಮಾಡಿತು.

ವಿಕಾಸ ಸೌಧದಲ್ಲಿ ಸಚಿವರನ್ನು ಭೇಟಿಯಾದ ನಿಯೋಗ, ಬಿಟ್ಟಂಗಾಲದಲ್ಲಿರುವ ಸಮಾಜದ ಕಟ್ಟಡ ಮುಂದುವರಿದ ಅಭಿವೃದ್ಧಿ ಕಾಮಗಾರಿಗೆ ಅನುದಾನ ನೀಡುವಂತೆ ಮನವಿ ಸಲ್ಲಿಸಿತು.

ಕೊಡಗು ಹೆಗ್ಗಡೆ ಸಮಾಜದ ಅಧ್ಯಕ್ಷ ಪಡಿಞರಂಡ ಅಯ್ಯಪ್ಪ, ಉಪಾಧ್ಯಕ್ಷ ಕೊರಕುಟ್ಟಿರ ಸರಚಂಗಪ್ಪ, ನಿರ್ದೇಶಕ ಕೊರಂಡ ಪ್ರಕಾಶ್ ನಾಣಯ್ಯ, ಪ್ರಮುಖರಾದ ಪಡಿಞರಂಡ ಗಿರೀಶ್, ಕಾಕೇರ ರವಿ ಮುಂತಾದವರು ಹಾಜರಿದ್ದರು.

ಫೆ.15ರಿಂದ ಮಹದೇಶ್ವರಬೆಟ್ಟದಲ್ಲಿ ಪ್ಲಾಸ್ಟಿಕ್ ಬಳಕೆ ಸಂಪೂರ್ಣ ನಿಷೇಧ

ಹನೂರು, ಫೆ.5–ಪ್ರಸಿದ್ಧ ಯಾತ್ರಾ ಕ್ಷೇತ್ರ ಶ್ರೀ ಮಲೆಮಹದೇಶ್ವರಬೆಟ್ಟದಲ್ಲಿ ಫೆ.15 ರಿಂದ ಸಂಪೂರ್ಣವಾಗಿ ಪ್ಲಾಸ್ಟಿಕ್ ಬಳಕೆ ನಿಷೇಧಿಸಲಾಗಿದೆ.



ಎ.ಇ.ರಘು

ಬೆಟ್ಟಕ್ಕೆ ಪಾದಯಾತ್ರೆಮೂಲಕ ಬರುವ ಭಕ್ತರಿಗೆ ತಾಳಬೆಟ್ಟದಿಂದ ಶ್ರೀಕ್ಷೇತ್ರದವರೆಗೂ ಕುಡಿಯುವ ನೀರು ಪೂರೈಸಲಾಗುತ್ತಿದ್ದು, ಯಾವುದೇ ಪ್ಲಾಸ್ಟಿಕ್ ಬಾಟಲ್‌ಗಳನ್ನು ಉಪಯೋಗಿಸದಂತೆ ಮಹದೇಶ್ವರಬೆಟ್ಟದ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರ ಕಾರ್ಯದರ್ಶಿ ಎ.ಇ.ರಘು ತಿಳಿಸಿದ್ದಾರೆ.

ಐದು ದಿನ ಶಿವರಾತ್ರಿ ಜಾತ್ರೆ: ಮಹಾಶಿವರಾತ್ರಿ ಪ್ರಯುಕ್ತ ಶ್ರೀಕ್ಷೇತ್ರದಲ್ಲಿ ನಡೆಯುವ ಐದು ದಿನಗಳ ಜಾತ್ರಾ ಮಹೋತ್ಸವಕ್ಕೆ ಕನಕಪುರ, ಬೆಂಗಳೂರು ಗ್ರಾಮಾಂತರ, ಚನ್ನಪಟ್ಟಣ ಹಾಗೂ ವಿವಿಧ ಜಿಲ್ಲೆಗಳಿಂದ ಲಕ್ಷಾಂತರ ಭಕ್ತರು ಪಾದಯಾತ್ರೆ ಮೂಲಕ ಆಗಮಿಸಲಿದ್ದಾರೆ. ಈಗಾಗಲೇ ಮಹದೇಶ್ವರಬೆಟ್ಟವನ್ನು ಪ್ಲಾಸ್ಟಿಕ್ ಮುಕ್ತ ಎಂದು ಘೋಷಿಸಲಾಗಿದ್ದು, ಇದನ್ನು ಅನುಷ್ಠಾನಕ್ಕೆ ತರುವ ನಿಟ್ಟಿನಲ್ಲಿ ಪ್ರಾಧಿಕಾರದಿಂದ ಅಗತ್ಯ ಕ್ರಮ ಕೈಗೊಳ್ಳಲಾಗಿದೆ.

20 ಟ್ಯಾಂಕ್‌ನಲ್ಲಿ ಕುಡಿಯುವ ನೀರು: ಪಾದಯಾತ್ರಿಗಳು ನೀರಿನ ಬಾಟಲ್‌ಗಳನ್ನು ಉಪಯೋಗಿಸಬಾರದು. ಪ್ರಾಧಿಕಾರದಿಂದಲೇ ತಾಳುಬೆಟ್ಟದಿಂದ ಶ್ರೀಕ್ಷೇತ್ರದವರೆಗೆ 20 ಟ್ಯಾಂಕ್ ಹಾಗೂ ರಂಗಸ್ವಾಮಿ ಒಡ್ಡಿನ ಸಮೀಪ ಶುದ್ಧ ಕುಡಿಯುವ ನೀರಿನ ಘಟಕ ತೆರೆದು ಸಮರ್ಪಕವಾಗಿ ಪೂರೈಸಲಾಗುವುದು. ಈ ನಿಟ್ಟಿನಲ್ಲಿ ಭಕ್ತರು ಪ್ರಾಧಿಕಾರದ ಜೊತೆ ಕೈಜೋಡಿಸಬೇಕು ಎಂದು ಕಾರ್ಯದರ್ಶಿ ಎ.ಇ.ರಘು ಮನವಿ ಮಾಡಿದ್ದಾರೆ.

ಪಾನೀಯ ವಿತರಣೆಗೆ ನಿಬಂಧನೆ: ಭಕ್ತರಿಗೆ ಉಚಿತವಾಗಿ ಹಣ್ಣು ಜ್ಯೂಸ್, ನೀರಿನ ಬಾಟಲ್, ಮಜ್ಜಿಗೆ ನೀಡುವವರು ತಾಳುಬೆಟ್ಟದವರೆಗೆ ಮಾತ್ರ ನೀಡಬೇಕು.ತಾಳುಬೆಟ್ಟದಿಂದ ಮಹದೇಶ್ವರ ಸನ್ನಿಧಿವರೆಗೆ ಎಲ್ಲಿಯೂ ನೀಡಲು ಅವಕಾಶ ನೀಡುವುದಿಲ್ಲ. ಈ ನಿಟ್ಟಿನಲ್ಲಿ ದಾನಿಗಳು, ಸಂಘ–ಸಂಸ್ಥೆಯವರು ಪ್ಲಾಸ್ಟಿಕ್ ಮುಕ್ತ ವಲಯವಾಗಿಸಲು ಸಹಕರಿಸಬೇಕು.

ರಾತ್ರಿ ಪಾದಯಾತ್ರೆಗೆ ನಿರ್ಬಂಧ: ಮಹದೇಶ್ವರಬೆಟ್ಟಕ್ಕೆ ಮಹಾಶಿವರಾತ್ರಿ ಜಾತ್ರಾ ಮಹೋತ್ಸವ ಹಾಗೂ ಇನ್ನಿತರ ಸಂದರ್ಭಗಳಲ್ಲಿ ಬರುವ ಪಾದಯಾತ್ರಿಕರಿಗೆ ಬೆಳಗ್ಗೆ 6 ರಿಂದ ಸಂಜೆ 6 ಗಂಟೆವರೆಗೆ ಮಾತ್ರ ಅವಕಾಶ ನೀಡಲಾಗುವುದು. ಇತ್ತೀಚಿನ ದಿನಗಳಲ್ಲಿ ಪಾದಯಾತ್ರೆ ಮಾರ್ಗದಲ್ಲಿ ಕಾಡುಪ್ರಾಣಿಗಳು ಹೆಚ್ಚು ಕಾಣಿಸಿಕೊಳ್ಳುತ್ತಿವೆ. ಹೀಗಾಗಿ ಭಕ್ತರ ಸುರಕ್ಷತೆ ದೃಷ್ಟಿಯಿಂದ ಸಂಜೆ 6 ರಿಂದ ಬೆಳಗ್ಗೆ 6ರವರೆಗೆ ನಿಷೇಧ ಹೇರಲಾಗಿದೆ ಎಂದು ತಿಳಿಸಿದ್ದಾರೆ.

ಚಾ.ನಗರಕ್ಕೆ ರಾಜ್ಯ ಹಣಕಾಸು ಆಯೋಗ ಭೇಟಿ

• ಡಿಸಿ ಕಚೇರಿಯಲ್ಲಿ ಸಭೆ ನಡೆಸಿದ ಅಧ್ಯಕ್ಷ ಡಾ.ಸಿ.ನಾರಾಯಣಸ್ವಾಮಿ • ಸ್ಥಳೀಯ ಸಂಸ್ಥೆಗಳ ಅನುದಾನ ಮಾಹಿತಿ

ಚಾಮರಾಜನಗರ, ಫೆ.5–ರಾಜ್ಯ ಐದನೇ ಹಣಕಾಸು ಆಯೋಗದ ಅಧ್ಯಕ್ಷ ಡಾ.ಸಿ. ನಾರಾಯಣಸ್ವಾಮಿ ಹಾಗೂ ಸದಸ್ಯರು ಬುಧವಾರ ನಗರಕ್ಕೆ ಭೇಟಿ ನೀಡಿ, ಪಂಚಾಯತ್ ರಾಜ್ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.



ಚಾಮರಾಜನಗರ ಜಿಲ್ಲಾಧಿಕಾರಿ ಕಚೇರಿಯಲ್ಲಿ ರಾಜ್ಯ ಐದನೇ ಹಣಕಾಸು ಆಯೋಗದ ಅಧ್ಯಕ್ಷ ಡಾ.ಸಿ.ನಾರಾಯಣಸ್ವಾಮಿ ನೇತೃತ್ವದಲ್ಲಿ ಸ್ಥಳೀಯ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿಗಳ ಸಭೆ ನಡೆಯಿತು.

> **ಆಸ್ತಿ ತೆರಿಗೆ, ಉದ್ದಿಮೆ ಪರವಾನಗಿ, ಬಾಡಿಗೆ ಆದಾಯ, ಬಳಕೆದಾರರ ಶುಲ್ಕ, ಇನ್ನಿತರ ಸಂಗ್ರಹ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಿ ಸ್ವಂತ ಸಂಪನ್ಮೂಲ ಕ್ರೋಢೀಕರಣಕ್ಕೆ ನಗರ ಸ್ಥಳೀಯ ಸಂಸ್ಥೆಗಳು, ಪಂಚಾಯತ್ ರಾಜ್ ಸಂಸ್ಥೆಗಳು ಹೆಚ್ಚಿನ ಆದ್ಯತೆ ನೀಡಬೇಕು.**
> –ಡಾ.ಸಿ.ನಾರಾಯಣಸ್ವಾಮಿ, 5ನೇ ಹಣಕಾಸು ಆಯೋಗದ ಅಧ್ಯಕ್ಷ

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ರಾಜ್ಯ ಹಣಕಾಸು ಆಯೋಗದ ಅಧ್ಯಕ್ಷ ಡಾ.ಸಿ.ನಾರಾಯಣಸ್ವಾಮಿ, ಸದಸ್ಯರಾದ ಮೊಹಮದ್ ಸನಾವುಲ್ಲಾ, ಆರ್.ಎಸ್. ಪೋಂಡೆ, ಸಮಾಲೋಚಕರಾದ ಎಂ.ಕೆ. ಕೆಂಪೇಗೌಡ, ಸಿ.ಜಿ.ಸುಪ್ರಸನ್ನ, ಅಧ್ಯಕ್ಷರ ಆಪ್ತ ಕಾರ್ಯದರ್ಶಿ ಕೆ.ಯಾಲಕ್ಕಿಗೌಡ, ವಿಶೇಷ ಕರ್ತವ್ಯ ಅಧಿಕಾರಿ ವಹಬ್ ಖಾನ್ ಸಭೆ ನಡೆಸಿದರು.

ಪಂಚಾಯತ್ ರಾಜ್ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಹಣಕಾಸು ಆಯೋಗ ಕಳುಹಿಸಿರುವ ಪ್ರಶ್ನಾವಳಿ ಕುರಿತ ಮಾಹಿತಿ ಪರಿಶೀಲಿಸಲಾಯಿತು. ಪಂಚಾಯಿತಿ ಸಂಸ್ಥೆಗಳ ಸಾಂಸ್ಥಿಕ ರಚನೆ, ಕಾರ್ಯಾಚರಣೆ, ಹುದ್ದೆಗಳು, ಆಯ–ವ್ಯಯ, ವೆಚ್ಚಗಳ ವಿವರ, ರಾಜ್ಯ ಮತ್ತು ಕೇಂದ್ರ ಹಣಕಾಸು ಆಯೋಗದ ಅನುದಾನ, ಹಂಚಿಕೆ, ಬಿಡುಗಡೆ ಕುರಿತ ವಿವರ ಪಡೆದರು.

ಆಡಳಿತ ಸುಧಾರಣೆ, ಮಾಹಿತಿ ತಂತ್ರಜ್ಞಾನ, ರಾಜ್ಯ ಹಣಕಾಸು ಆಯೋಗದ ಪರಿಶೀಲನಾ ಅಂಶಗಳಿಗೆ ಪೂರಕವಾದ ಸಲಹೆ ಪಡೆಯಲಾಯಿತು. ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದಂತೆ ತೆರಿಗೆ ಪಾವತಿ, ಖಾತಾ ಪ್ರತಿ, ದಾಖಲೆಗಳ ತ್ವರಿತವಾಗಿ ನೀಡುವಿಕೆ, ನೀರು ಸರಬರಾಜು, ಒಳಚರಂಡಿ, ಬೀದಿ ದೀಪ, ಘನತ್ಯಾಜ್ಯ ನಿರ್ವಹಣೆ, ಇನ್ನಿತರ ವಿಷಯಗಳಿಗೆ ಸಂಬಂಧಿಸಿದಂತೆ ಚರ್ಚಿಸಿ ಮಾಹಿತಿ ಮತ್ತು ಅಭಿಪ್ರಾಯ ಪಡೆಯಲಾಯಿತು.

ಇದೇ ವೇಳೆ ಭಾಗವಹಿಸಿದ್ದ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ, ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು, ಮೂಲಸೌಕರ್ಯ ಒದಗಿಸಲು ಹೆಚ್ಚು ಅನುದಾನ ನೀಡುವುದು ಸೇರಿದಂತೆ ಇತರೆ ಅಭಿಪ್ರಾಯಗಳನ್ನು ಆಯೋಗದ ಮುಂದೆ ಮಂಡಿಸಿದರು. ಅಧಿಕಾರಿಗಳು ಸಹ ಸಂಸ್ಥೆಗಳಿಗೆ ಅಗತ್ಯವಿರುವ ಹೆಚ್ಚಿನ ಅನುದಾನ ಹಾಗೂ ನೆರವಿನ ಬಗ್ಗೆ ಪ್ರಸ್ತಾಪಿಸಿದರು.

ಸಭೆಯಲ್ಲಿ ಜಿಪಂ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಮೋನಾ ರೋತ್, ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ, ಜಿಪಂ ಉಪ ಕಾರ್ಯದರ್ಶಿ ಪಿ.ಲಕ್ಷ್ಮೀ, ಮುಖ್ಯ ಯೋಜನಾಧಿಕಾರಿ ದೀಪಾ, ಚಾ.ನಗರ ನಗರಸಭೆ ಅಧ್ಯಕ್ಷ ಎಸ್.ಸುರೇಶ್, ಉಪಾಧ್ಯಕ್ಷೆ ಮಮತಾ, ಕೊಳ್ಳೇಗಾಲ ನಗರಸಭೆ ಅಧ್ಯಕ್ಷೆ ಸಿ.ಎನ್.ರೇಖಾ, ಉಪಾಧ್ಯಕ್ಷ ಎ.ಪಿ. ಶಂಕರ್, ಯಳಂದೂರು ಪಪಂ ಅಧ್ಯಕ್ಷೆ ಎಸ್.ಲಕ್ಷ್ಮೀ, ಉಪಾಧ್ಯಕ್ಷೆ ಶಾಂತಮ್ಮ, ಹನೂರು ಪಪಂ ಅಧ್ಯಕ್ಷೆ ಮುಮ್ತಾಜ್ ಭಾನು, ಉಪಾಧ್ಯಕ್ಷ ಆರ್.ಆನಂದ್ ಕುಮಾರ್, ಗ್ರಾಪಂ ಅಧ್ಯಕ್ಷರು, ಉಪಾಧ್ಯಕ್ಷರು, ವಿವಿಧ ಇಲಾಖೆ ಅಧಿಕಾರಿಗಳು, ಪಿಡಿಓಗಳು ಉಪಸ್ಥಿತರಿದ್ದರು.

ಎಂಆರ್‌ಪಿಗಿಂತ ಹೆಚ್ಚಿನ ಹಣ ವಸೂಲಿ, ರೊಚ್ಚಿಗೆದ್ದ ಮದ್ಯಪ್ರಿಯರು

ಬಾರ್ ಮುಂದೆಯೇ ಕೈಯಲ್ಲಿ ಬಾಟಲಿ, ಬಿಲ್ ಹಿಡಿದು ಪ್ರತಿಭಟನೆ



ಯಳಂದೂರು ಪಟ್ಟಣದಲ್ಲಿ ಮದ್ಯಪ್ರಿಯರು ಬಾರ್ ಮುಂದೆಯೇ ಪ್ರತಿಭಟನೆ ನಡೆಸಿದರು.

ಯಳಂದೂರು: ಎಂಆರ್‌ಪಿ ದರದಲ್ಲಿ ಮದ್ಯ ಮಾರಾಟ ಮಾಡದೇ ಹೆಚ್ಚಿನ ಹಣ ವಸೂಲಿ ಮಾಡುತ್ತಿರುವ ಹಿನ್ನೆಲೆ ರೊಚ್ಚಿಗೆದ್ದ ಮದ್ಯಪ್ರಿಯರು ಬಾರ್ ಮುಂದೆಯೇ ಪ್ರತಿಭಟನೆ ನಡೆಸಿದ ಘಟನೆ ಯಳಂದೂರು ಪಟ್ಟಣದಲ್ಲಿ ಮಂಗಳವಾರ ರಾತ್ರಿ ನಡೆದಿದೆ.

ಶ್ರೀರಂಗ ವೈನ್ಸ್ ಶಾಪ್‌ನಲ್ಲಿ ಎಂಆರ್‌ಪಿ ದರಕ್ಕಿಂತ ದುಪ್ಪಟ್ಟು ಹಣ ವಸೂಲಿ ಮಾಡುತ್ತಿದ್ದಾರೆ ಎಂದು ಆರೋಪಿಸಿರುವ ಮದ್ಯಪ್ರಿಯರು. ಹೆಸರಿಗೆ ಎಂಆರ್‌ಪಿ ಬೋರ್ಡ್ ಹಾಕಿದ್ದಾರೆ. ಆದರೆ ಹೆಚ್ಚು ಹಣ ವಸೂಲಿ ಮಾಡುತ್ತಿದ್ದಾರೆ ಎಂದು ವೈನ್ಸ್ ಸ್ಟೋರ್ ಮುಂದೆ ಜಮಾಯಿಸಿ, ರುದ್ರಾವತಾರ ತಾಳಿ ಪ್ರತಿಭಟನೆ ನಡೆಸಿದ್ದಾರೆ.ಕೈಯಲ್ಲಿ ಬಾಟಲಿ ಹಾಗೂ ಬಿಲ್ ಹಿಡಿದು ನಿಂತ ಮದ್ಯಪ್ರಿಯರು ವೈನ್ಸ್ ಸ್ಟೋರ್ ಮಾಲೀಕರಿಗೆ ಹಿಗ್ಗಾಮುಗ್ಗಾ ಕ್ಲಾಸ್ ತೆಗೆದುಕೊಂಡಿದ್ದಾರೆ. ಮದ್ಯಪ್ರಿಯರ ಕೋಪಕ್ಕೆ ಬೆಚ್ಚಿಬಿದ್ದ ಬಾರ್ ಮಾಲೀಕರು, ಸಿಬ್ಬಂದಿ. ಕೊನೆಗೆ ರಕ್ಷಣೆಗೆ ಪೊಲೀಸರ ಮೊರೆ ಹೋಗಿದ್ದಾರೆ. ಸ್ಥಳಕ್ಕೆ ಬಂದ ಪೊಲೀಸರು ಹರಸಾಹಸಪಟ್ಟು ಮನವೊಲಿಸಿದ ಬಳಿಕ ಮದ್ಯಪ್ರಿಯರು ಮನೆಕಡೆ ನಡೆದಿದ್ದಾರೆ.

ಗುಂಬಳ್ಳಿ ಶಿಕ್ಷಕನ ಅಮಾನತು ಖಂಡಿಸಿ ಪೋಷಕರ ಪ್ರತಿಭಟನೆ

ಯಳಂದೂರು, ಫೆ.5–ತಾಲೂಕಿನ ಗುಂಬಳ್ಳಿ ಗ್ರಾಮದ ಪ್ರೌಢಶಾಲೆ ಶಿಕ್ಷಕ ಎಂ.ವೀರಭದ್ರಸ್ವಾಮಿ ಅವರನ್ನು ಅಮಾನತುಗೊಳಿಸಿರುವ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರ ಕ್ರಮ ಖಂಡಿಸಿ ಶಾಲಾ ವಿದ್ಯಾರ್ಥಿಗಳು, ಪೋಷಕರು ಹಾಗೂ ಎಸ್‌ಡಿಎಂಸಿ ಸದಸ್ಯರು ಬುಧವಾರ ಪ್ರತಿಭಟನೆ ನಡೆಸಿದರು.

ಎಸ್‌ಡಿಎಂಸಿ ಅಧ್ಯಕ್ಷ ರಾಜಣ್ಣ ಮಾತನಾಡಿ, ಡಿ.28ರಂದು ಗುಂಬಳ್ಳಿ ಪ್ರೌಢಶಾಲೆಯಿಂದ ಮಂಗಳೂರು ಹಾಗೂ ಉಡುಪಿ ಜಿಲ್ಲೆಗಳಿಗೆ ಶೈಕ್ಷಣಿಕ ಪ್ರವಾಸ ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಬಸ್ ಚಾಲಕನಿಗೆ ಆರೋಗ್ಯ ಹದಗೆಟ್ಟಿದೆ. ಇದರಿಂದ ಚಾಲನೆ ಗೊತ್ತಿದ್ದ ಶಿಕ್ಷಕ ಎಂ.ವೀರಭದ್ರಸ್ವಾಮಿ ಬಸ್ ಅನ್ನು ರಸ್ತೆಬದಿಗೆ ನಿಲ್ಲಿಸಿದ್ದಾರೆ. ನಂತರ ಚಾಲಕನಿಗೆ ಅಲ್ಲೇ ಚಿಕಿತ್ಸೆ ನೀಡಿ, ಆತ ಚೇತರಿಸಿಕೊಂಡ ಬಳಿಕ ಅಲ್ಲಿಂದ ಮಕ್ಕಳನ್ನು ಸುರಕ್ಷಿತವಾಗಿ ಕರೆದುಕೊಂಡು ಬರಲಾಗಿದೆ. ನಮ್ಮ ಮಕ್ಕಳನ್ನು ದೊಡ್ಡ ದುರಂತದಿಂದ ಇವರು ಪಾರು ಮಾಡಿ ಕರೆದುಕೊಂಡು ಬಂದಿದ್ದರೂ ಇವರನ್ನು ಏಕಾಏಕಿ ಅಮಾನತು ಮಾಡಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಎಂ.ವೀರಭದ್ರಸ್ವಾಮಿ ಪ್ರಾಮಾಣಿಕ ಶಿಕ್ಷಕರಾಗಿದ್ದು, ಶಾಲೆ ಅಭಿವೃದ್ಧಿಗೆ, ಮಕ್ಕಳ ಶಿಕ್ಷಣ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ಇವರ ಪಾತ್ರ ಮಹತ್ವದ್ದಾಗಿದೆ ಶಾಲೆಯಲ್ಲಿ 149 ವಿದ್ಯಾರ್ಥಿಗಳಿದ್ದು, ಇದರಲ್ಲಿ ಎಸ್‌ಎಸ್‌ಎಲ್‌ಸಿಯಲ್ಲಿ 61 ವಿದ್ಯಾರ್ಥಿಗಳಿದ್ದಾರೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆ ಹತ್ತಿರವಿದ್ದು, ಇಂತಹ ಸಂದರ್ಭದಲ್ಲಿ ಶಿಕ್ಷಕರನ್ನು ಅಮಾನತುಗೊಳಿಸಿರುವ ಕ್ರಮ ಖಂಡನೀಯ. ಕೂಡಲೇ ಅಮಾನತು ವಾಪಸ್ ಪಡೆಯಬೇಕು. ಮಕ್ಕಳು ಸಹ ಅವರು ಬಾರದೆ ನಾವು ಶಾಲೆಗೆ ಹೋಗುವುದಿಲ್ಲ ಎಂದು ಹಠ ಮಾಡುತ್ತಿದ್ದಾರೆ. ಈ ಬಗ್ಗೆ ಶಿಕ್ಷಣ ಇಲಾಖೆ ಉಪನಿರ್ದೇಶಕರು ಅಮಾನತಿನ ಆದೇಶ ಹಿಂಪಡೆಯುವತನಕ ನಾವು ಪ್ರತಿಭಟನೆ ಹಿಂಪಡೆಯುವುದಿಲ್ಲ ಎಂದು ಎಚ್ಚರಿಸಿದರು.

ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ ಪೋಷಕರೊಂದಿಗೆ ಪ್ರತಿಭಟನೆ ನಡೆಸಿದರು. ಸ್ಥಳಕ್ಕೆ ಕ್ಷೇತ್ರ ಶಿಕ್ಷಣಾಧಿಕಾರಿ ಮಾರಯ್ಯ ಹಾಗೂ ಕ್ಷೇತ್ರ ಶಿಕ್ಷಣ ಸಮನ್ವಯಾಧಿಕಾರಿ ನಂಜುಂಡಯ್ಯ ಭೇಟಿ ನೀಡಿ, ನೀವು ತರಗತಿಗೆ ತೆರಳಿ ಎಂದು ಮನವೊಲಿಸುವ ಪ್ರಯತ್ನಿಸಿದರು. ಆದರೆ, ವಿದ್ಯಾರ್ಥಿಗಳು ಶಿಕ್ಷಕ ವೀರಭದ್ರಸ್ವಾಮಿ ಅವರ ಅಮಾನತು ವಾಪಸ್ ಪಡೆಯುವವರೆಗೂ ನಾವು ತರಗತಿಗೆ ಹೋಗುವುದಿಲ್ಲ ಎಂದು ಪಟ್ಟುಹಿಡಿದು ಶಾಲಾ ಮುಂಭಾಗದಲ್ಲೇ ಧರಣಿ ನಡೆಸುತ್ತಿದ್ದಾರೆ. ಪ್ರತಿಭಟನೆಯಲ್ಲಿ ಎಸ್‌ಡಿಎಂಸಿ ಸದಸ್ಯರಾದ ಅಂಬಿಕಾ, ಪದ್ಮಾ, ಶಿವಣ್ಣ, ಸುಧಾ, ಸುಮಾ, ಸುಂದ್ರಮ್ಮ, ಚಿಕ್ಕಣ್ಣ, ಸಂತೋಷ್, ಮುಖಂಡರಾದ ನಂಜಯ್ಯ, ಗ್ರಾಪಂ ಸದಸ್ಯ ಚಂದ್ರಶೇಖರ್, ವೆಂಕಟೇಶ್ ಅನೇಕರು ಇದ್ದರು.



ಗುಂಬಳ್ಳಿ ಸರ್ಕಾರಿ ಪ್ರೌಢಶಾಲೆ ಶಿಕ್ಷಕ ಎಂ.ವೀರಭದ್ರಸ್ವಾಮಿ ಅವರನ್ನು ಅಮಾನತುಗೊಳಿಸಿರುವ ಕ್ರಮ ಖಂಡಿಸಿ ಪೋಷಕರು ಹಾಗೂ ಎಸ್‌ಡಿಎಂಸಿ ಸದಸ್ಯರು ಪ್ರತಿಭಟನೆ ನಡೆಸಿದರು.

ವಿಪ್ ಉಲ್ಲಂಘಿಸಿ ಕಾಂಗ್ರೆಸ್ ಸೇರಿದ ಬಿಜೆಪಿ ಐವರು ಪುರಸಭಾ ಸದಸ್ಯರ ಅನರ್ಹ ಹಿನ್ನೆಲೆ

ಗುಂಡ್ಲುಪೇಟೆಯಲ್ಲಿ ಬಿಜೆಪಿ ಮುಖಂಡರ ವಿಜಯೋತ್ಸವ



ಗುಂಡ್ಲುಪೇಟೆಯಲ್ಲಿ ಡಿಸಿ ಕ್ರಮ ಬೆಂಬಲಿಸಿ ಬಿಜೆಪಿ ಪುರಸಭೆ ಸದಸ್ಯರು ವಿಜಯೋತ್ಸವ ಆಚರಿಸಿದರು.

ಗುಂಡ್ಲುಪೇಟೆ: ಪಕ್ಷದ ವಿಪ್ ಉಲ್ಲಂಘಿಸಿ ಕಾಂಗ್ರೆಸ್ ಸೇರಿದ ಬಿಜೆಪಿ ಐವರು ಪುರಸಭಾ ಸದಸ್ಯರನ್ನು ಅನರ್ಹತೆಗೊಳಿಸಿ ಜಿಲ್ಲಾಧಿಕಾರಿ ಆದೇಶಿಸಿರುವುದನ್ನು ಸ್ವಾಗತಿಸಿ ಬಿಜೆಪಿ ಪುರಸಭೆ ಸದಸ್ಯರು ಮತ್ತು ಮುಖಂಡರು ಪಟ್ಟಣದಲ್ಲಿ ಪಟಾಕಿ ಸಿಡಿಸಿ ವಿಜಯೋತ್ಸವ ಆಚರಿಸಿದರು.

ಪಟ್ಟಣದ ಹಳೇ ಬಸ್ ನಿಲ್ದಾಣದಿಂದ ಪುರಸಭೆ ಕಚೇರಿವರೆಗೆ ಮೆರವಣಿಗೆ ನಡೆಸಿದ ಸದಸ್ಯರು ಹಾಗೂ ಮುಖಂಡರು ಪಕ್ಷಾಂತರಿಗಳಿಗೆ ತಕ್ಕ ಶಿಕ್ಷೆಯಾಗಿದೆ ಎಂದು ಸಂಭ್ರಮಿಸಿದರು.

ಮೆರವಣಿಗೆ ನೇತೃತ್ವ ವಹಿಸಿದ್ದ ಪುರಸಭೆ ಮಾಜಿ ಅಧ್ಯಕ್ಷ ಹಾಗೂ ಹಾಲಿ ಸದಸ್ಯ ಪಿ.ಗಿರೀಶ್ ಮಾತನಾಡಿ, ಹಿಂದೆ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದಾಗ ಮಾಜಿ ಶಾಸಕರ ಬಳಿ ಸುತ್ತಾಡುತ್ತ ಎಲ್ಲಾ ಸವಲತ್ತುಗಳನ್ನು ಪಡೆದುಕೊಂಡಿದ್ದ ಐವರು ಸದಸ್ಯರು ಪಕ್ಷ ದ್ರೋಹ ಮಾಡಿ ಕಾಂಗ್ರೆಸ್ ಸೇರ್ಪಡೆಗೊಂಡಿದ್ದರು. ಈ ಐವರನ್ನು ಸೆಳೆಯುವ ಮೂಲಕ ಕಾಂಗ್ರೆಸ್ ವಾಮಮಾರ್ಗದಿಂದ ಪುರಸಭಾ ಅಧಿಕಾರ ಹಿಡಿದಿತ್ತು. ಪಕ್ಷಾಂತರಿಗಳ ಸದಸ್ಯತ್ವ ರದ್ದುಗೊಳ್ಳುವವರೆಗೂ ಬಿಡುವುದಿಲ್ಲ ಎಂದು ನಾನು ಅಂದು ಮಾಡಿದ್ದ ಶಪಥ ಈಗ ಈಡೇರಿದೆ ಎಂದರು.

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿದ್ದು, ಶಾಸಕರು ಹಾಗೂ ಸಂಸದರು ನಮ್ಮ ಪಕ್ಷದವರೇ ಆಗಿರುವುದರಿಂದ ಯಾವುದೇ ತೊಂದರೆ ಆಗುವುದಿಲ್ಲ ಎಂದು ಎದೆಯುಬ್ಬಿಸಿ ಓಡಾಡುತ್ತಿದ್ದವರು ಜಿಲ್ಲಾಧಿಕಾರಿ ಆದೇಶ ಬಂದ ನಂತರ ತಣ್ಣಗಾಗಿದ್ದಾರೆ. ಪಕ್ಷಾಂತರ ನಿಷೇಧ ಕಾಯ್ದೆಯಡಿ ಜಿಲ್ಲಾಧಿಕಾರಿ ಪಕ್ಷಾಂತರಿ ಸದಸ್ಯರನ್ನು ಅನರ್ಹಗೊಳಿಸಿ ದಿಟ್ಟ ನಿರ್ಧಾರ ಕೈಗೊಂಡಿದ್ದಾರೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಪುರಸಭೆ ಸದಸ್ಯರಾದ ನಾಗೇಶ್, ಕುಮಾರ್, ಮಹದೇವಮ್ಮ, ದೀಪಿಕಾ ಕಣ್ಣನ್, ಪಟ್ಟಾಭಿ, ಬಿಜೆಪಿ ಮಾಜಿ ಮಂಡಲಾಧ್ಯಕ್ಷ ಎನ್.ಮಲ್ಲೇಶ್, ಮುಖಂಡರಾದ ವೆಂಕಟೇಶ್, ಬಿ.ಎಂ. ಸುರೇಶ್ ಹಾಗೂ ಇತರರು ಇದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

WANTED
TOUR EXECUTIVE
Experience: 2+ years in sales
Education: Any degree
Job location: Mysore
Fluency in English and kannada.
Attractive salary +incentives
SEND CV
hr@sbittravels.com

ತಕ್ಷಣ ಸಹಾಯಕರು ಬೇಕಾಗಿದ್ದಾರೆ
ವಯೋಮಿತಿ ಇಲ್ಲ
ಎಸ್.ಎಸ್.ಎಲ್.ಸಿ. ಪಾಸ್ ಅಥವಾ ಫೇಲ್
ದ್ವಿಚಕ್ರ ವಾಹನ ಅಗತ್ಯ
9449923880

ಹೊಸ ಮನೆ ಮಾರಾಟಕ್ಕಿದೆ
3 BHK, 30x40
EAST FACE
MUDA APPROVED
Near St. Joseph School, Yelwala, Mysore
Mob: 8217851695

ನವಜೀವನ ಆಶ್ರಮ, ಮೈಸೂರು.
ನೀವು ನೋಡಿಕೊಳ್ಳಲಾಗದ ವಯಸ್ಸಾದವರನ್ನು, ಮಾನಸಿಕ ಮಹಿಳೆಯರನ್ನು ಮತ್ತು ಪುರುಷರನ್ನು, ನಾವು ನೋಡಿಕೊಂಡು ಆರೈಕೆ ಮಾಡುತ್ತೇವೆ. ಸಂಪರ್ಕಿಸಿ:
9008423390

ವಧು ಬೇಕಾಗಿದೆ
HP ಪೆಟ್ರೋಲ್ ಬಂಕ್‌ನಲ್ಲಿ ಕ್ಯಾಶಿಯರ್ ಆಗಿರುವ 32 ವರ್ಷದ ಗಂಗಾಮತ ಜಾತಿಯ ವರನಿಗೆ ಗಂಗಾಮತ ಅಥವಾ ST ವಧು ಬೇಕಾಗಿದೆ.
ಭರತ್ 88923 47234

HOUSE FOR SALE
40x60 Ground floor at Saraswathipuram, Ramakrishnagar, Kuvempunagar, Vijayanagar,
40x60 G&F Floor at Ramakrishna Nagar, Bogadi
30x40 Duplex at Srirampura
7353430309

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್
ಸಂಬಳ: 11000/–ರಿಂದ 13000/–(12 ಗಂಟೆಗೆ)
ವಯಸ್ಸು: 25 ರಿಂದ 60 ರವರೆಗೆ, ಸ್ಥಳ: ಹೆಬ್ಬಾಳ್, ಸಿದ್ದಾರ್ಥ ಲೇಔಟ್,
7483638113

MAIN DOOR & POOJA DOOR
WOOD CARVING
@ Dattagalli Mysuru
kettane
TRADITIONAL WOOD CARVING
99007 99056

30x40 WEST FACE SITE FOR SALE
Divakar Layout
Sharada Public School back, Kergalli Road.
Call: 9880273834

SITE FOR SALE
30x40 E/F site
Near New RT Nagara.
Mob: 9740088990

SITE FOR SALE
30x40 Srirampura ring Road Mysore
8050345574

HOUSE FOR SALE
20X30 Ground Floor 2Bed Room, 1st Floor, 2 Bedroom, 10x20 one hall (Roof top) 2 Solar System 2 hot Water Geyser tank. MUDA approved. Sathagalli Rajkumar Road, Behind Registar Office Mysuru. Rs.58 Lakshs (Nego)
9845116744

ಬಸವ ಮಾರ್ಗ ವ್ಯಸನ ಮುಕ್ತ ಕೇಂದ್ರ, ಮೈಸೂರು
21 ದಿನಗಳ ಕುಡಿತ ಬಿಡಿಸುವ ಮತ್ತು ಯೋಗ ಶಿಬಿರ
ಫೆ. 9 ರಿಂದ ಪ್ರಾರಂಭ
ಶುಲ್ಕ: 6 + 6 ಸಾವಿರ ರೂ.
9742010101, 9742919191, 8803344999

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

ಬೇಕಾಗಿದ್ದಾರೆ
ಕಲೆಕ್ಷನ್ ಏಜೆನ್ಸಿಗೆ ಫೀಲ್ಡ್ ಎಕ್ಸಿಕ್ಯೂಟಿವ್ (ಹುಡುಗರು) ಮತ್ತು ಟೆಲಿಕಾಲರ್‌ಗಳು (ಮೈಸೂರು ಸಿಟಿ, ಶ್ರೀರಂಗಪಟ್ಟಣ, ಚಾಮರಾಜನಗರ, ಕೊಳ್ಳೇಗಾಲ, ಪಾಂಡವಪುರ, ನಂಜನಗೂಡು, ಹುಲ್ಲಹಳ್ಳಿ, ಮಂಡ್ಯ, ಮಳವಳ್ಳಿ, ಮದ್ದೂರು) ಕೆಲಸಕ್ಕೆ ಬೇಕಾಗಿದ್ದಾರೆ
990/1, Tank bund Road, Ittigegudu, (Near Excibition Road, Mysuru-10
9972044442 ರಾಘವೇಂದ್ರ
8861357697 ಕವಿತಾ

HOUSE FOR SALE
40X60 East face
Vijayanagara 1st, MUDA allotted, 3Brooms One with bath tub,Hall, Dining hall,specious Kitchen, Puja rm,Car garage,Solar, 24 hours Kavery water, Front 40ft,back 80ft Dble road, near to Union Bank
Genuine Buyers can contact owner
Price 3.15 Cr Slight negotiable
7676753350 9945515326

ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್‌ನಲ್ಲಿ ಹೆಲ್ಪರ್ ಮತ್ತು ಕ್ಯಾಷಿಯರ್ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
ಸ್ಥಳ: ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ, ಮೈಸೂರು ನಗರ
6364748485

3BHK HOUSE FOR SALE
20X30
Duplex Corner House Dattagalli
9632020620

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

ಉದ್ಯೋಗ ಅವಕಾಶ
ಬಿಂದ ದಿನದೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI / PF ನೊಂದಿಗೆ ಊಟ, ವಸತಿಯೊಂದಿಗೆ ಸಂಬಳ – ರೂ. 15200 – 86,100
7337645977, 7892046990

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8861401315

ಬೇಕಾಗಿದ್ದಾರೆ
ಬನ್ನೂರು ರಸ್ತೆಯಲ್ಲಿರುವ ಪ್ರಖ್ಯಾತ ಕಂಪನಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. 12 ಗಂಟೆಯ ಡ್ಯೂಟಿ. ESI & PF ದೊರೆಯುತ್ತದೆ.
ವೇತನ: 12 ಸಾವಿರಗಳು ಮಾಸಿಕ.
ಆಸಕ್ತರು ಕರೆ ಮಾಡಿ.
Mob: 7892441955

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020

New House For Sale
20x30, GF & FF 100% Vaasthu Sump 12,000 litres, full teak with spray polish, foundation 3 feet from road level.
Rate Rs.70,00,000 Slightly Negotiable Srinidhi Layout, Opposite to Sai Garments.
9902650282

ಬೇಕಾಗಿದ್ದಾರೆ
ಶೂಟಿಂಗ್ ಮಹದೇವಪುರ ಹತ್ತಿರ ಕಾರ್ಯ ನಿರ್ವಹಿಸಲು ಸೆಕ್ಯೂರಿಟಿ ಗಾರ್ಡುಗಳು
10 ಮಂದಿ ESI/PF / ಉಚಿತ ವಸತಿ / ಉತ್ತಮ ಸಂಬಳ
9242406261
9686422400

R.V. CONSTRUCTIONS
RATE STARTS FROM
Rs. 1690 per sq.ft.
No advance
Billing on stage by stage completion.
Office: 7975110915
D. Subbaiah Road, Mysore
Assist Major Bank Loans

ಟೈಲರ್‌ಗಳು ಬೇಕಾಗಿದ್ದಾರೆ
WANTED TAILORS
Contact:
Mob: 9845222662

Change of Name
I, Monthy Mary Lopes, residing at #294, EWS, First Floor, CITB Houses, 2nd Stage, Kuvempunagar, Mysuru-570 023, have changed my name as Monthy Rajashekar, W/o Rajashekar on my own free will, in front of Notary Geetha R. on 31-01-2025 vide document No. 10, Page No. 2, Book No. 1. I declare that I shall at all times hereafter in all records, deeds and writings and in all procedings, dealings and transactions, private as well as upon all occasions whatsoever use and sign the name of Monthy Rajashekar.
Sd/- Monthy Rajashekar

Document Lost
H.S. Sidde Gowda, S/o Late R. Sidde Gowda, No. 218, 4th Cross, 1st Stage, Gangothri Layout, Mysuru-570 009, I have lost my original documents Survey No. 29, Hinkal Grama Kasaba Hobli, Mysore Taluk & District Khata & kandaya and Demand Registered copy. Finders please contact:
Mob: 9945101365

ಬೇಕಾಗಿದ್ದಾರೆ
ಮೈಸೂರಿನ ಹೆಸರಾಂತ ಕಂಪನಿಗೆ 25 ರಿಂದ 65 ವರ್ಷದೊಳಗಿನ ಗೃಹಿಣಿಯರು, ನಿವೃತ್ತ ವ್ಯಕ್ತಿ, ಬಿಸಿನೆಸ್ ವ್ಯಕ್ತಿಯರು ಬೇಕಾಗಿದ್ದಾರೆ ವಿದ್ಯಾರ್ಹತೆ:– ಪಿಯುಸಿ ಅಥವಾ ಯಾವುದೇ ಪಧವೀಧರರು
ಸಂಪರ್ಕಿಸಿ:– ಉಷಾ
Mob: 9480177525

ಟ್ರಾನ್ಸ್‌ಪೋರ್ಟ್ ಕಂಪನಿಗೆ ಲಾರಿ ಡ್ರೈವರ್ ಬೇಕಾಗಿದ್ದಾರೆ
9845351200
9741139977

ಹೊಸ ಮನೆ ಮಾರಾಟಕ್ಕಿದೆ
20x30 S/E Ground & First Floor ವಿನಾಯಕ ಗಾರ್ಡನ್ ಸಿಟಿ ಗೋಲ್ಡ್ ನರಸೀಪುರ ರೋಡ್
9742062636
8310972636

ಅಂಜನ ಶಾಸ್ತ್ರದ ಮೂಲಕ ಪರಿಹಾರ ಶ್ರೀ ಅಂಜನ ದೇವಿ ಆರಾಧಕರು ಪಂ॥ ಶ್ರೀನಿವಾಸ್ ಆಚಾರ್ಯ
ಮೈಸೂರಿನಲ್ಲಿ ಬಹು ವರ್ಷದಿಂದ ಖಾಯಂ ಆಗಿ ನೆಲೆಸಿರುತ್ತಾರೆ. ಅನೇಕ ಜನರು ಇವರಲ್ಲಿ ಪರಿಹಾರ ಪಡೆದಿರುತ್ತಾರೆ. ಇವರು ವಂಶಪಾರಂಪರ್ಯ ಜ್ಯೋತಿಷ್ಯರು. ಇವರಲ್ಲಿ ಜ್ಯೋತಿಷ್ಯ ಕೇಳಿದರೆ ನಿರಾಸೆ ಆಗುವ ಮಾತೆ ಇಲ್ಲ. ಫೋನಿನ ಮೂಲಕ ಪರಿಹಾರ.
Mob: 9663466548

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

ಹೆಲ್ತ್ ಕೇರ್ ತರಬೇತಿ
SSLC/PUC ಆದವರಿಗೆ ಡಿಪ್ಲೋಮ ಇನ್ ಹೆಲ್ತ್ ಕೇರ್ ತರಬೇತಿ ಕೊಡಲಾಗುತ್ತದೆ. ತರಬೇತಿ ಪಡೆದವರು ಉತ್ತಮ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ.
ಸೆಂಟ್ ಮೇರೀಸ್ ಆಸ್ಪತ್ರೆ
ಸಿಲ್ಕ್ ಫ್ಯಾಕ್ಟರಿ ಸರ್ಕಲ್
NIE ಕಾಲೇಜ್ ಪಕ್ಕ, ಮೈಸೂರು
9916908454

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666



SUNZONE SOLAR SYSTEM
VM Double Road, Kuvempunagar, Mysuru
9845175443

ಬೇಕಾಗಿದ್ದಾರೆ/WANTED
ಡ್ರೈವರ್ ಇನ್‌ಸ್ಟ್ರಕ್ಟರ್
Driving Instructor Required For Friends Driving School, Gokulam
9342125540

ಜಮೀನು ಮಾರಾಟಕ್ಕಿದೆ
ಮೈಸೂರಿನ ಕುವೆಂಪು ನಗರದಿಂದ ಕೇವಲ 6 ಕಿಲೋಮೀಟರ್ ದೂರದಲ್ಲಿರುವ ಫೆರಿಫೆರಲ್ ರಿಂಗ್ ರೋಡ್‌ಗೆ ಹೊಂದಿಕೊಂಡಿರುವ ಲೇಔಟ್‌ಗೆ ಸೂಕ್ತವಾದ 8.5 ಎಕರೆ ಜಮೀನು ಮಾರಾಟಕ್ಕಿದೆ ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
ಸಂಪರ್ಕಿಸಿ: ಡಾ.ಗುರುಪ್ರಸಾದ್
9036284426

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೂರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ದಾರ್ಥ ನಗರ, ಮೈಸೂರು

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೊರೆ ನಾಲ್ವರ ದೈವ ಚೌಡಮ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ತಿಳಿಸಿದ್ದು. ಖಾಯಂ ವಿಳಾಸ ಸುಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಬೇಕಾಗಿದ್ದಾರೆ
ಬೆಂಗಳೂರಿನಲ್ಲಿ ವಯಸ್ಸಾದ ಮಹಿಳೆಯನ್ನು ನೋಡಿಕೊಳ್ಳಲು ಮಹಿಳೆಯರು ಬೇಕಾಗಿದ್ದಾರೆ
ಊಟ, ವಸತಿ ಸೌಕರ್ಯವಿರುತ್ತದೆ
ಸಂಬಳ 25000/-
Ph.7406 369 369

Wanted Immediately
A reputed Security organisation is looking for the post of Field Officer at Mysore for an immediate appointment, remuneration will be very best in the industry, interested candidates can contact @
Mob: 6364857750

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್
8197383645, 9008711654

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಏರಿಯಾದಲ್ಲಿ TVS ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC & ಮೇಲ್ಪಟ್ಟು
ವಯೋಮಿತಿ : 50 ವರ್ಷದೊಳಗೆ
ಸಂಬಳ: 17500 8hours (26 days)
ಊಟ ತಿಂಡಿ ವಸತಿ ಸೌಲಭ್ಯವಿರುತ್ತದೆ.
9620777819
9620667819

ತಕ್ಷಣ ಬೇಕಾಗಿದ್ದಾರೆ
ಹುಣಸೂರಿನ ಕಟ್ಟೆಮಳವಾಡಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC & ಮೇಲ್ಪಟ್ಟು
ಸಂಬಳ: 17500 +W/o
ಊಟ ತಿಂಡಿ ವಸತಿ ಸೌಲಭ್ಯವಿರುತ್ತದೆ.
9620667819
9880727819

SITE FOR SALE
52x60 SW CORNER SITE FOR SALE IN RMS LAYOUT NEAR DR RAJKUMAR ROAD GOOD LOCATION.
Mob: 9880344263

WANTED DTP OPERATOR
Having good Kannada & English Typing skills Computer Knowledge
ಕಂಪ್ಯೂಟರ್ ಮತ್ತು ಡಿ.ಟಿ.ಪಿ ಆಪರೇಟರ್ ಬೇಕಾಗಿದ್ದಾರೆ. (ಕನ್ನಡ & ಇಂಗ್ಲೀಷ್ ಟೈಪಿಂಗ್ ಉತ್ತಮವಾಗಿ ತಿಳಿದಿರುವವರು)
Mob: 9964982228

Change of Name
I, Madhuchand, residing at No. 17, HIG-2, KHB Colony, Hootagalli, Mysore-570 018, have changed my name from Madhuchand Veerappa to Madhuchand on my own free will, sworn in before Notary R.K. Jyothi vide affidavit dated 05-02-2025.
Sd/- Madhuchand

Urgently Required
A reputed Security Organisation is hiring Security Guards for Mysore Industrial Area for immediate appointment, selected candidates will be getting a good salary with ESI, PF, Bonus, NFH, Leave facilities, free accommodation, and canteen facilities. Interested candidates, can contact @
6364857753, 6364857754

CONSTRUCTION WORK
We undertake new residential commercial Repair and Renovation works. Contact.
8296698852

ಮನೆ ಭೋಗ್ಯಕ್ಕೆ
ಮೊದಲನೇ ಮಹಡಿ # 156, 4ನೇ ಕ್ರಾಸ್, ರಾಮಕೃಷ್ಣನಗರ, 4 ರೂಂಗಳುಳ್ಳ ಮನೆ ಡ್ಯೂಪ್ಲೆಕ್ಸ್ ಮನೆ 20x30 ರಲ್ಲಿರುವ ಮನೆ
Near Church
9880550440
9902982960

ಬೇಕಾಗಿದ್ದಾರೆ
ಪ್ರತಿಷ್ಠಿತ ಚಾಟ್ ಸೆಂಟರ್‌ಗೆ ಕೆಲಸಕ್ಕೆ ಬೇಕಾಗಿದ್ದಾರೆ. ಆಕರ್ಷಕ ಸಂಬಳದೊಂದಿಗೆ
8095336064

FOR SALE
1. 30x40 Sites @ RT Nagar, Near Defence Apartments, HD Kote Road (Including Reg 20 Lakhs)
2. Installment Sites, Near Yelwala. First Come First Serve.
3. 20x30, 30x40 Sites Near Rainbow School, Bogadhi (20x30 Including Reg 20 Lakhs)
4. 40x60 Commercial Site @ Srirampura
5. New Upcoming Apartments For Sale @ Ramkrishna Nagar
PRAKRUTHI PROPERTIES
95386 90359, 90359 90359

SITE FOR SALE
30x40 site @ Roopa Nagara
Mob: 9880273834

ಮಾರ್ಟ್‌ಗೇಜ್ ಡೀಡ್ ಕಳೆದಿದೆ
ನಾನು ಸವಿತಾ ವೈಫ್ ಆಫ್ ಸುರೇಶ್ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ಆಸ್ತಿ ನಂಬರ್ 18 PID ನಂಬರ್ 152200103125500635 ಈ ಖಾತೆಯೂ ಇವರ ಹೆಸರಲ್ಲಿದೆ ಇವರು ಮಣಪುರಂ ಹೋಂ ಫೈನಾನ್ ಲಿಮಿಟೆಡ್. ಅಡಮಾನ ಪತ್ರದ ದಾಖಲೆ ಸಂಖ್ಯೆ:– HDK–1–06057–2024–25 ಹಾಗೆ ದಿನಾಂಕ 23–12–2024 ರಂದು ನೋಂದಣಿ ಯಾಗಿರುವ ಮಾರ್ಟ್‌ಗೇಜ್ ಡೀಡ್ ದಿನಾಂಕ 24–12–2024 ರಂದು ಕೆಜಿ ಕೊಪ್ಪಲು ಮೈಸೂರು ಬಳಿ ಮೇಲ್ಕಂಡ ದಾಖಲಾತಿಗಳು ಕಳೆದು ಹೋಗಿರುತ್ತದೆ ಈ ಸಂಬಂಧವಾಗಿ ದಿನಾಂಕ 30–01–2025 ರಂದು ಮೈಸೂರು ಸಿಟಿ ಪೊಲೀಸ್ ಠಾಣೆಗೆ ದೂರನ್ನು ನೀಡಲಾಗಿದೆ ಮಾರ್ಟ್‌ಗೇಜ್ ಡೀಡ್ ಸಿಕ್ಕಲ್ಲಿ ಈ ನಂಬರ್‌ಗೆ ಕರೆಮಾಡಿ.
9743966960,6364702283


ಮಾರುತಿ ಟ್ಯೂಬ್ ವೆಲ್ಸ್ (ರಿ)
ಕರ್ನಾಟಕ ಅಂತರ್ಜಲ ಪ್ರಾಧಿಕಾರದಲ್ಲಿ ನೋಂದಾಯಿಸಲಾಗಿದೆ ನೇರವಾಗಿ ಮಾಲೀಕರಿಂದ
ಬೋರ್‌ವೆಲ್ ಡ್ರಿಲ್ಲಿಂಗ್ @
ಸಿಟಿ - ₹75/- ಸೈಟ್ ಬೋರ್‌ವೆಲ್
ಗ್ರಾಮೀಣ - ₹85/- ಕೃಷಿ ಬೋರ್‌ವೆಲ್
• ಬ್ರೋಕರ್ ಇಲ್ಲ • ಕಮಿಷನ್ ಇಲ್ಲ
8184000444

ಬೇಕಾಗಿದ್ದಾರೆ
(Consultancy ಅಲ್ಲ) ಮೈಸೂರಿನಲ್ಲಿರುವ Action World Group ಕಂಪನಿಗೆ SSLC/Pass, PUC, ITI, Dip, Any Degree ಆದಂತಹ ಗ್ರಾಮೀಣ+ನಗರದ 127 ಅಭ್ಯರ್ಥಿಗಳು ಬೇಕಾಗಿದ್ದಾರೆ. Freshers ಗಳಿಗೆ ಹೆಚ್ಚಿನ ಆದ್ಯತೆ. ವಯೋಮಿತಿ: 18-32 Years, ತಿಂಗಳಿಗೆ 18000–21000, (ಉಚಿತ ಊಟ +ವಸತಿಯೊಂದಿಗೆ)
ಡಿಪಲ್: 7349699460 7090212014

SITES FOR SALE
MUDA AND RERA APPROVED
70% BANK LOAN AVAILABLE
20X30, 30X40 & CORNER SITES OFF BOGADI ROAD
9620119858

ಪತ್ರ ಕಳೆದಿದೆ
ಚಿಕ್ಕಾಡನಹಳ್ಳಿ ಸರ್ವೆ ನಂ. 31/11 0.05 ಗುಂಟೆ ರಿಜಿಸ್ಟರ್ ನಂ. 10915/2015/16 ಮಾಲೀಕರು : ಹೆಚ್.ಕೆ. ಪ್ರಕಾಶ್ S/o ಕರಿಬಸವಣ್ಣ ಚಿಕ್ಕಾಡನಹಳ್ಳಿ ಹುಣಸೂರು ತಾಲ್ಲೂಕು ಮೈಸೂರು ಜಿಲ್ಲೆ ಯಾರಿಗಾದರೂ ಸಿಕ್ಕಲ್ಲಿ ಈ ನಂಬರಿಗೆ ಸಂಪರ್ಕಿಸಿ
9845665708
9886557725

WANTED
Shop Delivery boys in a wholesale shop in APMC yard, bandipalya. Contact details
9845333588
8951699396

ಆಲ್ಟ್ರೇಷನ್ ಕೆಲಸ ಮಾಡಿಕೊಡಲಾಗುತ್ತದೆ
ಹಳೇಮನೆ ಕೆಲಸ ಮತ್ತು ಬಣ್ಣದ ಕೆಲಸ, ಗಾರೆ ರಿಪೇರಿ ಮತ್ತು ತಾರಸಿ ಸೋರುವಿಕೆ ಸರಿಪಡಿಸಿಕೊಡಲಾಗುತ್ತದೆ.
6360884930

New House For Sale
@ MUDA Layout 2+1 BHK 20x30 South Facing site East Facing Door, Shanthaveri Gopal Gowda Nagar, Mysore
9740019514
9738884777

UPS BATTERY
* SPECIAL OFFER EASTMAN
1) 150 AH TBLR B+BATTERY 1KVA SW UPS Rs.16,555/-
2) 200 AH TBLR BATTERY 1.2 KVA SW UPS Rs.21,999/-
S.R.Enterprises
Ramavilas Road, Mysuru-04
7676899663

ಸೈಟುಗಳು ಮಾರಾಟಕ್ಕೆ
ದಟ್ಟಗಳ್ಳಿ ಅಟ್ಯಾಚ್ಡ್ 40x60 ದಕ್ಷಿಣ ದಿಕ್ಕು ಚದುರ ಅಡಿಗೆ ಬೆಲೆ ರೂ.4900/– ಮತ್ತು ದಟ್ಟಗಳ್ಳಿ 'ಜಿ' ಬ್ಲಾಕ್‌ನಲ್ಲಿ 20x30 ಉತ್ತರ ದಿಕ್ಕು ಎದುರುಗಡೆ ಪಾರ್ಕ್ ಇದೆ. ಸೈಟು ಮಾರಾಟಕ್ಕಿದೆ.
9663793666

ಇನ್ಫೋಸಿಸ್‌ಗೆ ಸೆಕ್ಯೂರಿಟಿ ಗಾರ್ಡ್ ಮತ್ತು ಸೆಕ್ಯೂರಿಟಿ ಸೂಪರ್‌ವೈಸರ್ ಬೇಕಾಗಿದ್ದಾರೆ (ಪುರುಷರಿಗೆ ಮಾತ್ರ)
ವಿದ್ಯಾಭ್ಯಾಸ : SSLC ಮೇಲ್ಪಟ್ಟು
ವಯಸ್ಸು: 23 ರಿಂದ 50ರ ಒಳಗಿರಬೇಕು.
ಸಂಬಳ: ರೂ.19000/- ಸೌಲಭ್ಯ : ESI/PF/BONUS/GRATUNITY/FREE UNIFORM & INSURANCE
9538014456,9538886654

ಮನೆ ಮರಾಟಕ್ಕಿದೆ
ಲಾಲ್ ಬಹದ್ದೂರ್ ಶಾಸ್ತ್ರಿ ನಗರ ಮತ್ತು ಪೊಲೀಸ್ ಲೇಔಟ್ 40x60, 30x40 ಪೂರ್ವ ದಿಕ್ಕು
9901772178

ಇಂದೇ ಸಂಪರ್ಕಿಸಿ.
ಮೈಸೂರಿನ ಪ್ರಸಿದ್ಧ ಕಂಪನಿ office & Show-room & ಕಂಪನಿಗಳಿಗೆ 7th 10th puc, Anydegree pass & fail ಆದವರಿಗೆ helpers, packing Maintenance, Data entry, Typing, HD Admin, Accountant ಮುಂತಾದ ಕೆಲಸಗಳಿಗೆ ಯುವಕ ಯುವತಿಯರು ಬೇಕಾಗಿದ್ದಾರೆ. (ESI+PF+OT) ಸೇರಿ ಸಂಬಳ 16000/–ರಿಂದ 40000/–
6364103418,9164052361

ಮನೆ ಬಾಡಿಗೆಗೆ ಇದೆ
ಕುವೆಂಪುನಗರ M Blockನಲ್ಲಿ 30x45 ಅಳತೆಯುಳ್ಳ ಮನೆ ಬಾಡಿಗೆಗೆ ಇದೆ. 2 Room ವರಾಂಡ Big Hall Pooja Solar ಸೌಲಭ್ಯ ಇರುತ್ತದೆ. (ಬ್ರೋಕರ್‌ಗೆ ಅವಕಾಶವಿಲ್ಲ)
9739200487

ಬೇಕಾಗಿದ್ದಾರೆ
ಮೆನ್ ಶೋರೂಮಿನಲ್ಲಿ ಬಟ್ಟೆ ಅಂಗಡಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಅನುಭವ ವಿರುವವರಿಗೆ ಸಂಬಳ : 15000 ರೂ.ನಿಂದ ಪ್ರಾರಂಭವಾಗುತ್ತದೆ.
9742076736
8310093516

ಜಮೀನುಗಳು ಮಾರಾಟಕ್ಕಿದೆ
ಮೈಸೂರು ತಾ. ಜಯಪುರ ಹೋ. ಹತ್ತವಾಳು ಮುಖ್ಯರಸ್ತೆಯಲ್ಲಿ 9 ಗುಂಟೆ ಹಾರೂಹಳ್ಳಿ ಮುಖ್ಯರಸ್ತೆಯಲ್ಲಿ 12 ಗುಂಟೆ ಮಾದೂರಲ್ಲಿ 32 ಗುಂಟೆ ಮತ್ತು 25 ಗುಂಟೆ ದೂರಗ್ರಾಮದಲ್ಲಿ 19 ಗುಂಟೆ 1 ಎಕರೆ 4 ಗುಂಟೆ ಮುಳ್ಳೂರಲ್ಲಿ 20 ಗುಂಟೆ 3 ಎಕರೆ 7 ಗುಂಟೆ ಪೇರಿಫೆರಲ್ ರಿಂಗ್ ರಸ್ತೆಯ ಪಕ್ಕದಲ್ಲಿ ಮತ್ತು ಸ್ಟೇಟ್ ಲ್ಯಾಂಡ್ ಸಿಟಿ ಬಡವಣೆಗಳು ಇರುತ್ತದೆ.
9945661696
9742666049, 9663793666

ಸೈಟುಗಳು ಮಾರಾಟಕ್ಕೆ
ತಳೂರು ಸರ್ಕಲ್ ಬಳಿ ಡಿ.ಟಿ.ಸಿ.ಪಿ. ಅನುಮೋದಿತ 40x60 ದಕ್ಷಿಣ ದಿಕ್ಕಿನ ನಿವೇಶನಗಳು ಮಾರಾಟಕ್ಕಿವೆ. ಬೆಲೆ–1200/– ಚ.ಅಡಿ.
8197850616

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕಿನಲ್ಲಿ ನೈಟ್ ಶಿಫ್ಟ್ ಕೆಲಸಕ್ಕಾಗಿ ಪುರುಷರು/ಹುಡುಗರು ಬೇಕಾಗಿದ್ದಾರೆ.
ಸಂಬಳ: 15,000/–
7899754149

ಸುವರ್ಣಾವಕಾಶ
PART/FULL TIME EARN EXTRA INCOME
ನೌಕರರು, ನಿವೃತ್ತರು, ಗೃಹಿಣಿಯರು ಉದ್ಯಮಿಗಳು, ವಿದ್ಯಾರ್ಥಿಗಳು, ವೃತ್ತಿಪರರು.
ಜ್ಯೋತಿ: 9743717263
ಪುಷ್ಪಾ: 7338648227

ಕಂಕಣ ಭಾಗ್ಯ
ಒಕ್ಕಲಿಗ, ಕುರುಬ, ಲಿಂಗಾಯತ್, ನಾಯಕ, SC ನಮ್ಮಲ್ಲಿ ಎಲ್ಲಾ ಜಾತಿಯ ವಧು–ವರರು, ವಿಚ್ಛೇಧಿತರು, ವಿಧುರ–ವಿಧವೆಯರು ತಕ್ಷಣ ಸಂಪರ್ಕಿಸಿ:
9071577131

ಮನೆ ಮಾರಾಟಕ್ಕೆ ಇದೆ
13x30 EWS GF & 1t Floor ಉತ್ತರ ಮುಖದ ಮನೆ ಗಂಗೋತ್ರಿ ಬಡಾವಣೆ 9ನೇ ಕ್ರಾಸ್ ನಲ್ಲಿದೆ ಬೆಲೆ 30 ಲಕ್ಷ (ಚೌಕಾಸಿ) ಆಸಕ್ತಿಯುಳ್ಳವರು ಕರೆಮಾಡಿ
8088584803
9538578601

28x40 ಸೈಟು ಮಾರಾಟಕ್ಕಿದೆ. 15 ಲಕ್ಷಗಳು
30x46 ಸೈಟು ಮಾರಾಟಕ್ಕಿದೆ. 18 ಲಕ್ಷಗಳು
TVS ಫ್ಯಾಕ್ಟರಿ ಹತ್ತಿರ ನಂಜುಂಡೇಶ್ವರ ನಗರ, ಮೈಸೂರು
9972557534

ಕೆಲಸಕ್ಕೆ ಬೇಕಾಗಿದ್ದಾರೆ
ಹುಡುಗಿಯರು ವಯೋಮಿತಿ 18–35 ವಿದ್ಯಾರ್ಹತೆ ಪಿಯುಸಿ–ಯಾವುದೇ ಡಿಗ್ರಿ ಸೆರಾಕೇರ ಮೈಸೂರು ಹೆಲ್ತ್ ಸೆಂಟರ್ ನ್ಯೂ ಕಾಂತರಾಜ ಅರಸು ರಸ್ತೆ ಕೆ.ಜಿ.ಕೊಪ್ಪಲು, ಮೈಸೂರು
8296366894
9980623130

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಫೆ.13, ಮೈಸೂರಲ್ಲಿ ಪ್ರೊ.ಎಂಡಿಎನ್ ನೆನಪಿನಾರ್ಥ ರೈತ ಸಮಾವೇಶ

ತಿ.ನರಸೀಪುರದ ರೈತರ ಸಭೆಯಲ್ಲಿ ಸಮಾವೇಶದ ಕರಪತ್ರ ಬಿಡುಗಡೆ



ತಿ.ನರಸೀಪುರ ಪಟ್ಟಣದ ಎಪಿಎಂಸಿ ಆವರಣದಲ್ಲಿ ನಡೆದ ಕರ್ನಾಟಕ ರಾಜ್ಯ ರೈತ ಸಂಘದ ಮುಖಂಡರ ಸಭೆಯಲ್ಲಿ ಜಿಲ್ಲಾ ರೈತ ಸಮಾವೇಶದ ಕರಪತ್ರ ಬಿಡುಗಡೆ ಮಾಡಲಾಯಿತು.

ತಿ.ನರಸೀಪುರ, ಫೆ.5– ವಿಶ್ವ ರೈತ ಚೇತನ ಪ್ರೊ.ಎಂ.ಡಿ.ನಂಜುಂಡಸ್ವಾಮಿ ಅವರ 89ನೇ ನೆನಪಿನಾರ್ಥ ಕರ್ನಾಟಕ ರಾಜ್ಯ ರೈತ ಸಂಘವು ಫೆ.13ರಂದು ಮೈಸೂರು ಟೌನ್ ಹಾಲ್ ಆವರಣದಲ್ಲಿ ಜಿಲ್ಲಾ ರೈತ ಸಮಾವೇಶ ಹಮ್ಮಿಕೊಂಡಿದೆ ಎಂದು ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ಹೊಸ ಕೋಟೆ ಬಸವರಾಜು ತಿಳಿಸಿದರು.

ಪಟ್ಟಣದ ಎಪಿಎಂಸಿ ಆವರಣದಲ್ಲಿ ಬುಧವಾರ ರೈತ ಮುಖಂಡರ ಸಭೆಯಲ್ಲಿ ಜಿಲ್ಲಾ ಸಮಾವೇಶದ ಕರಪತ್ರ ಬಿಡುಗಡೆ ಮಾಡಿ ಅವರು ಮಾತನಾಡಿದರು.

ರಾಜ್ಯ ಕಂಡ ಅಪ್ರತಿಮ ಹೋರಾಟಗಾರ, ವಿಶ್ವ ಜ್ಞಾನಿ, ಸಮಾಜವಾದಿ, ಚಿಂತಕ ಪ್ರೊ.ಎಂಡಿ.ನಂಜುಂಡಸ್ವಾಮಿ ಅವರ ಜನ್ಮದಿನವಾದ ಫೆ.13 ರ ದಿನವನ್ನು ರಾಜ್ಯ ರೈತ ಸಂಘವು ಪ್ರತಿ ವರ್ಷ ವಿಶೇಷವಾಗಿ ಆಚರಿಸುತ್ತಾ ಬಂದಿದೆ. ಈ ವರ್ಷ ಮೈಸೂರಿನ ಟೌನ್ ಹಾಲ್ ಆವರಣದಲ್ಲಿ ಫೆ 13 ರಂದು ಮಧ್ಯಾಹ್ನ 12 ಗಂಟೆಗೆ ಜಿಲ್ಲಾ ರೈತ ಸಮಾವೇಶ ಹಮ್ಮಿಕೊಂಡಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ರೈತ ವಿರೋಧಿ ನೀತಿಯನ್ನು ಖಂಡಿಸಿ, ರೈತ ಪರ, ಗ್ರಾಮೀಣ ಪರ ಯೋಜನೆಗಳನ್ನು ರೂಪಿಸಿ ಕೃಷಿಯನ್ನು ಉಳಿಸಲು ಆಗ್ರಹಿಸಿ ಹಲವಾರು ನಿರ್ಣಯಗಳನ್ನು ಕೈಗೊಳ್ಳಲಿದೆ, ಹೊಸತನದೊಂದಿಗೆ ಹಳ್ಳಿ–ಹಳ್ಳಿಗೆ ರೈತ ಚಳುವಳಿಯನ್ನು ಕೊಂಡೊಯ್ಯಲು ಹಲವಾರು ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುತ್ತದೆ ಎಂದರು.

ಫೆ.13 ರಂದು ನಡೆಯಲಿರುವ ಸಮಾವೇಶದಲ್ಲಿ ಸಂಯುಕ್ತ ಮೋರ್ಚಾದ ರಾಷ್ಟ್ರೀಯ ಮುಖಂಡರು,ಕರ್ನಾಟಕ ರಾಜ್ಯ ರೈತ ಸಂಘದ ಎಲ್ಲಾ ಪದಾಧಿಕಾರಿಗಳು, ಮಹಿಳಾ ಮತ್ತು ಯುವ ಘಟಕದ ಪದಾಧಿಕಾರಿಗಳು ಹಾಗೂ ಸಂಯುಕ್ತ ಹೋರಾಟ–ಕರ್ನಾಟಕದ ಮುಖಂಡರು ಭಾಗವಹಿಸಲಿದ್ದು, ಜಿಲ್ಲೆಯ ರೈತರು, ರೈತ ಮಹಿಳೆಯರು, ಪ್ರಗತಿಪರ ಸಂಘಟನೆಗಳ ಮುಖಂಡರು ಸಹಸ್ರ ಸಂಖ್ಯೆಯಲ್ಲಿ ಆಗಮಿಸಿ ಸಮಾವೇಶ ಯಶಸ್ವಿಗೊಳಿಸುವಂತೆ ಅವರು ಮನವಿ ಮಾಡಿದರು.

ಸಭೆಯಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮರಂಕಯ್ಯ, ಮೈಸೂರು ಜಿಲ್ಲಾ ಕಾರ್ಯದರ್ಶಿ ನಾಗನಹಳ್ಳಿ ವಿಜೇಂದ್ರ, ಟಿ.ನರಸೀಪುರ ತಾಲೂಕು ಅಧ್ಯಕ್ಷ ಕರೋಹಟ್ಟಿ ಕುಮಾರಸ್ವಾಮಿ, ಕಾರ್ಯದರ್ಶಿ ಬೂದಹಳ್ಳಿ ಶಂಕರ್, ಗೌರವಾಧ್ಯಕ್ಷ ಮಹದೇವ ಸ್ವಾಮಿ, ಕಾರ್ಯಾಧ್ಯಕ್ಷ ಶಾಂತಕುಮಾರ್, ಖಜಾಂಚಿ ಮಹೇಶ್ ಕುಮಾರ್, ಕೊತ್ತೇಗಾಲ ಮಹೇಶ್ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಚಂದ್ರಶೇಖರ್, ಹೋಬಳಿ ಅಧ್ಯಕ್ಷ ಹುಚ್ಚೇಗೌಡ, ಶಿವಣ್ಣ ಮತ್ತಿತರರಿದ್ದರು.

ಕಳಲೆ ಲಕ್ಷ್ಮೀಕಾಂತಸ್ವಾಮಿ ದೇವಾಲಯದಲ್ಲಿ ರಥಸಪ್ತಮಿ ಅಂಗವಾಗಿ ಸೂರ್ಯಮಂಡಲ ಉತ್ಸವ



ಸೂರ್ಯಮಂಡಲ ಉತ್ಸವ ವಿಜೃಂಭಣೆಯಿಂದ ನಡೆಯಿತು.

ನಂಜನಗೂಡು, ಫೆ.5– ತಾಲೂಕಿನ ಕಳಲೆ ಗ್ರಾಮದ ಇತಿಹಾಸ ಪ್ರಸಿದ್ಧ ಲಕ್ಷ್ಮಿ ಕಾಂತಸ್ವಾಮಿ ದೇವಾಲಯದಲ್ಲಿ ರಥ ಸಪ್ತಮಿ ಅಂಗವಾಗಿ ಸೂರ್ಯಮಂಡಲ ಉತ್ಸವವನ್ನು ವಿಜೃಂಭಣೆಯಿಂದ ನಡೆಸಲಾಯಿತು. ರಥಸಪ್ತಮಿಯ ಅಂಗವಾಗಿ ಲಕ್ಷ್ಮಿಕಾಂತ ಸ್ವಾಮಿಗೆ ಮುಂಜಾನೆಯಿಂದಲೇ ಕ್ಷೀರ ಅಭಿಷೇಕ, ಫಲ ಪಂಚಾಮೃತ ಅಭಿಷೇಕ, ಸೇರಿದಂತೆ ವಿವಿಧ ಧಾರ್ಮಿಕ ಪೂಜಾ ಕೈಂಕರ್ಯಗಳನ್ನು ನೆರವೇರಿಸಿದ ಬಳಿಕ ಮಹಾ ಮಂಗಳಾರತಿ ನೆರವೇರಿಸಿ ಭಕ್ತರಿಗೆ ದರ್ಶನಕ್ಕೆ ಅನುವು ಮಾಡಿಕೊಡಲಾಗಿತ್ತು. ನಂತರ ಸ್ವಾಮಿಯವರ ಉತ್ಸವ ಮೂರ್ತಿಯನ್ನು ರಥದಲ್ಲಿರಿಸಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನೆರವೇರಿಸಲಾಯಿತು. ಮೆರವಣಿಗೆಯ ಸಂದರ್ಭದಲ್ಲಿ ಭಕ್ತರು ಇಷ್ಟಾರ್ಥಗಳನ್ನು ನೆರವೇರಿಸುವಂತೆ ಹರಕೆ ಕಟ್ಟಿ ಭಕ್ತಿ ಮೆರೆದರು.

ಇದೇ ಸಂದರ್ಭದಲ್ಲಿ ದೇವಾಲಯದ ಪಾರುಪತ್ತೆದಾರ್ ಜಯರಾಮ್, ಲಕ್ಷ್ಮಣಚಾರ್ ಸೇರಿದಂತೆ ಗ್ರಾಮಸ್ಥರು ಮತ್ತು ಗ್ರಾಮದ ಯಜಮಾನರು ಉಪಸ್ಥಿತರಿದ್ದರು.

ಸಿಡಿಲು ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನದಲ್ಲಿ ರಥ ಪೂಜೆ

ಬೆಟ್ಟದಪುರದ ಸಿಡಿಲು ಮಲ್ಲಿಕಾರ್ಜುನ ಸ್ವಾಮಿ ನೂತನ ಗಣಪತಿ ರಥವನ್ನು ರಥಸಪ್ತಮಿ ಅಂಗವಾಗಿ ಸಿಡಿಲು ಮಲ್ಲಿಕಾರ್ಜುನ ಸ್ವಾಮಿ ದೇವಾಲಯದ ಆವರಣದಲ್ಲಿ ಪೂಜಿಸಲಾಯಿತು. ನೂತನ ರಥವನ್ನು ನಿರ್ಮಿಸಿದ ದಾನಿಗಳಾದ ಬೆಮ್ಮತಿ ಸುರೇಶ್ ಅವರ ಕುಟುಂಬದವರು ಹಾಜರಿದ್ದು, ಹೋಮ ಹವನ ಪೂಜೆ ವಿಶೇಷ ಅಭಿಷೇಕಗಳನ್ನು ನೆರವೇರಿಸಿದರು.



ಒಂದು ವರ್ಷದ ಕರುವಿನ ಮೇಲೆ ಕಿಡಿಗೇಡಿಗಳಿಂದ ಹಲ್ಲೆ





ಕರುವಿನ ಕಾಲಿಗೆ ಪೆಟ್ಟಾಗಿರುವುದು.

ಹಂಪಾಪುರ, ಫೆ.5– ಇತ್ತೀಚೆಗೆ ಹಸು ಮತ್ತು ಕರುವಿನ ಮೇಲೆ ಹಲ್ಲೆ ನಡೆಸುತ್ತಿರುವ ಪ್ರಕರಣಗಳು ಹೆಚ್ಚಾಗುತ್ತಿದ್ದು, ಪ್ರಾಣಿಪ್ರಿಯರು ಮತ್ತು ಸಾರ್ವಜನಿಕರಲ್ಲಿ ಆತಂಕ ಮೂಡಿಸಿದೆ.

ಹೆಚ್.ಡಿ.ಕೋಟೆ ತಾಲೂಕು ಹಂಪಾಪುರ ಗ್ರಾಮದಲ್ಲಿ ರಾಜೇಶ್ ಅವರು ಬುಧವಾರ ಮಧ್ಯಾಹ್ನ ಒಂದು ವರ್ಷದ ಕರುವನ್ನು ಹಸುವಿನ ಜೊತೆ ತಮ್ಮ ಜಮೀನಿನಲ್ಲೇ ಮೇಯ್ಯಲು ಬಿಟ್ಟು ಊಟಕ್ಕೆ ಮನೆಗೆ ಬಂದಿದ್ದಾರೆ. ಈ ಸಮಯದಲ್ಲಿ ಕಿಡಿಗೇಡಿಗಳು ಮಚ್ಚು ಅಥವಾ ಕಲ್ಲಿನಿಂದ ಹೊಡೆದು ಕರುವಿನ ಕಾಲಿನ ಕೊರಳು ಮುರಿದು ಹಾಕಿದ್ದಾರೆ. ಕಿಡಿಗೇಡಿಗಳು ಯಾರು ಎಂದು ಪತ್ತೆ ಹಚ್ಚಿ ಅವರನ್ನು ಬಂಧಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಹಂಪಾಪುರ ಪೊಲೀಸ್ ಠಾಣೆಗೆ ಮಾಲೀಕರಾದ ರಾಜೇಶ್ ದೂರು ನೀಡಿದ್ದಾರೆ. ಕಿಡಿಗೇಡಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳದಿದ್ದರೆ ಉಗ್ರ ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ತಾಲೂಕು ಅಧ್ಯಕ್ಷ ಹೆಚ್.ಬಿ.ರಾಜೇಶ್ ಎಚ್ಚರಿಕೆ ನೀಡಿದ್ದಾರೆ.

ತಂತ್ರಜ್ಞಾನದ ಮೂಲಕ ವೃತ್ತಿ ಕೌಶಲ್ಯವನ್ನು ಬೆಳಸಿಕೊಳ್ಳಿ

ಸರಗೂರು, ಫೆ.5– ತಾಲೂಕು ಕಚೇರಿಯಲ್ಲಿ ಬುಧವಾರ ತಾಲೂಕು ಆಡಳಿತದ ವತಿಯಿಂದ ತಹಶೀಲ್ದಾರ್ ಮೋಹನ ಕುಮಾರಿ ಅವರ ಅಧ್ಯಕ್ಷತೆಯಲ್ಲಿ ಶ್ರೀ ಸವಿತಾ ಮಹರ್ಷಿ ಜಯಂತಿ ಕಾರ್ಯಕ್ರಮವನ್ನು ಸವಿತಾ ಮಹರ್ಷಿ ಭಾವ ಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಆಚರಿಸಲಾಯಿತು.



ಶ್ರೀ ಸವಿತಾ ಮಹರ್ಷಿ ಜಯಂತಿಯಲ್ಲಿ ತಹಶೀಲ್ದಾರ್ ಮೋಹನಕುಮಾರಿ ಮಾತನಾಡಿದರು.

ಸಮಾಜದಲ್ಲಿ ಯಾವ ವೃತ್ತಿಯೂ ಕನಿಷ್ಟ ಅಥವಾ ಶ್ರೇಷ್ಟ ಎನ್ನುವುದು ಇಲ್ಲ. ತಂತ್ರಜ್ಞಾನ ಮುಂದುವರೆದಂತೆ ಇತರೆ ಸಮಾಜದ ವ್ಯಕ್ತಿಗಳು ಕೂಡ ಸವಿತಾ ಸಮಾಜದ ವೃತ್ತಿಯನ್ನು ಮಾಡುತ್ತಿದ್ದಾರೆ. ಆ ಕಾರಣದಿಂದ ಸಮುದಾಯದ ಜನರು ತಂತ್ರಜ್ಞಾನದ ಮೂಲಕ ವೃತ್ತಿ ಕೌಶಲ್ಯವನ್ನು ಬೆಳಸಿಕೊಳ್ಳುವ ಅಗತ್ಯವಿದೆ ಎಂದರು.

ಮುಖ್ಯ ಭಾಷಣಕಾರರಾಗಿ ಲಯನ್ಸ್ ಅಕಾಡೆಮಿ ಶಾಲಾ ಮುಖ್ಯ ಶಿಕ್ಷಕಿ ಪದ್ಮಶ್ರೀ ಮಾತನಾಡಿ, ಜಗತ್ತು ರಕ್ಷಿಸಿ ನಡೆಸುವವನೇ ಸವಿತಾ ಎಂಬುದು ಪುರಾಣಗಳಲ್ಲಿ ಉಲ್ಲೇಖವಾಗಿದೆ. ಸವಿತಾ ಮಹರ್ಷಿಗಳು ಶಿವನ ಕಣ್ಣಿನಿಂದ ಜನಿಸಿದವರು. ರಾಷ್ಟ್ರಕೂಟ ವಿಜಯನಗರ ಕಲ್ಯಾಣಿ ಚಾಲುಕ್ಯರ ಶಾಸನಗಳಲ್ಲಿ ಸವಿತಾ ಸಮಾಜದ ಬಗ್ಗೆ ಉಲ್ಲೇಖವಿದ್ದು, ಇವರು ಮಹಾನ್ ಯುಗಪುರುಷರು. ಆದ್ದರಿಂದಲೇ ಮನುಷ್ಯ ಪಾಪ, ಕರ್ಮ ಕಳೆಯಲು ತಲೆ ಕೂದಲು ನಿವಾರಣೆ ಮಾಡುವುದು. ಆಯುರ್ವೇದದಿಂದ ರೋಗಮುಕ್ತವಾಗಿಸಿ ಮಾನವನ್ನಾಗಿ ಮಾಡುವುದು ಮಹರ್ಷಿ ನೀಡಿದ ಕೊಡುಗೆಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಸಾಹಿತಿ ಚಿಂತಕ ವೈ.ಡಿ.ರಾಜಣ್ಣ ಮಾತನಾಡಿದರು.

ಪಪಂ ಅಧ್ಯಕ್ಷೆ ರಾಧಿಕಾ ಶ್ರೀನಾಥ್, ಕಸಪಾ ಅಧ್ಯಕ್ಷ ಎಂ.ಕೆಂಡಗಣ್ಣಸ್ವಾಮಿ, ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷಕ ಎಲ್.ನಾಗೇಂದ್ರಯ್ಯ, ಲಯನ್ಸ್ ಶಾಲಾ ಆಡಳಿತಾಧಿಕಾರಿ ದಾಸಾಚಾರ್, ಸವಿತಾ ಸಮಾಜದ ಯಜಮಾನ ಮುರಾರಿ, ಚಂದ್ರಶೇಖರ್, ನರಸಿಂಹ, ಬಸವರಾಜು, ದಡದಹಳ್ಳಿ ಶ್ರೀನಿವಾಸ್, ರಾಜು, ರವಿ, ಪ್ರಭಾಕರ್, ಕಾಳಶೆಟ್ಟಿ, ನಿಂಗರಾಜು, ಕುಮಾರ್, ಮಹೇಶ್, ಮಹದೇವ್, ಜಯರಾಮ್, ಮುರಳಿ, ಗೋವಿಂದರಾಜು ಉಪಸ್ಥಿತರಿದ್ದರು.

ಹುರ ಆಸ್ಪತ್ರೆಯಲ್ಲಿ ವಿಕಾರ, ವಿಚಿತ್ರ ಮಗು ಜನನ

ಊದಿಕೊಂಡಿರುವ ಕಣ್ಣು, ಬಾಯಿ, ಕಪ್ಪು ಬಣ್ಣದ ಕೂಸು

ನಂಜನಗೂಡು, ಫೆ.5– ತಾಲೂಕಿನ ಹುರ ಸರ್ಕಾರಿ ಆಸ್ಪತ್ರೆಯಲ್ಲಿ ಮಹಿಳೆಯೋರ್ವರಿಗೆ ವಿಚಿತ್ರ ರೂಪದ ಮಗುವೊಂದು ಜನಿಸಿದೆ.

ಹುರ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಹೆರಿಗೆ ಆಸ್ಪತ್ರೆಗೆ ದಾಖಲಾಗಿದ್ದ ಮಹಿಳೆಯೋರ್ವರಿಗೆ ಪೂರ್ಣ ಕಪ್ಪು ಬಣ್ಣದ ಊದಿಕೊಂಡಿರುವ ಕಣ್ಣು ಹಾಗೂ ಊದಿಕೊಂಡಂತಿರುವ ಬಾಯಿಯಿರುವ ವಿಕಾರವಾಗಿರುವ ಗಂಡು ಮಗುವೊಂದು ಜನಿಸಿದೆ. ಜನ್ಮ ತಾಳಿದ ಕೆಲವೇ ಗಂಟೆಗಳಲ್ಲಿ ತೀವ್ರ ಅಸ್ವಸ್ಥಗೊಂಡಿದ್ದ ಮಗುವನ್ನು ರಕ್ಷಿಸುವ ಸಲುವಾಗಿ ಮೈಸೂರಿನ ಚೆಲುವಾಂಬ ಆಸ್ಪತ್ರೆಗೆ ದಾಖಲು ಮಾಡಿ ಹೆಚ್ಚಿನ ಚಿಕಿತ್ಸೆ ನೀಡಲಾಗಿದೆ.

ಇನ್ನು ಕಳೆದ ವರ್ಷ ಸಹಾ ಇದೇ ದಂಪತಿಗಳಿಗೆ ಇಂತಹದ್ದೇ ರೂಪದ ಮಗುವೊಂದು ಜನಿಸಿ ನಾಲ್ಕು ದಿನಗಳ ಬಳಿಕ ಮೃತಪಟ್ಟಿತ್ತು. ಆದ್ದರಿಂದ ಈ ಬಾರಿ ಮಗುವಿನ ಆರೋಗ್ಯ ಸುರಕ್ಷತೆಯ ದೃಷ್ಟಿಯಿಂದ ತಕ್ಷಣ ಮೈಸೂರಿನ ಆಸ್ಪತ್ರೆಗೆ ಸ್ಥಳಾಂತರ ಮಾಡಲಾಗಿದೆ.

ಈ ಬಗ್ಗೆ ಮಾಹಿತಿ ನೀಡಿರುವ ತಾಲೂಕು ಆರೋಗ್ಯಾಧಿಕಾರಿ ಡಾ. ಈಶ್ವರ್ ಕಳೆದ ವರ್ಷ ಈ ದಂಪತಿಗೆ ಇಂತಹುದ್ದೇ ಮಗು ಜನಸಿತ್ತು ನಂತರ ದಂಪತಿಗಳಿಗೆ ಮಗು ಜನನ ಪೂರ್ವ ಕೆಲ ತಪಾಸಣೆ ಹಾಗೂ ಅವಶ್ಯಕ ಸಲಹೆ ಸೂಚನೆಗಳನ್ನು ಪಾಲಿಸುವಂತೆ ಆರೋಗ್ಯ ಇಲಾಖೆ ಅಧಿಕಾರಿಗಳು ಸೂಚನೆ ನೀಡಿದ್ದರಾದರೂ ಅವರು ಯಾವುದೇ ಸಲಹೆ ಪಡೆದಿರಲಿಲ್ಲ. ಇನ್ನು ಈಗ ಜನಿಸಿರುವ ಮಗುವಿನ ಕಣ್ಣಿನ ಗುಡ್ಡೆ ಹಾಗೂ ಬಾಯಿ ಊದಿಕೊಂಡಿದ್ದು ತುರ್ತು ನಿಗಾ ಘಟಕದಲ್ಲಿರಿಸಿ ಅಗತ್ಯ ಚಿಕಿತ್ಸೆ ನೀಡಲಾಗುತ್ತಿದೆ ಎಂದು ತಿಳಿಸಿದರು.

ಸಹಕಾರ ಸಂಘದ ಚುನಾವಣೆಗೆ ಸ್ಪರ್ಧಿಸದಂತೆ ತಡೆಯಲು ಜಾತಿ ಪ್ರಮಾಣಪತ್ರ ನೀಡದೆ ಅಧಿಕಾರಿಗಳಿಂದ ನಿರ್ಲಕ್ಷ್ಯ ಆರೋಪ

ಗ್ರಾಮ ಲೆಕ್ಕಿಗ, ಕಂದಾಯ ಅಧಿಕಾರಿ ಮೇಲೆ ಕ್ರಮಕ್ಕೆ ಆಗ್ರಹ



ಸುದ್ದಿಗೋಷ್ಠಿಯಲ್ಲಿ ಪಿಎಲ್‌ಡಿ ಬ್ಯಾಂಕ್ ಮಾಜಿ ನಿರ್ದೇಶಕ ಸಿ.ಡಿ. ನಾಗೇಂದ್ರ ಮಾತನಾಡಿದರು.

ಹೆಚ್.ಡಿ.ಕೋಟೆ, ಫೆ.5– ತಾಲೂಕಿನ ಚಿಕ್ಕ ಕೆರೆಯೂರು ಹಾಲು ಉತ್ಪಾದಕರ ಸಹಕಾರ ಸಂಘದ ಚುನಾವಣೆಯಲ್ಲಿ ಸ್ಪರ್ಧಿಸುವುದನ್ನು ತಡೆಯುವ ಸಲುವಾಗಿ ಗ್ರಾಮ ಲೆಕ್ಕಿಗ ರಮೇಶ್ ಹಾಗೂ ಕಂದಾಯ ಅಧಿಕಾರಿ ಶಂಕರ್ ಜಾತಿ ಪ್ರಮಾಣಪತ್ರ ನೀಡದೆ ನಿರ್ಲಕ್ಷ್ಯ ತೋರಿದ್ದಾರೆ ಎಂದು ಪಿಎಲ್‌ಡಿ ಬ್ಯಾಂಕ್ ಮಾಜಿ ನಿರ್ದೇಶಕ ಸಿ.ಡಿ. ನಾಗೇಂದ್ರ ಆರೋಪಿಸಿದ್ದಾರೆ.

ತಾಲೂಕು ಪತ್ರಕರ್ತರ ಸಂಘದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಚಿಕ್ಕ ಕೆರೆಯೂರು ಹಾಲು ಉತ್ಪಾದಕರ ಸಹಕಾರ ಸಂಘದ ಚುನಾವಣೆ, ಫೆ.9 ರಂದು ನಿಗದಿಯಾಗಿದ್ದು, ನಾಮಪತ್ರ ಸಲ್ಲಿಸಲು ಫೆ.1 ಕೊನೆಯ ದಿನವಾಗಿತ್ತು. ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳಾದ ಸತೀಶ್, ಬಸವರಾಜು, ಸುಂದ್ರ ಅವರು ಚುನಾವಣೆಯಲ್ಲಿ ಸ್ಪರ್ಧಿಸಲು ಜಾತಿ ಪ್ರಮಾಣಪತ್ರಕ್ಕಾಗಿ ಗ್ರಾಮ ಲೆಕ್ಕಿಗ ರಮೇಶ್ ಹಾಗೂ ಕಂದಾಯ ಅಧಿಕಾರಿ ಶಂಕರ್, ಅವರಿಗೆ ಅರ್ಜಿ ಸಲ್ಲಿಸಿದ್ದು, ಈ ಇಬ್ಬರು ಉದ್ದೇಶಪೂರಕವಾಗಿ ಈ ಮೂವರಿಗೆ ಜಾತಿ ಪ್ರಮಾಣಪತ್ರ ನೀಡಲು ವಿಳಂಬ ಮಾಡಿದ್ದಾರೆ ಎಂದರು.

ಈ ಅಧಿಕಾರಿಗಳು ಕಾಂಗ್ರೆಸ್ ಪಕ್ಷದ ಪರ ಕೆಲಸ ಮಾಡುವ ಅಧಿಕಾರಿಗಳಾಗಿದ್ದು, ಕಾಂಗ್ರೆಸ್ ಪಕ್ಷದ ಕೆಲವು ಪ್ರಭಾವಿಗಳು, ಅಧಿಕಾರಿಗಳಿಗೆ ಕುಮ್ಮಕ್ಕು ನೀಡಿ ಕಾಂಗ್ರೆಸ್ ಪಕ್ಷವರೇ ಈ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆ ಆಗಬೇಕು ಎನ್ನುವ ದೃಷ್ಟಿಯಿಂದ ಪ್ರಮಾಣಪತ್ರ ನೀಡಲು ವಿಳಂಬ ಮಾಡಿದ್ದಾರೆ ಎಂದು ನೇರವಾಗಿ ಆರೋಪ ಮಾಡಿದರು.

ಈ ಸಂಬಂಧ ಜಿಲ್ಲಾಧಿಕಾರಿಗಳು, ಜಾತಿ ಪ್ರಮಾಣಪತ್ರ ನೀಡಲು ವಿಳಂಬ ಮಾಡಿರುವ ಗ್ರಾಮಲೆಕ್ಕಿಗ ರಮೇಶ್ ಹಾಗೂ ಕಂದಾಯ ಅಧಿಕಾರಿ ಶಂಕರ್ ಅವರನ್ನ ಅಮಾನತುಗೊಳಿಸಬೇಕು. ಇಲ್ಲದಿದ್ದಲ್ಲಿ ಉಗ್ರ ಪ್ರತಿಭಟನೆ ಮಾಡಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ವಿಎಸ್ಎಸ್ಎನ್ ನಿರ್ದೇಶಕ ಕೆಂಡಪ್ಪ ಮಾತಾಡಿ, ಈ ಚುನಾವಣೆ ಕಾಂಗ್ರೆಸ್ ಪಕ್ಷದ ಪರ ಆಗಿರುತ್ತದೆ. ಅವಿರೋಧವಾಗಿ ಆಯ್ಕೆಯನ್ನು ರದ್ದುಪಡಿಸಿ, ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳಿಗೆ ನ್ಯಾಯ ದೊರಕಿಸಿ ಕೊಡಲು ಮತ್ತೊಮ್ಮೆ ಚುನಾವಣೆ ನಡೆಸಬೇಕು ಎಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಗ್ರಾಪಂ ಸದಸ್ಯ ಚೆಲುವರಾಜು, ಹಾಲು ಉತ್ಪಾದಕರ ಮಾಜಿ ನಿರ್ದೇಶಕ ಸುರೇಶ್ ಮುಖಂಡರುಗಳಾದ ಸತೀಶ್, ಸಿ.ಎನ್. ಉಮೇಶ್, ಶರತ್, ರಾಜಶೇಖರ್, ಗುರು, ಪಿ ನಾಗರಾಜಪ್ಪ ಬಿಳಿಯಯ್ಯ ಸುಂದ್ರ ಇದ್ದರು.

ಮನುಷ್ಯ, ಮಣ್ಣಿನ ಆರೋಗ್ಯಕ್ಕೆ ಹಸು ಅಗತ್ಯ

ಸುತ್ತೂರಿನಲ್ಲಿ ಹಸು, ಕರುಗಳಿಗೆ ನಾಮಕರಣ



ಹಸು ಮತ್ತು ಕರುಗಳಿಗೆ ನಾಮಕರಣ ಮಾಡಲಾಯಿತು.

ಸುತ್ತೂರು, ಫೆ.5– ವರುಣ ಕ್ಷೇತ್ರದ ಸುತ್ತೂರಿನ ರೈತ ಕುಟುಂಬ ಲಿಂಗ ನಾಯಕ ಮತ್ತು ಅವರ ಪುತ್ರ ಪತ್ರಿಕಾ ಛಾಯಾಗ್ರಾಹಕ ಸುತ್ತೂರು ನಂಜುಂಡ ನಾಯಕ ಅವರ ನಿವಾಸದಲ್ಲಿ ಹಸು ಮತ್ತು ಕರುಗಳಿಗೆ ಗೌರಿ, ಗಂಗೆ ಮತ್ತು ಕಪಿಲೆ ಎಂದು ನಾಮಕರಣ ಮಾಡಲಾಯಿತು.

ನಾಮಕರಣದಲ್ಲಿ ಭಾಗವಹಿಸಿದ್ದ ಶಾಸಕ ಡಾ.ಯತೀಂದ್ರ ಮಾತನಾಡಿ, ಮನುಷ್ಯ ಹಾಗೂ ಮಣ್ಣಿನ ಆರೋಗ್ಯ ಕಾಪಾಡಲು ಪ್ರತಿ ಮನೆಗೊಂದು ಹಸು ಬೇಕು ಎಂದರು.

ಗ್ರಾಮಗಳಲ್ಲಿ ಪ್ರತಿ ರೈತನ ಮನೆಯಲ್ಲೂ ಹಸುಗಳು ಇದ್ದರೆ ಮಾತ್ರ. ರೈತರ ಆರ್ಥಿಕ ಮಟ್ಟ ಹಾಗೂ ರೈತರ ಕುಟುಂಬದ ಬದುಕು ಸುಧಾರಣೆಯಾಗಲು ಸಾಧ್ಯ ಅಲ್ಲದೆ ಹಸುಗಳಿಗೆ ಹೆಸರು ಇಟ್ಟರೆ. ಮನುಷ್ಯನ ರೀತಿ ನಮ್ಮನ್ನು ಹಸುಗಳು ಪ್ರೀತಿಯಿಂದ ಕಾಣುತ್ತವೆ ಮತ್ತು ಹಸುಗಳು ನೀಡುವ ಹಾಲು ಸೇವನೆಯಿಂದ ನಮ್ಮ ಆರೋಗ್ಯ ಕಾಪಾಡಿಕೊಳ್ಳಬಹುದು. ಹಸುಗಳ ಸಾಕಾಣಿಕೆಯಿಂದ ನೆಮ್ಮದಿ ಜೀವನ ನಡೆಸಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ವಿಜಯಕುಮಾರ್, ಸುತ್ತೂರು ಗ್ರಾಮ ಪಂಚಾಯಿತಿ ಅಧ್ಯಕ್ಷ ರಂಗಸ್ವಾಮಿ ಮಾತನಾಡಿದರು. ರಾಜ್ಯ ವಾಲ್ಮೀಕಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್‌ಸಿ ಬಸವರಾಜ್, ಯಜಮಾನ ರಂಗಪ್ಪ, ಮುಖಂಡರಾದ ರವಿಕುಮಾರ್, ಮಾಳಿಗೆ ನಾಯ್ಕ, ಹೆಬ್ಬೆರಾಜು, ರೈತ ಮುಖಂಡರಾದ ಎಸ್.ಆರ್. ಲಿಂಗರಾಜು, ಸಿದ್ದಪ್ಪ, ಸಿದ್ದೇಗೌಡ, ಕೃಷ್ಣ, ಶ್ರೀಕಂಠ ಸ್ವಾಮಿ, ರಮೇಶ್, ಶಿವಣ್ಣ, ಗುರುರಾಜ್, ಮಾದಪ್ಪ, ಬಸವರಾಜು, ಕಾರ್ತಿಕ್, ಕೆಎಸ್. ಉಂಡಿ ರವಿ, ಶಿವಾಗು ಮುಂತಾದ ರೈತರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಪಿಟೀಲ್ ಟಿ.ಚೌಡಯ್ಯ ಸ್ಮಾರಕಕ್ಕೆ ಸೇರಿದ ಜಾಗ ಖಾಸಗಿ ವ್ಯಕ್ತಿಗೆ ಖಾತೆ

ಪುರಸಭಾ ಮುಖ್ಯಾಧಿಕಾರಿ ವಿರುದ್ಧ ದಸಂಸ ಪ್ರಧಾನ ಸಂಚಾಲಕ ಆರೋಪ



ಸುದ್ದಿಗೋಷ್ಠಿಯಲ್ಲಿ ದಸಂಸ ಜಿಲ್ಲಾ ಪ್ರಧಾನ ಸಂಚಾಲಕ ಬನ್ನಹಳ್ಳಿ ಸೋಮಣ್ಣ ಮಾತನಾಡಿದರು.

ತಿ.ನರಸೀಪುರ, ಫೆ.5– ಸಂಗೀತ ರತ್ನ ಪಿಟೀಲು ಟಿ.ಚೌಡಯ್ಯ ಸ್ಮಾರಕಕ್ಕೆ ಸೇರಿದ ಜಾಗವನ್ನು ಪುರಸಭೆ ಮುಖ್ಯಾಧಿಕಾರಿ ರಾಜಕೀಯ ಪ್ರಭಾವಕ್ಕೆ ಮಣಿದು ಖಾಸಗಿ ವ್ಯಕ್ತಿಗೆ ಖಾತೆ ಮಾಡಿದ್ದಾರೆ ಎಂದು ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಪ್ರಧಾನ ಸಂಚಾಲಕ ಬನ್ನಹಳ್ಳಿ ಸೋಮಣ್ಣ ಆರೋಪಿಸಿದ್ದಾರೆ.

ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಟ್ಟಣದ ಬೈರಾಪುರ ಸರ್ವೆ ನಂ.48ರ 1.02 ಎಕರೆ ನಿವೇಶನದ ಪೈಕಿ 12 ಗುಂಟೆ ಜಮೀನನ್ನು 1972ರಲ್ಲಿ ಟಿ.ಚೌಡಯ್ಯ ಮೆಮೋರಿಯಲ್ ಗಾಯನ ಸಮಾಜಕ್ಕೆ ಸರ್ಕಾರ ಮಂಜೂರು ಮಾಡಿದ್ದು, ಆರ್‌ಟಿಸಿ ಮತ್ತು ಎಂಆರ್‌ನಲ್ಲಿ ಯಥಾವತ್ ನಮೂದಾಗಿರುತ್ತದೆ. ಅಲ್ಲದೆ 2002ರಲ್ಲಿಯೂ ಕೂಡ ಖಾತೆ ಹಾಗೆಯೇ ಮುಂದುವರೆದಿದೆ ಎಂದರು.

ಆದರೆ ಇತ್ತೀಚಿಗೆ ಪುರಸಭೆ ಮುಖ್ಯಾಧಿಕಾರಿ ಬಿ.ಕೆ. ವಸಂತಕುಮಾರಿ ಅವರು ಸರ್ವೆ ನಂಬರ್ ನಲ್ಲಿದ್ದ ಸದರಿ ಜಮೀನನ್ನು ಕೆಎಂಎಫ್ ನಲ್ಲಿ ಕಾರ್ಯದರ್ಶಿಗಳು, ಸಂಗೀತ ರತ್ನ ಟಿ. ಚೌಡಯ್ಯ ಸ್ಮಾರಕ ಭವನ ಟ್ರಸ್ಟ್ ಎಂದು ತಿದ್ದುಪಡಿ ಅಂತ ನಮೂದು ಮಾಡಿ ಖಾತೆ ಮಾಡಿಕೊಟ್ಟಿದ್ದಾರೆ. ಖಾತೆ ಮಾಡಿರುವ ಕೆಎಂಎಫ್ ನಲ್ಲಿ ಡಬ್ಲ್ಯೂ 5461/1999 ಕೋರ್ಟ್ ಆದೇಶ ಎಂದು ನಮೂದಾಗಿದೆ. ಆದರೆ, ಟಿ.ಚೌಡಯ್ಯ ಸ್ಮಾರಕ ಟ್ರಸ್ಟ್ 2010ರಲ್ಲಿ ನೋಂದಣಿಯಾಗಿದೆ. ಹಾಗಾಗಿ ಟಿ.ಚೌಡಯ್ಯ ಮೆಮೋರಿಯಲ್ ಗಾಯನ ಸಮಾಜಕ್ಕೆ ಸೇರಬೇಕಾದ ಕೋಟ್ಯಂತರ ರೂ. ಬೆಲೆ ಬಾಳುವ ಸರ್ಕಾರಿ ಜಾಗವನ್ನು ಆಮಿಷಕ್ಕೆ ಮಣಿದು ಅಕ್ರಮವಾಗಿ ಖಾತೆ ಮಾಡಿರುವ ಪುರಸಭೆ ಮುಖ್ಯಾಧಿಕಾರಿ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು ಮತ್ತು ಖಾತೆಯನ್ನು ರದ್ದುಪಡಿಸಬೇಕು ಎಂದು ಆಗ್ರಹಿಸಿದರು. ಇಲ್ಲದಿದ್ದರೆ ಪುರಸಭೆ ಮುಂಭಾಗ ಹೋರಾಟ ಮಾಡಬೇಕಾಗುತ್ತದೆ ಎಂದು ಸೋಮಣ್ಣ ಎಚ್ಚರಿಸಿದರು.

ತಾಲೂಕು ಪ್ರಧಾನ ಕಾರ್ಯದರ್ಶಿ ಕನ್ನಹಳ್ಳಿ ಶಿವಕುಮಾರ್, ಜಿಲ್ಲಾ ಸಂಚಾಲಕ ವಾಟಾಳು ನಾಗರಾಜು, ಜಿಲ್ಲಾ ವಿದ್ಯಾರ್ಥಿ ಸಂಘದ ಧಮ್ಮ ಅಶೋಕ, ಕನ್ನಹಳ್ಳಿ ಸೋಮಣ್ಣ, ತಾಲೂಕು ಖಜಾಂಚಿ ಡಣಾಯಕಪುರ ಬಸವಣ್ಣ ಹಿರಿಯೂರು ಮಹದೇವ ಇದ್ದರು.

ಅಲೆಮಾರಿ ಕುಟುಂಬಗಳು ಮುಖ್ಯವಾಹಿನಿಗೆ ಬರಬೇಕು



ಕುಂದು–ಕೊರತೆ ಸಭೆಯನ್ನು ತಹಸೀಲ್ದಾರ್ ಮಂಜುನಾಥ್ ಉದ್ಘಾಟಿಸಿದರು.

ಹುಣಸೂರು, ಫೆ.5– ಹುಟ್ಟು ಸಾವುಗಳಿಗೆ ಸರಿಯಾದ ದಾಖಲೆಗಳೆ ಇಲ್ಲದೆ ಪಾಳು ಮಂಟಪಗಳಲ್ಲಿ ಸಂಕಷ್ಟದ ಜೀವನ ನಡೆಸುತ್ತಿರುವ ನಿರ್ಗತಿಕ ಅಲೆಮಾರಿ ಕುಟುಂಬಗಳು ಸಮಾಜದ ಮುಖ್ಯವಾಹಿನಿಗೆ ಬರುವ ಕೆಲಸ ಆಗಬೇಕಿದೆ ಎಂದು ಹುಣಸೂರು ತಹಸೀಲ್ದಾರ್ ಮಂಜುನಾಥ್ ಹೇಳಿದರು.

ತಾಲೂಕು ಗೋವಿಂದನಹಳ್ಳಿ ಗ್ರಾಪಂಗೆ ಒಳಪಡುವ ಬಾಚಳ್ಳಿ ರಸ್ತೆಯ ಅಂಬೇಡ್ಕರ್ ನಗರದಲ್ಲಿ ದಸಂಸವು ಆಯೋಜಿಸಿದ್ದ ನಿರ್ಗತಿಕ ಅಲೆಮಾರಿಗಳ ಕುಂದು–ಕೊರತೆ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಹಲವಾರು ವರ್ಷಗಳಿಂದ ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ವರ್ಗಕ್ಕೆ ಸೇರಿದ ನಿರ್ಗತಿಕ ಅಲೆಮಾರಿ ಕುಟುಂಬಗಳು ವಾಸಿಸಲು ಸರಿಯಾದ ನೆಲೆಯಿಲ್ಲದೆ ಅವಮಾನ, ಹಂಗಿನ ಬದುಕನ್ನು ಸಾಗಿಸುವ ಸ್ಥಿತಿಯನ್ನು ನಾವು ನೋಡುತ್ತಿದ್ದೇವೆ ಎಂದರು.

ಇಂತಹ ಸೌಲಭ್ಯ ವಂಚಿತ ಅಲೆಮಾರಿ ಕುಟುಂಬಗಳ ಪುನರ್ವಸತಿಗೆ ಅಧಿಕಾರಿಗಳು ಇಚ್ಛಾಶಕ್ತಿಯಿಂದ ಕೆಲಸ ಮಾಡಬೇಕಾಗಿದೆ. ಡಾ. ಬಿ.ಆರ್.ಅಂಬೇಡ್ಕರ್ ಅವರ ಆಶಯದಂತೆ ಅಲೆಮಾರಿ ನಿರ್ಗತಿಕ ಕುಟುಂಬಗಳಿಗೆ ಎಷ್ಟೇ ಕಷ್ಟವಿದ್ದರೂ ಮಕ್ಕಳನ್ನು ಶಾಲೆಗೆ ಸೇರಿಸಿ ವಿದ್ಯಾವಂತರನ್ನಾಗಿ ಮಾಡಿ ಅವರು ಸರ್ಕಾರಿ ಉದ್ಯೋಗ ಪಡೆದು ಸಮಾಜದ ಮುಖ್ಯವಾಹಿನಿಗೆ ಬರುವಂತಹ ಕೆಲಸ ಮಾಡಬೇಕು ಎಂದು ಅವರು ಹೇಳಿದರು.

ದಸಂಸ ಮನವಿ ಮೇರೆಗೆ ಬಾಚಳ್ಳಿ ಗ್ರಾಮಕ್ಕೆ 1 ಎಕರೆ ಸ್ಮಶಾನ ಜಾಗವನ್ನು ಮಂಜೂರು ಮಾಡುವಂತೆ ಕಂದಾಯ ಇಲಾಖೆಗೆ ವಹಿಸಲಾಗಿದೆ. 94 ಸಿ ಯೋಜನೆಯಡಿ ಇನ್ನು ಕೆಲವು ಕುಟುಂಬಗಳಿಗೆ ಹಕ್ಕು ಪತ್ರ ಕೊಡಲು ಸರ್ಕಾರದಿಂದ ಸೂಚನೆ ಬಂದ ತಕ್ಷಣವೇ ಹಕ್ಕು ಪತ್ರ ಕೊಡಲು ಕ್ರಮ ವಹಿಸಲಾಗುವುದು ಎಂದರು. ಹುಣಸೂರು ಕಾರ್ಯನಿರ್ವಹಣಾಧಿಕಾರಿಗಳಾದ ಹೊಂಗಯ್ಯ ಮಾತನಾಡಿದರು.

ಸಭೆಯಲ್ಲಿ ದಸಂಸದ ಜಿಲ್ಲಾ ಸಂಚಾಲಕರಾದ ನಿಂಗರಾಜ್ ಮಲ್ಲಾಡಿ ಮಾತನಾಡಿ ದಸಂಸ ನೊಂದವರು, ಹಸಿದವರು, ಬೀದಿಯಲ್ಲಿ ಬಿದ್ದ ಜನರ ಕಷ್ಟಗಳಿಗೆ ಸ್ಪಂದಿಸುತ್ತಾ ಯಾವುದೇ ಜಾತಿ ಧರ್ಮದ ಬೇದವಿಲ್ಲದೆ ಹಲವಾರು ವರ್ಷಗಳಿಂದ ಹೋರಾಟ ಮಾಡುತ್ತಾ ಬರುತ್ತಿದೆ ಎಂದರು.

ಈ ಸಂದರ್ಭದಲ್ಲಿ ಗಿರಿಜನ ಕಲ್ಯಾಣಾಧಿಕಾರಿ ಗಂಗಾಧರ್, ಸಮಾಜ ಕಲ್ಯಾಣ ಇಲಾಖೆಯ ವ್ಯವಸ್ಥಾಪಕ ದಿಲೀಪ್, ಪ್ರಸಾದ್, ಹುಣಸೂರು ಪಟ್ಟಣ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ನಾಗಯ್ಯ, ಪಂಚಾಯ್ತಿ ಪಿಡಿಓ ರಾಜ್‌ಕುಮಾರ್, ಅಧ್ಯಕ್ಷರಾದ ರಾಣಿ ಶಿವಾಮು, ಕಾರ್ಯದರ್ಶಿ ಮಹೇಶ, ಬಿಲ್ ಕಲೆಕ್ಟರ್ ಲೋಕೇಶ, ಸದಸ್ಯರಾದ ಕಮಲಮ್ಮ ಶಿವಲಿಂಗ, ನಂದೀಶ, ಕೆಇಬಿ ಅಧಿಕಾರಿಗಳು, ದಸಂಸ ದ ದೇವೇಂದ್ರ, ಗಜೇಂದ್ರ, ಚಿಕ್ಕಹುಣಸೂರು ಗ್ರಾಮದ ಮುಖಂಡ ರಾಜು, ಅಂಬೇಡ್ಕರ್ ನಗರದ ಮುಖಂಡರುಗಳಾದ ಶೇಖರ, ಹರೀಶ, ವಸಂತ, ವೇಣುಗೋಪಾಲ, ಮುರುಗೇಶ, ಶೋಭಾ, ಗಾಯಿತ್ರಿ ಮುಂತಾದ ನೂರಾರು ಬಡ ಕುಟುಂಬದವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಇಂದು, ನಾಳೆ, ಮೈಸೂರಿನ ಕೆಲವೆಡೆ ನೀರು ವ್ಯತ್ಯಯ

ಮೈಸೂರು, ಫೆ.5– ಮೇಳಾಪುರ ಕೊಳವೆ ಮಾರ್ಗದ ದುರಸ್ತಿ ಹಿನ್ನೆಲೆಯಲ್ಲಿ ಫೆ.6 ಮತ್ತು 7ರಂದು ಮೈಸೂರಿನ ವಾರ್ಡ್ ನಂ.9ರಿಂದ 16, 28ರಿಂದ 39, 52, 53 ಇದಕ್ಕೆ ಸಂಬಂಧಪಟ್ಟ ಪ್ರದೇಶಗಳಾದ ಕೆಸರೆ, ರಾಜೇಂದ್ರನಗರ, ಸುಭಾಷ್‌ನಗರ, ಎನ್.ಆರ್.ಮೊಹಲ್ಲಾ, ಗಾಂಧಿನಗರ, ಉದಯಗಿರಿ, ರಾಜೀವ್‌ನಗರ 1, 2 ಮತ್ತು 3ನೇ ಹಂತ, ಶಾಂತಿನಗರ, ಕಲ್ಯಾಣಗಿರಿ, ಡಾ. ರಾಜ್‌ಕುಮಾರ್ ರಸ್ತೆಗೆ ಸೇರಿಕೊಂಡ ಪ್ರದೇಶಗಳು, ಯರಗನಹಳ್ಳಿ, ಸಿದ್ದಾರ್ಥ ಬಡಾವಣೆ, ಆಲನಹಳ್ಳಿ ನಂದಿನಿ ಬಡಾವಣೆ, ಗಿರಿದರ್ಶಿನಿ ಬಡಾವಣೆ, ಗೌಸಿಯಾನಗರ, ಕ್ಯಾತಮಾರನಹಳ್ಳಿ ಹಾಗೂ ಇನ್ನಿತರ ಪ್ರದೇಶಗಳಲ್ಲಿ ನೀರು ಸರಬರಾಜಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ವಿವಿ ವಾಟರ್ ವರ್ಕ್ಸ್ ಪ್ರಕಟಣೆ ತಿಳಿಸಿದೆ

ಟಿಪ್ಪರ್ ಡಿಕ್ಕಿ: ಬೈಕ್ ಹಿಂಬದಿ ಸವಾರ ಸಾವು

ಮತ್ತೊಬ್ಬನಿಗೆ ಗಾಯ, ನಂ.ಗೂಡು ಬಳಿ ದುರಂತ

ನಂಜನಗೂಡು, ಫೆ.5– ಟಿಪ್ಪರ್ ಬೈಕಿಗೆ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಹಿಂಬದಿ ಸವಾರ ಸ್ಥಳದಲ್ಲಿಯೇ ಸಾವನ್ನಪ್ಪಿ, ಬೈಕ್ ಸವಾರ ಗಂಭೀರವಾಗಿ ಗಾಯಗೊಂಡಿರುವ ಘಟನೆ ಮಂಗಳವಾರ ತಡರಾತ್ರಿ ನಗರದ ಹುಲ್ಲಹಳ್ಳಿ ರಸ್ತೆಯ ಮಹದೇಶ್ವರ ಲೇಔಟ್ ಬಳಿ ಜರುಗಿದೆ.

ದೇಬೂರು ಗ್ರಾಮದ ರಂಗಸ್ವಾಮಿ ಪುತ್ರ ಕಿಶೋರ್(22) ಮೃತ ದುರ್ದೈವಿ. ಬೈಕ್ ಸವಾರ ದುಗ್ಗಹಳ್ಳಿ ಗ್ರಾಮದ ಪ್ರಜ್ವಲ್(23) ಕಾಲು ಮತ್ತು ಕೈಗೆ ಗಂಭೀರ ಸ್ವರೂಪದ ಗಾಯಗಳಾಗಿದ್ದು, ಮೈಸೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ.

ಕಿಶೋರ್ ಮತ್ತು ಪ್ರಜ್ವಲ್ ಕುಬೇರ ಮಿತ್ರ ಎಂಬ ಖಾಸಗಿ ಫೈನಾನ್ಸ್‌ನಲ್ಲಿ ಕೆಲಸ ಮಾಡುತ್ತಿದ್ದು, ನಗರದ ಬಡಾವಣೆಯೊಂದರ ಬಾಡಿಗೆ ಕೊಠಡಿಯಲ್ಲಿ ವಾಸವಾಗಿದ್ದರು. ಪ್ರಜ್ವಲ್ ತನ್ನ ಸ್ನೇಹಿತ ಕಿಶೋರ್ ಅವರ ದೇಬೂರು ಗ್ರಾಮದ ಮನೆಗೆ ತೆರಳಿದ್ದರು. ಕಾರ್ಯನಿಮಿತ್ತ ವಾಪಸ್ ನಂಜನಗೂಡಿಗೆ ಬರುತ್ತಿದ್ದ ವೇಳೆ ನಗರದ ಮಹದೇಶ್ವರ ಲೇಔಟ್ ಬಳಿ ನಂಜನಗೂಡು ಕಡೆಯಿಂದ ಚಾಲಕನ ನಿರ್ಲಕ್ಷ್ಯದಿಂದ ಅತಿ ವೇಗವಾಗಿ ಬಂದ ಟಿಪ್ಪರ್ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಹಿಂಬದಿಯಲ್ಲಿ ಕುಳಿತಿದ್ದ ಕಿಶೋರ್ ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾರೆ. ಬೈಕ್ ಚಾಲಕ ದುಗ್ಗಹಳ್ಳಿಯ ಪ್ರಜ್ವಲ್ ಗಾಯಗೊಂಡಿದ್ದು, ಮೈಸೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಸಂಚಾರಿ ಪೊಲೀಸರು ತಿಳಿಸಿದ್ದಾರೆ.

ಸ್ಥಳಕ್ಕೆ ಸಂಚಾರಿ ಪೊಲೀಸ್ ಠಾಣೆಯ ಪಿಎಸ್‌ಐ ಸಿದ್ದರಾಜು ಭೇಟಿ ನೀಡಿ ಪರಿಶೀಲನೆ ನಡೆಸಿ ವಾಹನವನ್ನು ವಶಕ್ಕೆ ಪಡೆದಿದ್ದಾರೆ. ಈ ಸಂಬಂಧ ನಂಜನಗೂಡು ಸಂಚಾರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.



ಕೊಡವಾಮೆ ಬಾಳೋ ನಾಲ್ಕನೇ ದಿನದ ಪಾದಯಾತ್ರೆ...

ಕೊಡವ ಸಂಸ್ಕೃತಿ ಉಳಿವಿಗಾಗಿ ಅಖಿಲ ಕೊಡವ ಸಮುದಾಯದ ನೇತೃತ್ವದಲ್ಲಿ ಕುಟ್ಟದಿಂದ ಮಡಿಕೇರಿವರೆಗೆ ನಡೆಯುತ್ತಿರುವ ಪಾದಯಾತ್ರೆಯು ನಾಲ್ಕನೇ ದಿನವಾದ ಬುಧವಾರ ವಿರಾಜಪೇಟೆಯ ಬಿಟ್ಟಂಗಾಲದಿಂದ ಬೇತ್ರಿವರೆಗೆ ಸಾಗಿತು. ಈ ಪಾದಯಾತ್ರೆಯಲ್ಲಿ ಸಾವಿರಾರು ಕೊಡವ ಪುರುಷ ಹಾಗೂ ಮಹಿಳೆಯರು ಕೊಡವ ಪಾರಂಪರಿಕ ಉಡುಗೆ ತೊಟ್ಟು ಸಾಗಿದರು.

ಆನ್‌ಲೈನ್ ಮೂಲಕ ಹಣದ ವ್ಯವಹಾರ ಎಚ್ಚರ...!

ಮೈಸೂರು, ಫೆ.5(ಎಂಕೆ)– ಸೈಬರ್ ಅಪರಾಧ ಪ್ರಕರಣಗಳು ಹೆಚ್ಚಾಗುತ್ತಿದ್ದು ಎಚ್ಚರಿಕೆಯಿಂದ ಆನ್‌ಲೈನ್ ಹಣಕಾಸು ವ್ಯವಹಾರ ನಡೆಸುವುದರ ಜೊತೆಗೆ ಮಾದಕ ವಸ್ತುಗಳಿಂದ ಮಕ್ಕಳನ್ನು ದೂರವಿಡುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ವಿಷ್ಣುವರ್ಧನ್ ಎಚ್ಚರಿಸಿದರು.

ಮೈಸೂರು ತಾಲೂಕಿನ ವರುಣಾ ಪೊಲೀಸ್ ಠಾಣಾ ವ್ಯಾಪ್ತಿಯ ಖಾಸಗಿ ಹೋಟೆಲ್‌ನಲ್ಲಿ ಬುಧವಾರ ಜನಸಂಪರ್ಕ ಸಭೆ ನಡೆಸಿದ ಅವರು, ತಂತ್ರಜ್ಞಾನ ಬೆಳೆದಂತೆ ಆನ್‌ಲೈನ್ ವಂಚನೆಯೂ ಹೆಚ್ಚಾಗುತ್ತಿದೆ. ಇದರ ಬಗ್ಗೆ ಬಹಳ ಎಚ್ಚರಿಕೆಯಿಂದಿರಬೇಕು. ನಂಬಿಕಾರ್ಹ ಆ್ಯಪ್‌ಗಳ ಮೂಲಕವೇ ಶಾಪಿಂಗ್ ಮಾಡಬೇಕು. ಬ್ಯಾಂಕ್ ಖಾತೆಯ ಮಾಹಿತಿ ಬೇರೆಯವರೊಂದಿಗೆ ಹಂಚಿಕೊಳ್ಳಬಾರದು ಎಂದು ತಿಳಿಹೇಳಿದರು.

ಭವಿಷ್ಯದಲ್ಲಿ ದೇಶದ ಆಸ್ತಿಯಾಗಬೇಕಾದ ಯುವ ಸಮೂಹ ದಾರಿ ತಪ್ಪುತ್ತಿದೆ. ಯುವಕ–ಯುವತಿಯರು ಮಾದಕ ವ್ಯಸನಕ್ಕೆ ತುತ್ತಾಗುತ್ತಿದ್ದು, ಪೋಷಕರು ತಮ್ಮ ತಮ್ಮ ಮಕ್ಕಳ ಚಟುವಟಿಕೆಗಳ ಮೇಲೆ ಗಮನಹರಿಸಬೇಕು. ಮುಖ್ಯವಾಗಿ ಮಾದಕ ವಸ್ತುಗಳು ಅವರ ಕೈಗೆ ಸಿಗದಂತೆ ನೋಡಿಕೊಳ್ಳುವುದರ ಜೊತೆಗೆ ಬಿಡುವಿನ ಸಮಯದಲ್ಲಿ ಪಠ್ಯೇತರ ಚಟುವಟಿಕೆಗಳಲ್ಲಿ ಅವರು ಸದಾ ತೊಡಗಿಕೊಳ್ಳುವಂತೆ ನೋಡಿಕೊಳ್ಳಿ ಎಂದು ಕಿವಿಮಾತು ಹೇಳಿದರು. ಅಪಘಾತ ಪ್ರಕರಣಗಳ ಸಂಖ್ಯೆಯೂ ಹೆಚ್ಚಾಗುತ್ತಿದ್ದು, ಪ್ರತಿಯೊಬ್ಬರು ಸಂಚಾರ ನಿಯಮಗಳನ್ನು ಚಾಚೂ ತಪ್ಪದೆ ಪಾಲಿಸಬೇಕು. ಹೆಲ್ಮೆಟ್ ಧರಿಸಿದರೆ ಪ್ರಾಣಾಪಾಯದಿಂದ ಪಾರಾಗಬಹುದು ಎಂದು ಹಲವು ಉದಾಹರಣೆಗಳ ಮೂಲಕ ತಿಳಿಸಿದರು.

ಮಾದಕ ವಸ್ತುಗಳಿಂದ ಮಕ್ಕಳ ದೂರವಿಡಿ: ಪೋಷಕರಿಗೆ ಎಸ್ಪಿ ಕಿವಿಮಾತು



ವರುಣ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಜನಸಂಪರ್ಕ ಸಭೆಯಲ್ಲಿ ಎಸ್ಪಿ ಎನ್.ವಿಷ್ಣುವರ್ಧನ್ ಮಾತನಾಡಿದರು.

ಅಹವಾಲು ಸ್ವೀಕಾರ: ಇದೇ ವೇಳೆ ಗ್ರಾಮಗಳಲ್ಲಿ ಅಕ್ರಮವಾಗಿ ಮದ್ಯ ಮಾರಾಟ, ಸಿಸಿಟಿವಿ ಇಲ್ಲದಿರುವುದು, ರಸ್ತೆಗಳಲ್ಲಿ ಹಂಪ್ ಇಲ್ಲದಿರುವುದು, ಶಾಲಾ–ಕಾಲೇಜು ಸಮೀಪದಲ್ಲಿ ಬಾರ್ ಮತ್ತು ಟೀ ಅಂಗಡಿಗಳ ತೆರವುಗೊಳಿಸುವುದು ಸೇರಿದಂತೆ ಬೇರೆ ಇಲಾಖೆಗೆ ಸಂಬಂಧಿಸಿದ ಅಹವಾಲು ಸ್ವೀಕರಿಸಲಾಯಿತು. ಜನಸಂಪರ್ಕ ಸಭೆಯಲ್ಲಿ ವರುಣ ಪೊಲೀಸ್ ಠಾಣೆ ವ್ಯಾಪ್ತಿಯ ಗ್ರಾಮಗಳಿಂದ 250 ರಿಂದ 300 ಜನ ಜನಪ್ರತಿನಿಧಿಗಳು, ವಿವಿಧ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ಸಾರ್ವಜನಿಕರು ಪಾಲ್ಗೊಂಡು ತಮ್ಮ ತಮ್ಮ ಕುಂದು–ಕೊರತೆಗಳ ಬಗ್ಗೆ ಚರ್ಚಿಸಿದರು.

ಸಮಸ್ಯೆಗಳನ್ನು ಬಗೆಹರಿಸಲಾಗುವುದು: ಅಹವಾಲು ಸ್ವೀಕರಿಸಿ, ಸಮಸ್ಯೆಗಳನ್ನು ಆಲಿಸಿದ ಪೊಲೀಸ್ ಎಸ್‌ಪಿ ಎನ್. ವಿಷ್ಣುವರ್ಧನ್ ಮುಂದಿನ ಸಭೆಯೊಳಗಾಗಿ ಸಾಧ್ಯವಾದಷ್ಟು ಸಮಸ್ಯೆಗಳ ಬಗ್ಗೆ ಅಗತ್ಯ ಕ್ರಮ ವಹಿಸಲಾಗುವುದು ಎಂದು ಭರವಸೆ ನೀಡಿದರು.

ಸಭೆಯಲ್ಲಿ ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ಸಿ.ಮಲ್ಲಿಕ್, ಎಲ್.ನಾಗೇಶ್, ಮೈಸೂರು ಗ್ರಾಮಾಂತರ ಉಪ ವಿಭಾಗದ ಪೊಲೀಸ್ ಉಪ ಅಧೀಕ್ಷಕರು ಮತ್ತು ಸಿಪಿಐಯವರು ಹಾಜರಿದ್ದರು.

ನರೇಂದ್ರಸ್ವಾಮಿ ಮಾಲಿನ್ಯ ನಿಯಂತ್ರಣ ಮಂಡಳಿಗೆ ಅಧ್ಯಕ್ಷ



ಮಳವಳ್ಳಿ ಶಾಸಕ ಪಿ.ಎಂ.ನರೇಂದ್ರಸ್ವಾಮಿ ಅವರನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದ್ದು, ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ, ಮದ್ದೂರು ಶಾಸಕ ಉದಯ್ ಮತ್ತಿತರರು ಅಭಿನಂದಿಸಿದರು.

ಅಂತರರಾಷ್ಟ್ರೀಯ ಸುಸ್ಥಿರತೆ ತಂತ್ರಜ್ಞಾನ ಕುರಿತು ಸಮಾವೇಶ

ಮೈಸೂರು, ಫೆ.5– ಮೈಸೂರಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್, ಫಚೋಚ್ಚುಲೆ ಡಾರ್ಟ್ಮುಂಡ್ –ಅಪ್ಲೈಡ್ ಸೈನ್ಸ್ ಮತ್ತು ಆರ್ಟ್ಸ್ ವಿಶ್ವವಿದ್ಯಾನಿಲಯ, ಡಾರ್ಟ್ಮುಂಡ್, ಜರ್ಮನಿ ಮತ್ತು ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಹಯೋಗದಲ್ಲಿ ಫೆ.19 ಮತ್ತು 20ರಂದು ಎನ್‌ಐಇ ಇಂಜಿನಿಯರಿಂಗ್ ಕಾಲೇಜಿನ ದಕ್ಷಿಣ ಕ್ಯಾಂಪಸ್‌ನಲ್ಲಿ ಅಂತರರಾಷ್ಟ್ರೀಯ ಸುಸ್ಥಿರತೆ ತಂತ್ರಜ್ಞಾನಗಳು ಕುರಿತು ಸಮಾವೇಶ ನಡೆಯಲಿದೆ. ಸಮಾವೇಶದಲ್ಲಿ ಸುಸ್ಥಿರತೆಯ ತಂತ್ರಜ್ಞಾನಗಳ ಕ್ಷೇತ್ರದಲ್ಲಿ ನಡೆದಿರುವ ವಿವಿಧ ಸಂಶೋಧನಾ ಕಾರ್ಯಗಳನ್ನು ಪ್ರಸ್ತುತ ಪಡಿಸಲಾಗುವುದು. ಭಾರತದ ವಿವಿಧ ಭಾಗಗಳು ಮತ್ತು ವಿದೇಶಗಳಿಂದ ಸಂಶೋಧಕರು ಭಾಗವಹಿಸಲಿದ್ದಾರೆ. ಮಾಹಿತಿಗೆ ಡಾ.ಶರತ್‌ಚಂದ್ರ ಎನ್.–9886798350, 9964199919 ಸಂಪರ್ಕಿಸಬಹುದು.

ಭಾರಿ ಉಡುಗೊರೆ ಆಮಿಷ ತೋರಿ ಮಹಿಳೆಗೆ 5.6 ಲಕ್ಷ ರೂ. ವಂಚನೆ

ಮೈಸೂರು,ಫೆ.5(ಪಿಎಂ)– ಫೇಸ್‌ಬುಕ್‌ನಲ್ಲಿ ಸ್ನೇಹಿತನಾದ ಅಪರಿಚಿತನೊಬ್ಬ ಉಡುಗೊರೆ ಕಳುಹಿಸಿರುವುದಾಗಿ ಹೇಳಿ ಮಹಿಳೆಯೊಬ್ಬರಿಂದ ಆನ್‌ಲೈನ್ ಮೂಲಕ 5.6 ಲಕ್ಷ ರೂ. ವಂಚಿಸಿರುವ ಸಂಬಂಧ ಮೈಸೂರಿನ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಿನ ಗೋಕುಲಂನ ಮಹಿಳೆಯೊಬ್ಬರು ವಂಚನೆಗೆ ಒಳಗಾದವರಾಗಿದ್ದು, ಇವರಿಗೆ ಫೇಸ್‌ಬುಕ್‌ನಲ್ಲಿ ಪರಿಚಯವಾದ ವಂಚಕ ತಾನು ಯುಕೆಯಲ್ಲಿ ಡಾಕ್ಟರ್ ಆಗಿರುವುದಾಗಿ ಹೇಳಿಕೊಂಡಿದ್ದಲ್ಲದೆ, ಮಹಿಳೆಗೆ ಉಡುಗೊರೆ ಕಳುಹಿಸುವುದಾಗಿ ತಿಳಿಸಿ, ಪಾರ್ಸಲ್ ಕಳುಹಿಸುತ್ತಿರುವ ವಿಡಿಯೋ ಸಹ ಕಳುಹಿಸಿದ್ದಾನೆ. ನಂತರ ಪಾರ್ಸಲ್ ಬಿಡಿಸಿಕೊಳ್ಳಲು ವಿವಿಧ ಬಾಬ್ತುಗಳೆಂದು ಹಂತ ಹಂತವಾಗಿ 5.6 ಲಕ್ಷ ರೂ.ಗಳನ್ನು ಆನ್‌ಲೈನ್ ಮೂಲಕ ಮಹಿಳೆಯಿಂದ ಪಡೆದುಕೊಂಡು ವಂಚಿಸಲಾಗಿದೆ.

ಕೃಷಿ ಉತ್ಪನ್ನಗಳನ್ನು ಮಧ್ಯವರ್ತಿಗಳಿಗೆ ಮಾರಬೇಡಿ

ರೈತ ಮುಖಂಡರ ಸಲಹೆ

ಮೈಸೂರು, ಫೆ.5 (ಎಸ್‌ಪಿಎನ್)– ರೈತರು ಬೆಳೆದ ಕೃಷಿ ಉತ್ಪನ್ನಗಳನ್ನು ಮಧ್ಯವರ್ತಿಗಳಿಗೆ ಕಡಿಮೆ ಬೆಲೆಗೆ ಮಾರಾಟ ಮಾಡಬೇಡಿ, ಸ್ವಲ್ಪ ತಾಳ್ಮೆವಹಿಸಿದರೆ ಉತ್ತಮ ಬೆಲೆ ಸಿಗಲಿದೆ ಎಂದು ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಸಲಹೆ ನೀಡಿದರು.



ಮೈಸೂರು ಕೇರ್ಗಳ್ಳಿಯಲ್ಲಿರುವ ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ಘಟಕ ಉದ್ಘಾಟನೆ.

ಮೈಸೂರು ಹೊರವಲಯದ ಕೇರ್ಗಳ್ಳಿಯಲ್ಲಿರುವ ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ಘಟಕವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರಸ್ತುತ ಶುಂಠಿ ಬೆಳೆಯು ಕ್ವಿಂಟಾಲ್‌ಗೆ 12 ಸಾವಿರದಿಂದ 1 ಸಾವಿರಕ್ಕೆ ಇಳಿಕೆಯಾಗಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ, ಕೇಂದ್ರಕ್ಕೆ ಪತ್ರ ಬರೆದು 7 ಸಾವಿರ ಬೆಂಬಲ ಬೆಲೆ ನೀಡಿ, ಖರೀದಿ ಕೇಂದ್ರ ಆರಂಭಿಸುವಂತೆ ಮನವಿ ಮಾಡಿದೆ.

ಹಾಗಾಗಿ ರೈತರು ತಮ್ಮ ಉತ್ಪನ್ನಗಳನ್ನು ದಲ್ಲಾಳಿಗಳಿಗೆ ಕಡಿಮೆ ಬೆಲೆಗೆ ಮಾರದೇ ಸ್ವಲ್ಪ ಸಮಯ ತಾಳ್ಮೆ ವಹಿಸಬೇಕು. ಮಧ್ಯವರ್ತಿಗಳು, ಬಂಡವಾಳಶಾಹಿಗಳು ರೈತರನ್ನು ಒಕ್ಕಲೆಬ್ಬಿಸುವ ಕಾರ್ಯದಲ್ಲಿ ತೊಡಗಿದ್ದಾರೆ. ಸರ್ಕಾರದ ಇಬ್ಬಗೆ ನೀತಿಗಳು, ರೈತರ ಈ ಪರಿಸ್ಥಿತಿಗೆ ಕಾರಣ. ರಾಜ್ಯದಲ್ಲಿ 20 ಲಕ್ಷ ರೈತರು ಭತ್ತ ಬೆಳೆಯುತ್ತಿದ್ದು, ರಾಜ್ಯ ಸರ್ಕಾರದ ನಿರ್ಲಕ್ಷ್ಯ ಧೋರಣೆಯಿಂದ ಖರೀದಿ ಕೇಂದ್ರಗಳನ್ನು ಇನ್ನು ಆರಂಭಿಸಿಲ್ಲ. ರೈತರು ತುರ್ತು ಹಣಕ್ಕಾಗಿ ಕಡಿಮೆ ಬೆಲೆಗೆ ಮಧ್ಯವರ್ತಿಗಳಿಗೆ ಮಾರಾಟ ಮಾಡಿ ಸಂಕಷ್ಟಕ್ಕೆ ಸಿಲುಕುವುದು ಬೇಡ ಎಂದು ಮನವಿ ಮಾಡಿದರು.

ಈ ವೇಳೆ ಒಕ್ಕೂಟದ ಕೇರ್ಗಳ್ಳಿ ಘಟಕದ ಅಧ್ಯಕ್ಷ ಸತೀಶ್ ಮಾತನಾಡಿದರು. ಒಕ್ಕೂಟದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬರಡನಪುರ ನಾಗರಾಜ್, ತಾಲೂಕು ಅಧ್ಯಕ್ಷ ಪೈಲ್ವಾನ್ ವೆಂಕಟೇಶ್, ಉಪಾಧ್ಯಕ್ಷ ವಾಜಮಂಗಲ ಮಹದೇವ್, ನೀಲಕಂಠಪ್ಪ, ಕೇರ್ಗಳ್ಳಿ ಘಟಕದ ಗೌರವ ಅಧ್ಯಕ್ಷ ನಾಗರಾಜು, ಶಿವಕುಮಾರ, ಬಾಲು, ವಿಜಯೇಂದ್ರ ಮಹದೇವಸ್ವಾಮಿ, ವರಕೋಡು ನಾಗೇಶ, ಮಂಜುನಾಥ, ಉಪಾಧ್ಯಕ್ಷರಾದ ಆರ್.ಬಾಲು, ಬಿ.ಶಿವಕುಮಾರ್, ಸಿ.ಸಂದೀಪ್, ಕಾರ್ಯದರ್ಶಿ ಎಂ.ಅಭಿಷೇಕ್, ಖಜಾಂಚಿ, ಮಂಜುನಾಥ್, ಸಂಘಟನಾ ಕಾರ್ಯದರ್ಶಿ ಹಾಗೂ ಗ್ರಾಮದ ಗ್ರಾಮದ ಮುಖಂಡರಾದ ಬಸವರಾಜ್, ಬಸವಗೌಡ, ಶಿವಪ್ಪ, ಮಲ್ಲೇಶ, ಬಸವರಾಜು, ದೊಳೇಗೌಡ್ರು, ನಾಗಣ್ಣ ಮುಂತಾದವರು ಇತರರಿದ್ದರು.

ಯುವಕನ ಮೇಲೆ ಹಲ್ಲೆ ನಡೆಸಿದ್ದ 8 ಮಂದಿ ಬಂಧನ

ಮೈಸೂರು, ಫೆ5(ಎಸ್‌ಪಿಎನ್)– ಸ್ನೇಹಿತನ ತಂಗಿ ಬಗ್ಗೆ ಅಪಪ್ರಚಾರ ಮಾಡದಂತೆ ಬುದ್ಧಿ ಹೇಳಿದ ಯುವಕನ ಮೇಲೆ ಹಲ್ಲೆ ನಡೆಸಿದ್ದ 8 ಮಂದಿಯನ್ನು ಮೈಸೂರಿನ ವಿಜಯನಗರ ಪೊಲೀಸರು ಬಂಧಿಸಿದ್ದಾರೆ.

ಮೈಸೂರಿನ ಕಳ್ಳ ಶಿವು ಅಲಿಯಾಸ್ ಶಿವಕುಮಾರ್, ಪ್ರಜ್ವಲ್ ಅಲಿಯಾಸ್ ಸ್ಪಾಟ್, ಧನರಾಜ್ ಅಲಿಯಾಸ್ ಮನು, ಹೃಷಿತ್ ಅಲಿಯಾಸ್ ಕುಳ್ಳಿ, ಖಜಾನೆ, ಶರತ್, ಹಾಲುಮಂಜ ಹಾಗೂ ಪವನ್ ಅಲಿಯಾಸ್ ಪಮ್ಮಿ ಬಂಧಿತರು. ಕೆಲವು ದಿನಗಳ ಹಿಂದೆ ಪ್ರಸಾದ್ ಎಂಬಾತನ ತಂಗಿ ವಿರುದ್ಧ ಪ್ರಜ್ವಲ್ ಅಲಿಯಾಸ್ ಸ್ಪಾಟ್ ಅಪಪ್ರಚಾರ ಮಾಡಿದ್ದ ಎನ್ನಲಾಗಿದ್ದು, ಈ ಬಗ್ಗೆ ಪ್ರಸಾದ್ ಸ್ನೇಹಿತ ಆದರ್ಶ್ ನಾಲ್ಕು ತಿಂಗಳ ಹಿಂದೆ ಪ್ರಜ್ವಲ್‌ಗೆ ಬುದ್ಧಿವಾದ ಹೇಳಿದ್ದ. ಈ ಎಚ್ಚರಿಕೆಯನ್ನೇ ದ್ವೇಷವಾಗಿ ಬೆಳೆಸಿಕೊಂಡ ಪ್ರಜ್ವಲ್, ಫೆ.3 ರಂದು ಹೂಟಗಳ್ಳಿಯ ಸಿಗ್ನಲ್ ಬಳಿ ರಾತ್ರಿ ವೇಳೆ ತನ್ನ ಸ್ನೇಹಿತರ ಜೊತೆ ಮಾತನಾಡುತ್ತ ಕುಳಿತಿದ್ದ ಆದರ್ಶ್ ಮೇಲೆ ಪ್ರಜ್ವಲ್ ಮತ್ತು ಸ್ನೇಹಿತರು ಹಲ್ಲೆ ಮಾಡಿದ್ದರು. ಹಲ್ಲೆ ಮಾಡಿದ ಗುಂಪಿನಲ್ಲಿದ್ದ ಕಳ್ಳ ಶಿವು ಅಲಿಯಾಸ್ ಶಿವಕುಮಾರ್ ರೌಡಿಶೀಟರ್ ಆಗಿದ್ದು, ಈತನನ್ನು ಗಡಿಪಾರು ಮಾಡಿ ಮಂಗಳೂರಿಗೆ ರವಾನೆ ಮಾಡಲಾಗಿತ್ತು. ಈ ಶಿಕ್ಷೆಯನ್ನು ಮುಗಿಸಿ ಎರಡು ದಿನಗಳ ಹಿಂದಷ್ಟೇ ಮೈಸೂರಿಗೆ ವಾಪಸ್ ಆಗಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಹೆಲ್ಮೆಟ್ ಧರಿಸದೇ ನಿಯಮ ಉಲ್ಲಂಘನೆ; ಜೀಪ್ ಚಾಲಕನಿಗೆ ದಂಡ ತೆರಲು ನೋಟಿಸ್!

ಮೈಸೂರು, ಫೆ.5–ದ್ವಿಚಕ್ರ ವಾಹನ ಚಾಲನೆ ಮಾಡುವವರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು ಎಂಬುದು ಕಾನೂನು. ಒಂದು ವೇಳೆ ಹೆಲ್ಮೆಟ್ ಧರಿಸದಿದ್ದರೆ 500 ರೂ. ದಂಡ ತೆರಬೇಕಾಗುತ್ತದೆ. ರಾಜ್ಯದೆಲ್ಲೆಡೆ ಪೊಲೀಸ್ ಇಲಾಖೆಯಿಂದ ಎಐ ಕ್ಯಾಮರಾಗಳನ್ನು ಅಳವಡಿಸಿರುವುದರಿಂದಾಗಿ ಈ ಕ್ಯಾಮರಾಗಳು ವಾಹನಗಳ ಮೇಲೆ ಸದಾ ಕಣ್ಣಿಟ್ಟಿರುತ್ತವೆ. ಹೆಲ್ಮೆಟ್ ಧರಿಸದ ದ್ವಿಚಕ್ರ ವಾಹನ ಹಾಗೂ ಸೀಟ್ ಬೆಲ್ಟ್ ಧರಿಸದ ವಾಹನಗಳ ಮಾಲೀಕರ ಮೊಬೈಲ್‌ಗೆ ಪೊಲೀಸ್ ಇಲಾಖೆಯಿಂದ ನೋಟಿಸ್ ಬರುತ್ತದೆ.

ನಾಲ್ಕು ಚಕ್ರ ವಾಹನ ಚಾಲನೆ ಮಾಡುವವರು ಕಡ್ಡಾಯವಾಗಿ ಸೀಟ್ ಬೆಲ್ಟ್ ಧರಿಸಿರಬೇಕು. ಆದರೆ ಮೈಸೂರಿನ ಮಹೀಂದ್ರ ಥಾರ್ (ಕೆಎ 09ಎಂಎಫ್ 7191) ನಾಲ್ಕು ಚಕ್ರ ವಾಹನದ ಮಾಲೀಕರಿಗಂತೂ ಪೊಲೀಸರಿಂದ ಬಂದ ನೋಟಿಸ್‌ನಿಂದಾಗಿ ತಾವು ಸೀಟ್ ಬೆಲ್ಟ್ ಜೊತೆಗೆ ಹೆಲ್ಮೆಟ್ ಕೂಡ ಧರಿಸಬೇಕೇ ಎಂಬ ಗೊಂದಲ ಉಂಟಾಗಿದೆ.

ಕೆಲವೊಮ್ಮೆ ವಾಹನದ ನೋಂದಣಿ ಸಂಖ್ಯೆ ಸರಿಯಾಗಿ ಕ್ಯಾಮರಾದಲ್ಲಿ ಸೆರೆಯಾಗದಿದ್ದಾಗ ತಪ್ಪು ಗ್ರಹಿಕೆಯಿಂದ ಇಂತಹ ನೋಟಿಸ್ ಬರಬಹುದು. ಆದರೆ ಮೈಸೂರಿನ ಮೊಹಮ್ಮದ್ ಮುಷಾಹಿದ್ ಎಂಬುವರ ಮಹೀಂದ್ರ ಥಾರ್ ನಾಲ್ಕು ಚಕ್ರದ ವಾಹನಕ್ಕೆ 3 ಬಾರಿ ಹೆಲ್ಮೆಟ್ ಧರಿಸದೆ ವಾಹನ ಚಾಲನೆ ಮಾಡಿದ ಅಪರಾಧಕ್ಕಾಗಿ ದಂಡ ಕಟ್ಟುವಂತೆ ನೋಟಿಸ್ ರವಾನೆ ಆಗಿ, ಅಚ್ಚರಿ ಮೂಡಿಸಿದೆ. ಅದರಲ್ಲೂ ಒಂದೇ ದಿನ ಒಂದೇ ಸ್ಥಳದಲ್ಲಿ 2 ಬಾರಿ ಮೊಹಮ್ಮದ್ ಮುಷಾಹಿದ್ ಅವರು ಹೆಲ್ಮೆಟ್ ಧರಿಸದೆ ಕಾರು ಚಾಲನೆ ಮಾಡುವ ಅಪರಾಧ ಎಸಗಿದ್ದಾರಂತೆ. ಜ.7ರಂದು ಕೆ.ಆರ್. ನಗರದ ಗರುಡಗಂಭ ಸರ್ಕಲ್‌ನಲ್ಲಿ 2 ಬಾರಿ ಹಾಗೂ 2024ರ ಡಿ.27ರಂದು ಅದೇ ಸರ್ಕಲ್‌ನಲ್ಲಿ ಹೆಲ್ಮೆಟ್ ಧರಿಸದೆ ಕಾರು ಚಾಲನೆ ಮಾಡಿದ್ದಾರೆ. ಅದಕ್ಕಾಗಿ ಅವರು 1500 ರೂ. ದಂಡ ಪಾವತಿಸಬೇಕಾಗಿದೆ. ಅಲ್ಲದೆ ಒಮ್ಮೆ ಸೀಟ್ ಬೆಲ್ಟ್ ಧರಿಸದೇ ಉದಯಗಿರಿ ಸರ್ಕಲ್‌ನಲ್ಲಿ ಚಾಲನೆ ಮಾಡಿದ್ದಕ್ಕೆ 500 ರೂ. ದಂಡ ಪಾವತಿಸುವಂತೆ ತಿಳಿಸಲಾಗಿದೆ. ಇದು ಅವರ ಮೊಬೈಲ್‌ಗೆ ಬಂದ ನೋಟಿಸ್ ಸಂದೇಶ. ಇದರಿಂದ ಗೊಂದಲಕ್ಕೊಳಗಾದ ಅವರು ಪೊಲೀಸರನ್ನು ಸಂಪರ್ಕಿಸಿ ವಿಷಯ ತಿಳಿಸಿದರೆ, ಅವರು ಮೊದಲು ದಂಡ ಕಟ್ಟಿಬಿಡಿ, ಆಮೇಲೆ ನೋಡಿಕೊಳ್ಳೋಣ ಎಂಬ ಪುಕ್ಕಟ್ಟೆ ಸಲಹೆ ನೀಡಿದ್ದಾರಂತೆ.

ಕೇವಲ ಒಂದು ಬಾರಿ ಇಂತಹ ಎಡವಟ್ಟು ನಡೆದಿದ್ದರೆ, ಅದು ತಪ್ಪು ಗ್ರಹಿಕೆಯಿಂದ ಎಂದು ಹೇಳಬಹುದು. ಆದರೆ 3 ಬಾರಿ ಎಐ ಕ್ಯಾಮರಾ ದೃಶ್ಯಾವಳಿ ಆಧರಿಸಿ ಒಂದು ನೋಂದಣಿ ಸಂಖ್ಯೆಯ ನಾಲ್ಕು ಚಕ್ರ ವಾಹನಕ್ಕೆ ಹೆಲ್ಮೆಟ್ ಧರಿಸದೆ ಚಾಲನೆ ಮಾಡಿರುವ ಅಪರಾಧಕ್ಕಾಗಿ ದಂಡ ಕಟ್ಟುವಂತೆ ನೋಟಿಸ್ ಬಂದಿದೆ ಎಂದರೆ ಅದು ತಪ್ಪು ಗ್ರಹಿಕೆಯಿಂದ ಆಗದೇ ಯಾರೋ ದುಷ್ಕರ್ಮಿಗಳು ಮೊಹಮ್ಮದ್ ಮುಷಾಹಿದ್ ಅವರ ಮಹೀಂದ್ರ ಥಾರ್ ವಾಹನದ ಸಂಖ್ಯೆಯನ್ನು ದ್ವಿಚಕ್ರ ವಾಹನಕ್ಕೆ ಅಳವಡಿಸಿಕೊಂಡು ಓಡಾಡುತ್ತಿರಬಹುದು. ಒಂದು ವೇಳೆ ಈ ವ್ಯವಸ್ಥೆ ನಿರ್ವಹಣೆ ಮಾಡುವವರೇ ತಪ್ಪೆಸಗಿರಬಹುದು. ಈ ಬಗ್ಗೆ ಚಿಂತನೆ ಮಾಡುವ ಕಿಂಚಿತ್ ಸಾಮಾನ್ಯ ಜ್ಞಾನವೂ ಕೂಡ 'ಮೊದಲು ದಂಡ ಕಟ್ಟಿಬಿಡಿ' ಎಂದು ಹೇಳಿದ ಪೊಲೀಸ್ ಮಹಾಶಯರಿಗೆ ಇರಲಿಲ್ಲವೇನೋ ಎಂದೆನಿಸುತ್ತದೆ.





ಮಹೀಂದ್ರ ಥಾರ್ ಜೀಪ್ ಚಾಲಕ ಹೆಲ್ಮೆಟ್ ಧರಿಸದೇ ನಿಯಮ ಉಲ್ಲಂಘಿಸಿರುವುದಾಗಿ ಪೊಲೀಸರು ನೀಡಿರುವ ನೋಟೀಸ್.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಮದಗಜರಾಜ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಮಾರ್ಕೋ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ದೇವ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ವಿದಾಮುಯರ್ಚಿ (ತ)	4 ಪ್ರದರ್ಶನಗಳು
ಗಾಯಿತ್ರಿ	
ಮಾರ್ಕೋ (ತ)+ ಮಾರ್ಕೋ (ಕ)	1+4 ಪ್ರದರ್ಶನಗಳು
ರಾಜಕಮಲ್	
ದೇವ (ಹಿಂ)	4 ಪ್ರದರ್ಶನಗಳು
ಸಂಗಂ	
ರಾಯಲ್ (ಕ)	4 ಪ್ರದರ್ಶನಗಳು
ಲಿಡೋ	
ಗಣ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ವಿದಾಮುಯರ್ಚಿ (ಹಿಂ)	4 ಪ್ರದರ್ಶನಗಳು
ಪ್ರಭಾ	
ರಾಜರಾಣಿ(ತ) + ಅಲ್ಲೇ ಡ್ರಾ ಅಲ್ಲೇ ಬಹುಮಾನ (ಕ)	2+2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ವಿದಾಮುಯರ್ಚಿ (ತ): ಬೆ.6.55ಕ್ಕೆ, ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.24ಕ್ಕೆ.
ಸ್ಕ್ರೀನ್ 2	ನೋಡಿದವರು ಏನಂತಾರೆ (ಕ): ಮ.1.15ಕ್ಕೆ, ರುದ್ರ ಗರುಡ ಪುರಾಣ (ಕ): ಸಂ.4.10ಕ್ಕೆ, ರಾ.7.05ಕ್ಕೆ, ವಿದಾಮುಯರ್ಚಿ (ತ): ರಾ.10ಕ್ಕೆ
ಸ್ಕ್ರೀನ್ 3	ಭೂ ಮಂತರ್ (ಕ): ಬೆ.10.45ಕ್ಕೆ, ರಾ.7.15ಕ್ಕೆ, ಕಾಡು ಮಲ್ಲೆ (ಕ): ಮ.1.40ಕ್ಕೆ, ಸ್ಕೈ ಫೋರ್ಸ್ (ಹಿಂ): ಸಂ.4.15ಕ್ಕೆ, ಪೊನ್ಮನ್ (ಮ): ರಾ.10.15.
ಸ್ಕ್ರೀನ್ 4	ಮ್ಯಾಕ್ಸ್ (ಕ): ಮ.1ಕ್ಕೆ, ದೇವ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ರಾ.10.20ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ರಾಯಲ್ (ಕ): ಬೆ.10.40ಕ್ಕೆ, ರುದ್ರ ಗರುಡ ಪುರಾಣ (ಕ): ಮ.1.30ಕ್ಕೆ, ಸಂ.6.45ಕ್ಕೆ, ಮ್ಯಾಕ್ಸ್ (ಕ): ಸಂ.4.15ಕ್ಕೆ, ಕುಜಂತೈಗಲ್ ಮುನ್ನೇತ್ರ ಕಳಗಂ (ತ): ರಾ.9.30ಕ್ಕೆ.
ಸ್ಕ್ರೀನ್ 2	ಫಾರೆಸ್ಟ್ (ಕ): ಮ.1.05ಕ್ಕೆ, ಮ.3.50ಕ್ಕೆ, ರಾಯಲ್ (ಕ): ಸಂ.6.35ಕ್ಕೆ, ಸ್ಕೈ ಫೋರ್ಸ್ (ಹಿಂ): ರಾ.9.30ಕ್ಕೆ.
ಸ್ಕ್ರೀನ್ 3	ಸ್ಕೈ ಫೋರ್ಸ್ (ಹಿಂ): ಬೆ.11ಕ್ಕೆ, ರಾ.7.05ಕ್ಕೆ, ರಾಯಲ್ (ಕ): ಮ.1.25ಕ್ಕೆ, ಡೊಮಿನಿಕ್ ಅಂಡ್ ದಿ ಲೇಡಿಸ್ ಪರ್ಸ್ (ಮ): ಸಂ.4.15ಕ್ಕೆ, ರಾ.9.30ಕ್ಕೆ
ಸ್ಕ್ರೀನ್ 4	ಫಾರೆಸ್ಟ್ (ಕ): ಬೆ.10.40ಕ್ಕೆ, ರಾ.9.20ಕ್ಕೆ, ಭೂ ಮಂತರ್ (ಕ): ಮ.1.30ಕ್ಕೆ, ಸಂ.6.40ಕ್ಕೆ, ಸ್ಕೈ ಫೋರ್ಸ್ (ಹಿಂ): ಸಂ.4.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ಚಳಿಗಾಲದ ರೇಸ್

13ನೇ ದಿನ, ಗುರುವಾರ, 6–2–2025

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 1.30 ಗಂಟೆಗೆ

I. ಸ್ಟಾರ್ ಏಂಜಲ್ ಪ್ಲೇಟ್ ಡಿII–1200 ಮೀ. ರೇಟೆಡ್ 00 ರಿಂದ 25. ಮ.1.30ಕ್ಕೆ
1. ಅರಿಗಾಟೊ 2. ಪೆಸ್ಟಿವ್ ಸ್ಟಾರ್ 3. ಕ್ಲೈಡ್ ಸ್ಟಾರ್

II. ಅಪೆರಿಟಿವೊ ಪ್ಲೇಟ್–1400 ಮೀ. ರೇಟೆಡ್ 20 ರಿಂದ 45. ಮ.2.00ಕ್ಕೆ
1. ಸರ್ವೋತ್ತಮ್ 2. ಐ ದಿ ವೈಂಡ್ 3. ಕೊಯೊಟೆ ಗರ್ಲ್

III ಸ್ಟಾರ್ ಏಂಜಲ್ ಪ್ಲೇಟ್ ಡಿI–1200 ಮೀ. ರೇಟೆಡ್ 00 ರಿಂದ 25. ಮ.2.30ಕ್ಕೆ
1. ಫ್ಲ್ಯಾಷ್ ನಿಸ್ಸಾ 2. ನಾಟಿ ಮೆಥೆಡ್ಸ್ 3. ಡಿ ಗೋಲ್ಡನ್ ಕಪ್

IV. ಇಂಡಿ ಪ್ಲೇಟ್–1200 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1. ಬ್ಯೂಟಿಫುಲ್ ಬ್ಲೂಮ್ 2. ಟು ಹಾಟ್ ಟು ಟಚ್ 3. ನಿಂಬಲ್ ಸ್ಪಿರಿಟ್

V. ಶ್ರೀ ಹರಿಕೋಟಾ ಪ್ಲೇಟ್ ಡಿII– 1100 ಮೀ. ರೇಟೆಡ್ 40 ರಿಂದ 65. ಮ.3.30ಕ್ಕೆ
1. ಸ್ಟ್ರೀಟ್ ಸೆನ್ಸ್ 2. ಇನ್ ಎಫಾಬಲ್ 3. ಇಂಡಿಯನ್ ಗ್ಲೋರಿ

VI. ಏರ್‌ಫೋರ್ಸ್ ಟ್ರೋಫಿ–1200 ಮೀ. 3 ವರ್ಷದ (ಟರ್ಮ್ಸ್). ಸಂ.4.00ಕ್ಕೆ
1. ನ್ಯಾಚುರಲ್ ಲುಕ್ 2. ಫಾಲ್ಕನ್ ಫ್ಯೂರಿ 3. ಬ್ಯಾಡ್ ಬೀಟ್


VII. ಎಲ್ಲೋರಾ ಪ್ಲೇಟ್–1200 ಮೀ. ರೇಟೆಡ್ 80 ಮತ್ತು ಮೇಲ್ವರ್ಗ. ಸಂ.4.30ಕ್ಕೆ
1. ಮಿಸ್ಟಿಕ್ ಬಾಂಡ್ 2. ದಿ ಫ್ಲೈಯಿಂಗ್ ಫೀಟ್ 3. ಸಿ ದಿ ಸನ್

VIII. ಶ್ರೀ ಹರಿಕೋಟಾ ಪ್ಲೇಟ್ ಡಿI– 1100 ಮೀ. ರೇಟೆಡ್ 40 ರಿಂದ 65. ಸಂ.5.00ಕ್ಕೆ
1. ಗ್ರೇಸ್ 2. ಮಿರಾಕ್ಯುಲಸ್ ಗರ್ಲ್ 3. ಶೀಬಾ

ದಿನದ ಅತ್ಯುತ್ತಮ	ಸ್ಟ್ರೀಟ್ ಸೆನ್ಸ್
ಡಬ್ಬಲ್	ಅರಿಗಾಟೊ, ನ್ಯಾಚುರಲ್ ಲುಕ್
ಜಾಕ್‌ಪಾಟ್	4, 5, 6, 7 ಮತ್ತು 8
ಮಿನಿ ಜಾಕ್‌ಪಾಟ್	5, 6, 7 ಮತ್ತು 8
I ಟ್ರಿಬಲ್	1, 2 ಮತ್ತು 3
II ಟ್ರಿಬಲ್	3, 4, ಮತ್ತು 5
III ಟ್ರಿಬಲ್	6, 7, ಮತ್ತು 8
ಎಕ್ಸ್‌ಆಕ್ಟ್	1 ರಿಂದ 8

ಟಿಪ್‌ಸ್ಟರ್ ಪಿಜಿಸಿ

ಪಿ. ನಂದನ್‌ಗೆ ಪಿಎಚ್.ಡಿ



ಮೈಸೂರು, ಫೆ.5– ಡಾ.ಬಿ. ನಾಗರಾಜು ಅವರ ಮಾರ್ಗದರ್ಶನದಲ್ಲಿ ಪಿ. ನಂದನ್ ಅವರು ವಾಣಿಜ್ಯಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ. ಪದವಿಗೆ ಅಂಗೀಕರಿಸಿದೆ.

ಕಳೆದಿದೆ

ಎಂ. ಸಂತೋಷ್‌ಕುಮಾರ್, #21, ಮಹಾಸರೋ ನಿಲಯ, ಪ್ರೈಮರಿ ಸ್ಕೂಲ್ ಎದುರು, ಲಿಂಗಾಂಬುದಿ ಪಾಳ್ಯ, ಮೈಸೂರು, ನನಗೆ ಕುಟುಂಬ ವಿಭಾಗ ಪತ್ರದ ಮೂಲಕ ನನ್ನ ತಾಯಿ ಸರೋಜಮ್ಮ @ ಸರೋಜ ರವರಿಂದ ದಸ್ತಾವೇಜು ಸಂಖ್ಯೆ: **TNP-01-4011/2014-15**, ಸಿಡಿ ನಂಬರ್ 80ರಂತೆ ಸರ್ವೆ ನಂ. 148/1, ಹಾಗೂ 164 ರ ಜಮೀನು ನೋಂದಣಿ ಯಾಗಿದ್ದು, ಸದರಿ ದಸ್ತಾವೇಜು ಜೆರಾಕ್ಸ್ ಮಾಡಿಸಲು ಹೋದಾಗ ಕಳೆದುಹೋಗಿದೆ. ಸಿಕ್ಕಿದವರು ಸಂಪರ್ಕಿಸಿ:

Mob: 9902288226

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ



PUBLIC NOTICE

Notice is hereby given that **SRI. PREMNATH N YADGIRKAR,** son of Late Nagendrappa, is desirous to sell the under mentioned property to my client and any person or persons claiming any interest on the under mentioned property or any part thereof, is hereby required to communicate the same to me with documentary evidence at my office, situated at **DOOR No.2765/1A D13/A1, "KEYANS", 5TH MAIN ROAD, V.V. PURAM (V.V. MOHALLA), MYSORE – 570002,** within 10 (Ten) days from the date of this publication, as otherwise the said sale will be completed without any reference or regard to any such purported claim or interest, which shall be deemed to have been waived for all intents and purposes.

SCHEDULE PROPERTY

Residential Site No.32, formed in Survey No.38/5, measuring 1 Acre 33 Guntas,situated at Manuganahalli Village, Bilikere Hobli, Mysore Taluk, site measuring East to West: 9.14 Meters and North to South: 12.2 Meters, totally measuring 111.51 Square Meter and bounded on: East: Site No.33, West: Site No. 31, North: 9 Meter Road and South: Private Property.

Sd/- **Dhirendra Kumar R. Mehta,**
Advocate,
KEY-ANS LAW SOLUTIONS
Date: 27.01.2025, Place: Mysore



BEFORE THE HON'BLE III ADDITIONAL CIVIL JUDGE AND JMFC AT MYSURU O.S. No. 369/2023

Plaintiff : Marigowda B S/o. Late. Boregowda, Aged about 57 years, R/o. D. No: 490 EWS, Lakshmikantha Nagara Hebbal 1st Stage, Devaraja Mohalla, Mysuru. V/s

Defendants : Raghu K.G. S/o. Late. Ganesha Aged about 30 years R/o. D. No: 298, LIG 4th Cross, Subramanya Nagara, Hebbal, 3rd Stage, Mysuru

PUBLIC NOTICE

The Plaintiff has filed the above Case in relation to the below mentioned Plaint Schedule Property against the Defendant for the relief of Permanent Injunction along with other reliefs, initially the Plaintiff took Suit Summons to the Defendant, through court as well as RPAD, but the same were remained un-served on the Defendant, as such, the Defendant is hereby called upon to appear before this Hon'ble Court on 28.03.25, either personally or through a pleader, otherwise the matter will be decided in your absence, as per law.

SCHEDULE : The land bearing Sy. No: 98/3, totally measuring 0.27 Guntas, out of which 0.10 ½ Guntas, situated at Koorgalli, Yelwala Hobli, Mysuru Taluk and District, bounded on:- East by: Basement and Road and also remaining land existing in the land bearing Sy. No: 98/3 , West by: Vacant Site of Ningappa and House of Chennakeshava North by: House of Prabhakar and Benne Basavaraju , South by: Road

Given under my hand and the seal of the court, This 4th day of February 2025

By order of the Court
Sd/- Chief Administrative Officer Civil Judge and JMFC, Mysuru

ADVOCATE FOR PLAINTIFF
Vijayashree Law Associates,
Sd/- M.C. Dileepkumar B.Com., L.L.B.,
KAR 2541/1999
No. K-8/1 & K-8/1A, 2nd Floor, V.V. Main Road, K.R. Mohalla, Mysore-24.

WANTED


FOR REPUTED COMPANY IN HOOTGALLI INDUSTRIAL AREA

1. **SENIOR ACCOUNTANT :** Female Candidates of B.Com/M.Com with minimum 7 years of experience with Knowledge of Tally. Preparing financial documents such as invoices, bills and accounts payable and receivable Processing business exercises and managing day to day transactions

2. **ACCOUNTS MANAGER :** We're looking for a female dedicated and personable Accounts manager to maintain client accounts and serve as our main point of contact. The ideal candidates should have atleast 10+ years of experience and should also be proficient with audits, spreadsheets, and other productivity software

Interested candidates share your Resumes: peopledomain05@gmail.com





ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ

ರೇಷ್ಮೆ ನೂಲು ತೆಗೆಯುವ ಘಟಕ: ತಿ.ನರಸೀಪುರ.
Mysore Silk
ಮೈಸೂರು ಜಿಲ್ಲೆ–571124,
ಫೋನ್:08227–261226,

ಸಂಖ್ಯೆ: ಕೆ.ಎಸ್.ಐ.ಸಿ/ರೇನೂಘ/ತಿನಪು/2024–25/517 ದಿ: 31.01.2025

ಕಿಟ್ಟದ ಜೊತೆಗೆ ಕಲ್ಲಿದ್ದಲು ಬೂದಿಯ ಟೆಂಡರ್ ಹಾಗೂ ಹರಾಜು ಪ್ರಕಟಣೆ

ರೇಷ್ಮೆ ನೂಲು ತೆಗೆಯುವ ಘಟಕ, ತಿ.ನರಸೀಪುರದಲ್ಲಿ ಲಭ್ಯವಿರುವ ಕಿಟ್ಟಿ ಮತ್ತು ಕಲ್ಲಿದ್ದಲು ಬೂದಿಯನ್ನು ಮೆಟ್ರಿಕ್ ಟನ್‌ನ ಆಧಾರದ ಮೇಲೆ ಖರೀದಿಸಲು ಇಚ್ಛೆ ಉಳ್ಳವರಿಂದ ಟೆಂಡರುಗಳನ್ನು ಆಹ್ವಾನಿಸಲಾಗಿದೆ. ಘಟಕದಲ್ಲಿ ಸಂಗ್ರಹವಾಗಿರುವ ಕಲ್ಲಿದ್ದಿಲಿನ ಬೂದಿಯ ಅಂದಾಜು ಪ್ರಮಾಣ, ನಿಗದಿಪಡಿಸಿದ ಇ.ಎಂ.ಡಿ ಮತ್ತು ಹರಾಜು ದಿನಾಂಕಗಳನ್ನು ಈ ಕೆಳಕಂಡಂತಿರುತ್ತದೆ.

ಕ್ರ.ಸಂ.01 ಘಟಕದ ಹೆಸರು: ರೇಷ್ಮೆ ನೂಲು ತೆಗೆಯುವ ಘಟಕ ತಿ.ನರಸೀಪುರ **ಅಂದಾಜು ಪರಿಮಾಣ:** 350 ಮೆಟ್ರಿಕ್ ಟನ್ **ನಿಗದಿತ ಇ.ಎಂ.ಡಿ. ರೂ.ಗಳಲ್ಲಿ:** 25,000/– **ಟೆಂಡರ್ ಮತ್ತು ಹರಾಜಿನ ದಿನಾಂಕ:** 15.02.2025

ಇಚ್ಛೆಯುಳ್ಳ ಪಾನ್‌ಕಾರ್ಡ್ ಹೊಂದಿರುವ ಬಿಡ್ಡುದಾರರು ಟೆಂಡರ್ ಫಾರಂಗಳನ್ನು ಮತ್ತು ನೀತಿ ನಿಯಮಾವಳಿಗಳ ಪ್ರತಿಗಳನ್ನು ಸಂಬಂಧಪಟ್ಟ ಘಟಕದ ಪ್ರಧಾನ ವ್ಯವಸ್ಥಾಪಕರಿಂದ ಮೇಲೆ ಸೂಚಿಸಿರುವ ದಿನಾಂಕದೊಳಗೆ ಬೆಳಿಗ್ಗೆ: 10.00 ಗಂಟೆಯೊಳಗೆ ರೂ.200.00/–ಗಳ ಅರ್ಜಿ ಶುಲ್ಕ (ತೆರಿಗೆ ಸೇರಿ) ಪಾವತಿ ಮಾಡಿ ಪಡೆಯತಕ್ಕದ್ದು, ಭರ್ತಿ ಮಾಡಿದ ಟೆಂಡರ್‌ಗಳನ್ನು Karnataka Silk Industries Corporation Ltd., ಹೆಸರಿಗೆ ರೂ.25,000/–ಗಳ ಡಿ.ಡಿ.ಯನ್ನು ಅಥವಾ ಘಟಕದಲ್ಲಿ ನಗದು ಪಾವತಿಸಿದ ರಶೀದಿಯನ್ನು ಲಗತ್ತಿಸಿ ದಿ: 15.02.2025 ರಂದು ಬೆಳಿಗ್ಗೆ 11.30 ಗಂಟೆಯೊಳಗಾಗಿ ಸಲ್ಲಿಸತಕ್ಕದ್ದು. ಅದೇ ದಿನ ಮಧ್ಯಾಹ್ನ 12.00 ಗಂಟೆಗೆ ಹರಾಜು ಮಾಡಲಾಗುವುದು ಹರಾಜು ನಡೆದ ತಕ್ಷಣ ಟೆಂಡರ್‌ಗಳನ್ನು ತೆರೆಯಲಾಗುವುದು. ಟೆಂಡರ್ ಫಾರಂಗಳನ್ನು ದಿನಾಂಕ: 10.02.2025 ರಿಂದ ಘಟಕದಲ್ಲಿ ವಿತರಿಸಲಾಗುವುದು. ಈ ಬಗ್ಗೆ ಯಾವುದೇ ವಿವಾದ ಬಂದರೆ ನಮ್ಮ ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನವೇ ಅಂತಿಮವಾಗಿರುತ್ತದೆ.

ಸಹಿ/– ಪ್ರಧಾನ ವ್ಯವಸ್ಥಾಪಕರು.

DIPR/DDMYS/1229/KSMCA/858/2024-25

IN THE COURT OF THE HON'BLE VTH ADDITIONAL DISTRICT JUDGE, AT MYSURU P & SC. No: 4/2025

Petitioner : Sri. Mallesha P & Anr V/S Respondents : NIL

PUBLIC NOTICE

Notice is hereby given to the general public or any interested person or to whomsoever it may concern that the Petitioners have filed the above suit for PROBATE CERTIFICATE with respect to the WILL executed by Late. Sampath Kumar S, S/o. Dr. H. Srinivas on 03/01/2024, registered at Office of Sub Registrar vide., Book No. 3, Document No. MYS-3-00614-2023-24, on. 04/01/2024 before the Sub-Registrar, at Office of Sub-Registrar, Mysore South, Mysore District, Mysore for his all his movable and immovable properties. In the said WILL Mr. Chandan Kumar M, S/o Muddu Madaiah, is named as the only beneficiary for all the movable & immovable properties of the Testator. This Notice is caused to the general public or any interested persons to let them know about the above-mentioned Probate petition which is posted for next HEARING on 27/02/2025 AT 11.00 AM, if anyone is an interested/affected party or has any objections, then such person may appear. In the event of failure of the appearance of any person, it is deemed that there is no opposition/objection to the above-mentioned probate petition and the court will proceed as per the Law for the time being in force.

SCHEDULE : Item No. 1: House situated at Mysuru City, KR Vanam, 4 Cross, House No. 1500/27, CH 34, Document No. 22936268, Property No. 14-2-512-1500-27 measuring East to West 40 Feet and North to South 58 Feet, a duplex house with three bedroom, and bounded on; East by: Private Site., West by: Private Site, North by: Government Road, South by: Government Passage.

Item No. 2: Dilapidated House situated in Mysuru City, K R Vanam, 4th Cross, House No. 1500/35, CH-26, Document No. 28444079, Property No. 14-2-514-140, New Ward No. 56, measuring East to West 40 Feet and North to South 60 Feet and is bounded on;

East by: Private Site, West by: Private Site, North by: Government Road, South by: Government Passage.

Item No. 3. Movable assets of the deceased with the consists of two saving accounts and one D-Mate account and the details of the same are as follows;

a. Saving Account in the name of Testator, Saving Account No. 40951121492, and a Locker with gold jewelries of the mother of Testator, at State Bank of India, Krishnamurthypuram Branch, Mysore.


b. Saving Account in the name of Testator, Saving Account No. 10662100049510, at Punjab National Bank, Devaraj Urs Road Branch, Mysore.

c. D-MATE account at Punjab National Bank, in the name of Testator, through Angel One Limited, DPID-12033200, Client ID: 79971852, DP in Ref No. AB14859112, PQA Master ID: 2203320000000014, Angel Broking Limited, POA Ref No. M835025, First Holder.

By order of the Court
Sd/- Chief Administrative Officer District & Session Court, Mysuru

Sd/- Sri. Naveen Kumar.N B.A, LL.B
Advocate , PNN Legal Associates
No. 155/5, BS Complex, 3rd Floor, 12th Cross, 2nd Main, Jayanagar, Mysuru - 570014

Place: Mysuru , Date: 30/01/2025



Public Notice

This is to notify that the Anjaneya Swamy Temple and the property around it, which includes Tulasi Katte and a well which belongs to Tulasi Katte K.Nanjundayya Trust Management, located at No.1663/D7, 1" Cross, Hanumantha Rao Road, Makkaji Chowka, Devaraja Mohalla, Mysuru, has been maintained, restored by J. Hanumanthaiah and his son H.Anantharamu from 60-65 years and currently it is been taken care by H.Anantharamu's daughter Yogitha A., and for their livelihood they are doing bicycle business.

There has been threatening calls received stating that above mentioned property would be seized and demolished and create an atmosphere of unrest in the minds of people who are taking care of it.

This above mentioned property belongs to J. Hanumanthaiah his son H.Anantharamu and his daughter A. Yogitha and its been informed that no one will be deal with in this regard.

Sd/- Mahadevaswamy.M.S BA LLB, Advocate, KAR 223/2009, No,2858/1, Room No 5, 2nd Floor, 3rd cross, Jayanagara, Mysuru - 570014, Mob: 9902313288

PUBLIC NOTICE

This is inform the General Public that my clients (1) ADITI CHANDRU, D/o. Late. Chandru, (2) SHREYAS CHANDRU S/o.Late. Chandru.D.G, since minor Represented by his mother and Natural Guardian SMT.PAVITHRA.P. all are R/at No.14, Kanthur Road, Alanahalli Layout, Shrinagargiri Nilaya, Opp: Ganapathi Temple, Mysure have filed a suit in O.S.No.894/2017 on the file of the V Addl. Senior Civil Judge and J.M.F.C, at Mysuru against (1) S.Guruswamy (2) Smt.Janakamma (3)D.G.Ravikumar, (4) Shilpa.D.G. (5) L.R.s. of Madhu (a) Smt.Shivamma (b) Malathi (c) Mahesh and (d) Sri. M.Desi seeking the relief of partition and separate possession in respect of the suit schedule properties, the said case is pending consideration, during the period of pendency of the above suit, the defendants above named are attempted to alienate the suit schedule properties in favour of prospective purchasers/general publics If any person/s proceed to purchase below mentioned properties, they will be doing so at their own risk and cost.

SCHEDULE PROPERTIES

ITEM No. 1 :- All that piece and parcel of the Property Site No.14A, Property NO.45,46,47/164, measuring 67x40 feet, situated at Alanahalli Extension, Mysuru City Corporation constructed Ground, First and Second floors, bounded on the :

East by : Property bearing No.15, **West by :** Property bearing No.30, **North by :** Property of Third Person, **South by :** Road.

ITEM No. 2 :- All that piece and parcel of the property bearing Junger No.799, Old Property No.747/6A-5, New Property No.747/5, measuring 60x40 feet, situated at Alanahalli Grama Panchayath, Giridarshini Layout, Mysuru, constructed two floor building, residential and shops bounded on the :-

East by : private property, **West by :** Property bearing No.4, **North by :** T.Narasapura Road, **South by :** Road.

ITEM No. 3 :- All that piece and parcel of the property bearing Sy.NO.1, Block -5, measuring 7 acres 18 guntas, situated at Kuruhatti Kaval Village, Chikkaiahna Chatra Hobli, Nanjanagudu Taluk Mysuru District, bounded on the :-

East by : Property bearing Sy.No.1/Block-4, **West by :** Property bearing Sy.No.1/Block-12 And property belongs to Doddaputtaiah, Raju and Siddegowda. **North by :** Property bearing Sy.No.1/Block-2. **South by :** Property bearing Sy.No.1 /Block-6.

ITEM No. 4 :- All that piece and parcel of the property bearing Sy.No.1, Block-4, measuring 6 acres 35 guntas, situated at Kuruhatti Kaval Village, Chikkaiahna Chatra Hobli, Nanjanagudu Taluk Mysuru District, bounded on the :-

East by : Property bearing Sy.No.1/Block-5, **West by :** Survey Inam Tumbunerale Ghadi, **North by :** Property bearing Sy.No.1/Block-3, **South by :** Property bearing Sy.No.1 /Block-7.

ITEM No. 5 :- All that piece and parcel of the property bearing Sy.NO.1, Block -2, measuring 10 acres, situated at Kuruhatti Kaval Village, Chikkaiahna Chatra Hobli, Nanjanagudu Taluk Mysuru District, bounded on the :-

East by : Property bearing Sy.No.1/Block-3, **West by :** Property bearing Sy.No.1/Block-11 And property belongs to Doddaputtaiah, Raju and Siddegowda, **North by :** Property bearing Sy.No.1/Block-1, **South by :** Property bearing Sy.No.1 /Block-5.

ITEM No. 6:- All that piece and parcel of the property bearing Sy.NO.1, Block -17, measuring 7 acres 11 guntas, situated at Kuruhatti Kaval Village, Chikkaiahna Chatra Hobli, Nanjanagudu Taluk Mysuru District, bounded on the :-

East by : Banjaru Property, **West by :** Varana and Hoskote Road, **North by :** Property belongs to R.Chandan & Nusana Bayana Halli Ghadi, **South by :** Banjaru Property;

ITEM No. 7 :- All that piece and parcel of the property bearing Site NO.60/A, 61, 62 measuring East to West: 30 feet North to South: 17 feet, having Bar and Restaurant by name and style as SHILPA BAR AND RESTAURANT situated at Yeraganahalli Dora, Nazarbad Mahal, Mysuru City, Mysuru.


ITEM No. 8 :- All that piece and parcel of the property bearing Sy.No.12/2, measuring 0.03 guntas, Sy.No.13/3, measuring 0.18 guntas, Sy.No.13/4, measuring 0.15 guntas, situated at Puttegowdana Doddi Village, Varuna Hobli, Mysuru Taluk and District, having common boundaries of three survey Numbers:-

East by : Property belongs to Smt.Shivanagamma, **West by :** Property bearing Sy.No.13/1 and pathway, **North by :** T.Narasapura and Mysuru Road, **South by :** Property bearing Sy.No.13/1,

ITEM No. 9 :- All that piece and parcel of the property bearing Sy.No.7/4, measuring 4 acres 27 guntas, situated at Doddagere Village, Varuna Hobli, Mysuru Taluk, Mysuru District, bounded on the :-

East by : Garden of Bujja Balaswamy, **West by :** Property belongs to Mallaiah, **North by :** Property belongs to Rudrashetty, **South by :** Water Channel.

G.N. RAMESH, Advocate
No.39/2, 3rd Floor, ASVNV Bhavan, Opp: SBI Head Office, K.R. Road, Bengaluru-560 009. M. 99805 25282



ಕೇಂದ್ರೀಯ ವಿದ್ಯಾಲಯ ಬಿ ಆರ್ ಬಿ ಎನ್ ಎಮ್ ಪಿ ಎಲ್ ಮೈಸೂರು
ನೋಟ್ ಮುದ್ರಣ ನಗರ, ಬಿ ಆರ್ ಬಿ ಎನ್ ಎಮ್ ಪಿ ಎಲ್ ಕ್ಯಾಂಪಸ್, ಮೈಸೂರು - ೫೭೦೦೦೩
(ಭಾರತ ಸರ್ಕಾರದ ಶಿಕ್ಷಣ ಸಚಿವಾಲಯದ ಅಡಿಯಲ್ಲಿ ಬರುವ ಸ್ವಾಯತ್ತ ಸಂಸ್ಥೆ)
केंद्रीय विद्यालय बी आर बी एन एम पी एल , मैसूरु
नोट मुद्रण नगर , बी आर बी एन एम पी एल कैम्पस, मैसूरु – ५७०००३
(शिक्षा मंत्रालय, भारत सरकार के अधीन एक स्वायत्त संस्थान)
KENDRIYA VIDYALAYA BRBNMPL, MYSURU
NOTE MUDRAN NAGAR, BRBNMPL CAMPUS, MYSURU 570003
(Autonomous Organization under the Ministry of Education, Govt. of India)
ई-मेल / Email: kvbrbmys@gmail.com
☏: 0821 – 2971510 वेबसाइट /Website: https//:brbnmplmysuru.kvs.ac.in

केवि कोड /KV Code: 2381 सीबीएसई स्कूल नं / CBSE School No: 49204
यूडीआईएसई नं. / UDISE No: 29260805606 सीबीएसई संबद्धता नं / CBSE Affiliation No.: 800154

VACANCY FOR STAFF RECRUITMENT

Kendriya Vidyalaya, BRBNMPL Mysore requires the following category of staff on purely Temporary/Contractual basis for the Academic Session 2025-26.

Proposed date of Walk-in-Interview

SL NO	Post	Date
1.	TGT(ENGLISH,MATHS,SCIENCE, SOCIAL SCIENCE, HINDI & SANSKRIT) AND PRIMARY TEACHER	10th February 2025
2.	TGT Kannada, TGT ART education, TGT Work Experience, Sports Coach, Computer Instructor, Special Educator, PRT Music	11th February 2025

1. Reporting time/Registration of eligible candidates: 09.00 AM to 11 AM.
2. Candidates should bring one passport size photo and photocopy of educational qualifications.
3. For the Details regarding the Eligibility, Remuneration & Conditions of Appointment etc. please visit school website https://brbnmplmysuru.kvs.ac.in/

Sd/-
Principal